ಶ್ರೀಹನುಮಭೀಮ ಸುಮಧ್ವಹಂಸಾಂತರ್ಯಾಮಿನ್ ಶ್ರೀನರಹರಿ ರಾಮಕೃಷ್ಣವೇದವ್ಯಾಸಾಯ ನಮಃ

ಶ್ರೀಮದ್ರಾಘವೇಂದ್ರ ಗುರ್ವಂತರ್ಗತ ಭಾರತೀರಮಣ ಹನುಮಭೀಮಮಧ್ವಹಂಸಾಂತರ್ಯಾಮಿನ್

ಶ್ರೀಲಕ್ಷ್ಮೀ ಹಯಗ್ರೀವಾಯ ನಮಃ

ಈ ಪ್ರತಿಯಲ್ಲಿ ಪರಮಪೂಜ್ಯ ಶ್ರೀ ಸತ್ಯಧ್ಯಾನತೀರ್ಥರು ಬರೆದಿರುವ ಶ್ರೀಗೀತಾಪ್ರತಿಪದಾರ್ಥಚಂದ್ರಿಕಾ, ಶ್ರೀರಾಘವೇಂದ್ರತೀರ್ಥರು ರಚಿಸಿರುವ ಶ್ರೀಗೀತಾರ್ಥ ಸಂಗ್ರಹಃ (ಶ್ರೀಗೀತಾವಿವೃತ್ತಿ) ಮತ್ತುಮೈಸೂರಿನ ದಿವಂಗತ ಶ್ರೀ ಹೆಚ್. ಎಸ್. ಸುಬ್ಬರಾಯರು ರಚಿಸಿರುವ ಗೀತಾರ್ಥಸಂಗ್ರಹವು ಬರೆದಿರುತ್ತೆ. ಬರೆಯಲು ನಿರ್ವಿಘ್ನತೆಯನ್ನು ಕೊಡಲು ಶ್ರೀಗಣೇಶಾಂತರ್ಗತ ಶ್ರೀಮಧ್ವಾಂತರ್ಯಾಮಿನ್ ಶ್ರೀವಿಶ್ವಂಭರ ಮೂರ್ತಿಯನ್ನುನಮಸ್ಕರಿಸುತ್ತೇನೆ.

॥ಹರಿಃ ಓಂ ॥ಶ್ರೀಮದ್ಭಗವದ್ಗೀತಾ

# ಮೊದಲನೆಯ ಅಧ್ಯಾಯ

ಧೃತರಾಷ್ಟ್ರ ಉವಾಚ:

ಶ್ರೀಓಂ ಧರ್ಮಕ್ಷೇತ್ರೇ ಕುರುಕ್ಷೇತ್ರೇ ಸಮವೇತಾ ಯುಯುತ್ಸವಃ॥
ಮಾಮಕಾಃ ಪಾಂಡವಾಶ್ಚೈವ ಕಿಮಕುರ್ವತ ಸಂಜಯ॥1॥

ಶ್ರೀ ಹೆಚ್. ಎಸ್.ಃಸಂಜಯಾ! ಧರ್ಮಸಾಧನವಾದ ಕುರುಕ್ಷೇತ್ರದಲ್ಲಿ ಯುದ್ಧಕ್ಕೋಸ್ಕರವಾಗಿ ಮಿಳಿತರಾದ ನಮ್ಮವರೂ ಮತ್ತು ಪಾಂಡವರೂ ಸಹ ಏನು ಮಾಡಿದರೆಂದು ಮೊದಲು ಧೃತರಾಷ್ಟ್ರನು ಪ್ರಶ್ನಿಸಿದನು.

ಈ ಶ್ಲೋಕಕ್ಕೆ ಆಧ್ಯಾತ್ಮವಾಗಿಯೂ ಅರ್ಥವಿರುವುದು:-

ಕುರುಕ್ಷೇತ್ರೇ= ಸತ್ಕರ್ಮಾನುಷ್ಠಾನ ಮಾಡಲು ಸಾಧನಭೂಮಿಯಾದ ಭರತ ಖಂಡದಲ್ಲಿಅದರಲ್ಲೂ, ಧರ್ಮಕ್ಷೇತ್ರೇ= ಜ್ಞಾನಾದಿ ಮಹಾ ಪುಣ್ಯಸಾಧನವಾದ ಮನುಷ್ಯದೇಹದಲ್ಲಿ, ಯುಯುತ್ಸವಃ= ಈಜೀವನು ನಮ್ಮವನೆಂದೂ ತಮ್ಮವನೆಂದೂ ಯುದ್ಧ ಮಾಡಲು ಇಚ್ಛಿಸುವವರಾಗಿ, ಸಮವೇತಾಃ= ಒಂದೇ ಶರೀರದಲ್ಲಿ ಮಿಳಿತರಾದ, ಮಾಮಕಾಃ= ನನ್ನಂತೆ ಕುರುಡರಾದ ನನ್ನ ಮಕ್ಕಳು ಎಂದರೆ ಅಜ್ಞಾನಿಗಳಾದ ಕಲ್ಯಾದಿ ದೈತ್ಯರೂ, ಪಾಂಡವಾಶ್ಚೈವ=ಶುಭ್ರರಾದ ದೇವತೆಗಳೂ ಕೂಡ, ಕಿಮಕುರ್ವತ =ಸೇರಿ ಏನುಮಾಡಿದರು? ಎಂದರೆ ಅರ್ಜುನನೆಂಬ ಜೀವನನ್ನು ಸನ್ಮಾರ್ಗದಲ್ಲಿ ಪ್ರೇರಿಸಿದರೇ ದುರ್ಮಾರ್ಗದಲ್ಲಿ ಎಳೆದೊಯ್ದರೇ ಎಂದರೆ ಅರ್ಜುನನು ಮೋಹಾವೃತನಾಗಿ ಅಧಿಕವಾಗಿ ಸಂಸಾರದಲ್ಲೇ ಬದ್ಧನಾದನೇ ಅಥವಾ ನಷ್ಟಮೋಹನಾಗಿ ಕೃಷ್ಣ ಭಕ್ತಿಮಾರ್ಗವನ್ನು ಅವಲಂಬಿಸಿದನೇ ಎಂದು ಅಭಿಪ್ರಾಯ.

(ಗೀ.ಪ್ರ.ಚಂ) ಧರ್ಮಕ್ಷೇತ್ರೇ, ಕುರುಕ್ಷೇತ್ರೇ, ಸಮವೇತಾಃ, ಯುಯುತ್ಸವಃ, ಮಾಮಕಾಃ, ಪಾಂಡವಾಃ, ಚ, ಏವ, ಕಿಂ, ಅಕುರ್ವತ, ಸಂಜಯ॥

ಹೇ ಸಂಜಯ= ಎಲೈ ಸಂಜಯನೇ! , ಧರ್ಮಕ್ಷೇತ್ರೇ=ಧರ್ಮಭೂಮಿಯಾದ, ಕುರುಕ್ಷೇತ್ರೇ= ಕುರುಕ್ಷೇತ್ರದಲ್ಲಿ, ಯುಯುತ್ಸುವಃ= ಯುದ್ಧಮಾಡುವುದಕ್ಕೋಸ್ಕರ ಇಚ್ಛೆಯುಳ್ಳವರಾಗಿಯೇ (ಸಂತಃ ಏವ), ಸಮವೇತಾಃ= ಸೇರಿದಂಥಹ, ಮಾಮಕಾಃ= ನನ್ನಸಂಬಂಧಿ ಗಳಾದ ದುರ್ಯೋಧನಾದಿಗಳು, ಚ=ಮತ್ತು, ಪಾಂಡವಾಃ= ಪಾಂಡುರಾಜನ ಮಕ್ಕಳಾದ ಧರ್ಮರಾಜನೇ ಮೊದಲಾದವರು, ಕಿಂ= ಏನು, ಅಕುರ್ವತ= ಮಾಡಿದರು.

ಗೀತಾ ವಿವೃತ್ತಿಃ ಶ್ರೀಹನುಮದ್ಭೀಮಸುಮಧ್ವಹಂಸಾಂತರ್ಯಾಮಿನ್ ಶ್ರೀನರಹರಿರಾಮಕೃಷ್ಣವೇದವ್ಯಾಸಾತ್ಮಕ ಶ್ರೀಲಕ್ಷ್ಮೀಹಯಗ್ರೀವಾಯ ನಮಃ॥ ಶ್ರೀಮದ್ರಾಘವೇಂದ್ರತೀರ್ಥವಿರಚಿತ ಗೀತಾವಿವೃತ್ತಿಃ॥

ಓಂ॥ಲಕ್ಷ್ಮೀನಾರಾಯಣಂ ನತ್ವಾ ಪೂರ್ಣಬೋಧಾನ್‌ಗುರೂನಪಿ।
ಕುರ್ಮಃ ಶ್ರೀಕೃಷ್ಣಗೀತಾಯಾ ಭಾಷ್ಯಾದ್ಯುಕ್ತಾರ್ಥಸಂಗ್ರಹಮ್॥

''ಸ್ತ್ರೀಶೂದ್ರಬ್ರಹ್ಮಬಂಧೂನಾಂ ತ್ರಯೀ ನ ಶ್ರುತಿಗೋಚರಾ। ಇತಿ ಭಾರತಮಾಖ್ಯಾನಂ ಕೃಪಯಾ ಮುನಿನಾ ಕೃತಂ॥ ಇತಿ ಭಾಗವತೋಕ್ತ್ಯಾ ವೇದಾರ್ಥಜ್ಞಾನಾನಧಿಕಾರಿಣಾಂ ಸ್ತ್ರೀಶೂದ್ರಾದೀನಾಂ ಧರ್ಮಜ್ಞಾನದ್ವಾರಾ ಮೋಕ್ಷೋ ಭವೇದಿತಿ ಭಗವಾನ್ ವೇದವ್ಯಾಸಃ ಸಂಭವಸಭಾಽರಣ್ಯವಿರಾಟೋದ್ಯೋಗಭೀಷ್ಮದ್ರೋಣಕರ್ಣಶಲ್ಯ- ಗದಾಸೌಷುಪ್ತಿಕಶಾಂತ್ಯಾ-ನುಶಾಸನಿಕಾಶ್ವಮೇಧಿಕಮೌಸಲಮಹಾಪ್ರಸ್ಥಾನಸ್ವರ್ಗಾರೋಹಣಭವಿಷ್ಯತ್ಪರ್ವ- ಭೇದೇನಾಷ್ಟಾದಶಪರ್ವಾತ್ಮಕಂ ಭಾರತಂ ಕೃತ್ವಾ ತತ್ರ ಭೀಷ್ಮಪರ್ವಣಿ ಭಾರತಪಾರಿಜಾತಮಧುಭೂತಾಂ ಸರ್ವ ಭಾರತಾರ್ಥಸಂಗ್ರಹಭೂತಾಂ ಶ್ರೀಕೃಷ್ಣಾರ್ಜುನ ಸಂವಾದರೂಪಾಂ ಭಗವದ್ಗೀತಾಂ ನಿಬಬಂಧ। ತತ್ರ ಪೂರ್ವಷಟ್ಕೇ ಜ್ಞಾನೋಪಾಯೋಕ್ತಿ। ದ್ವಿತೀಯ ಷಟ್ಕೇ ಸಾಧನೋಕ್ತಿ। ತೃತೀಯ ಷಟ್ಕೇ ಪ್ರಾಗುಕ್ತಸ್ಯ ಪ್ರಪಂಚನಂ ಕ್ರಿಯತ ಇತಿ ವಿವೇಕಃ। ತತ್ರಾದ್ಯಾಧ್ಯಾಯೋ ದ್ವಿತೀಯೇ ಕತಿಪಯ ಶ್ಲೋಕಸ್ಯ ಕೃಷ್ಣೇನಾರ್ಜುನಬೋಧನೇ ಪ್ರಸಕ್ತಿ ಸಂಪಾದನಾಯ ಪ್ರವೃತ್ತಾಃ। ತತ್ರಾಯಮರ್ಥಃ। ಧೃತರಾಷ್ಟ್ರ ಉವಾಚ। ಕಿಮಿತ್ಯಾಹ। ಧರ್ಮೇತಿ। ''ಧರ್ಮಕ್ಷೇತ್ರೇ ಕುರುಕ್ಷೇತ್ರೇ ಸಮವೇತಾ ಯುಯುತ್ಸವಃ॥ ಮಾಮಕಾಃ ಪಾಂಡವಾಶ್ಚೈವ ಕಿಮಕುರ್ವತ ಸಂಜಯ॥1॥'' ಧರ್ಮ- ಸಾಧನಭೂಮೌ ಕುರುಕ್ಷೇತ್ರೇ ಯುಯುತ್ಸವಃ ಯುದ್ಧಮಿಚ್ಛಂತ ಏವ ಸಮವೇತಾ ಮಿಲಿತಾಃ ಸಂತೋ ಮಾಮಕಾ ಮದೀಯಾಃ ದುರ್ಯೋಧನಾದಯಃ ಪಾಂಡವಾಶ್ಚ ಹೇ ಸಂಜಯ ಕಿಮಕುರ್ವತೇತಿ ಇತಿ ಶಬ್ದೋ ಯೋಜ್ಯಃ। ಪಾಂಡವಾನಾಂ ಭಗವತ್ಪ್ರಿಯತ್ವಂ ಸರ್ವಸಾಕ್ಷಿಕಮಪ್ಯಜಾನನ್ ಧೃತರಾಷ್ಟ್ರಃ ಸ್ವಪುತ್ರಾಣಾಂ ವಿಜಯವಿವಿದಿಷಯಾ ಸಂಜಯಂ ಪಪ್ರಚ್ಛೇತ್ಯರ್ಥಃ॥ 1/1 ॥

ಹೀಗೆ 18 ಅಧ್ಯಾಯ ಗೀತೆಗೂ ಅಧ್ಯಾತ್ಮಾರ್ಥವುಂಟು. ಅದರ ಅರ್ಥವೇನೆಂದರೆ, ದುಃಸ್ಸಂಗ ನಿಮಿತ್ತದಿಂದಲೂ, ಸಂಸಾರಕ್ಲೇಶದಿಂದಲೂ ಅನ್ನಾದಿಗಳ ಪ್ರಭಾವದಿಂದಲೇ ಯದ್ಯಪಿ ಮೋಹವಶನಾಗಿ ಜೀವನು ಸಂಸಾರದಲ್ಲೇ ಅಧಿಕವಾಗಿ ಅನುರಕ್ತನಾಗಿ ಅಲ್ಲೇ ಊರ್ಜಿತವಾಗಿ ಬೇರುಬಿಟ್ಟು ವಾಸಮಾಡಬೇಕೆಂಬ ಆಶೆಪಟ್ಟು ನಷ್ಟನಾಗಿ ಬಿಡುತ್ತಿದ್ದನು. ಆದರೆ ಸಂಸಾರಚಕ್ರದಿಂದ ಕರ್ಷಣಾತ್ ಕೃಷ್ಣಃ ಎಂಬ ಹೆಸರುಳ್ಳ ಅನಾದಿ ಮಿತ್ರನಾದ ಜೀವನ ಅಂತರ್ಯಾಮಿಯು ಅವನ ಜೊತೆಯಲ್ಲೇ ಇದ್ದು ಜೀವನ ಅನಾದಿ ಪುಣ್ಯವನ್ನು ನಿಮಿತ್ತಮಾಡಿ ಅವನ ಮನಸ್ಸಿನಲ್ಲಿ ಪ್ರಾಪ್ತವಾದ ಸಕಲ ಸಂಶಯಗಳನ್ನೂ ಮೋಹವನ್ನೂ ಸದುಪದೇಶದಿಂದ ಓಡಿಸಿ ಅವನ ಸ್ವರೂಪಜ್ಞಾನವನ್ನು ಅವನಿಗೆ ತಂದುಕೊಟ್ಟು ಭಗವದಪರೋಕ್ಷ ದ್ವಾರ ತನ್ನೂರಿಗೆ ಅವನನ್ನು ಎಳೆಯುವನು. ಅವನಿಗೆ ಸಂಸಾರದಲ್ಲಿ ಜಿಹಾಸೆ ಹುಟ್ಟಿಸುವನು. ಜೀವನ ಜೊತೆಯಲ್ಲೇ ಸಂಸಾರಕ್ಕೆ ಬಂದು ಅವನ ದೇಹರೂಪವಾದ ರಥದಲ್ಲೇ ತಾನೂ ಕುಳಿತು ಕ್ರಮವಾಗಿ ಸಂಸಾರದಲ್ಲಿರುವ ವಿಷಯಗಳೆಲ್ಲವನ್ನು ನಿರೂಪಿಸಿ, ಅವುಗಳೆಲ್ಲವೂ ತ್ಯಾಜ್ಯವು ಶ್ರೀಹರಿಯೇ ಸರ್ವದಾ ಉಪಾದೇಯನು ಎಂದು ಅವನ ಮನಸ್ಸಿಗೆ ಬಂದಮೇಲೆ ಅವನಲ್ಲಿ ತನಗಿರುವ ಪ್ರೀತಿಯನ್ನು ವ್ಯಕ್ತಮಾಡಿ ತನ್ನ ವಿಶ್ವರೂಪದರ್ಶನ ಮಾಡಿಸಿ ತನ್ನ ನಿಜಸೇವಕನನ್ನಾಗಿ ಮಾಡಿಕೊಂಡು ಅವನಿಗೆ ಕೀರ್ತ್ಯಾದಿಗಳನ್ನು ಕೊಟ್ಟು ಸರ್ವದಾ ಅವನ ಯೋಗಕ್ಷೇಮ ಚಿಂತಕನಾಗಿರುವನು.

ಪರಮಾತ್ಮನ ಸನ್ನಿಧಾನದಿಂದಲೇ ಜೀವನ ಪ್ರವೃತ್ತ್ಯಾದಿಗಳು. ಅವನ ಶರಣಾಗತಿಯೇ ಪರಮಶ್ರೇಯಸ್ಸಾಧನವು. ಅವನಿಂದಲೇ ಜೀವನಿಗೆ ಮುಕ್ತಿ ಎಂಬ ಪರಮ ಪ್ರಮೇಯವು. ಶ್ರೀಕೃಷ್ಣಾರ್ಜುನರ ಸಂವಾದದಿಂದ ವ್ಯಕ್ತವಾಗುವಂತೆ ಸಂಜಯನು (ಎಂದರೆ ಸಮ್ಯಕೀಜಯಃ ಯೇನ ಸಃ= ಸಂಪೂರ್ಣವಾಗಿ ಸಂಸಾರದ ನಾಶವು ಯಾರ ಉಪದೇಶ ದಿಂದಾಗುತ್ತೋ ಅಂಥಾ ಸದ್ಗುರುವಿಗೆ ಸಂಜಯನೆಂದು ಹೆಸರು) ಧೃತರಾಷ್ಟ್ರನಿಗೆ (ಅವಿದ್ಯಾವೃತ ಜೀವನಿಗೆ) ಉಪ ದೇಶಿಸುತ್ತಾನೆ.

ಶ್ರೀಕೃಷ್ಣನಿಂದ ಅರ್ಜುನನು ಅಮೃತಸ್ರಾವಿಯಾದ ಮಾತುಗಳನ್ನು ಕೇಳಿ ಅಂತರಂಗದ ಕುರುಡುತನವನ್ನು ಕಳೆದುಕೊಂಡು ಸತ್ಕರ್ಮವನ್ನು ಕೇವಲ ದೇವರ ಸೇವೆಯೆಂದು ಮಾಡಿ ಪುನಃ ತನ್ನ ಹಸ್ತಿನಾವತಿಗೆ ಸದೃಶವಾದ ಸಾಧನದೇಹದಲ್ಲಿ ಉತ್ತಮಜ್ಞಾನ ವೈಭವದಿಂದ ಮೆರೆಯುತ್ತಾ ಶ್ರೀಕೃಷ್ಣನಿಗೆ ಸಂತೋಷಪಡಿಸಿದನು. ಆಗ ಆತನ (ಧೃತರಾಷ್ಟ್ರ) ಮನೋವೃತ್ತಿಯೂ ಕೂಡ ಪಾಪನಾಶದಿಂದ ಪರಮಾತ್ಮ ವಿಷಯಕವೇ ಆದುವು. ಇದು ಗೀತೆಯ ಆಧ್ಯಾತ್ಮಾರ್ಥವು- ಜೀವನ ಶರೀರ, ಮನಸ್ಸು ಮುಂತಾದ್ದೆಲ್ಲಾ ಸಾಧನೆಗೆ ಮೊದಲು ಅಸಂಪ್ರಜ್ಞಾತ ಸಮಾಧಿಯಿಂದ ನಿಶ್ಚಲವಾಗಿ ಹರಿಧ್ಯಾನಮಾಡೋಣ ವೆಂದರೆ ಅಷ್ಟಕ್ಕೆ ಬೇಡ ಅದರಿಂದ ಸರ್ವನಾಶ ಆಗುತ್ತೆ ಎಂದು

ಭಯಪಡಿಸುತ್ತವೆ. ಪರಮಾತ್ಮನ ಅನುಗ್ರಹದಿಂದ ಜೀವನು ಅವುಗಳಿಗೆ (ಆ ಭಯಾದಿಗಳಿಗೆ) ವಶನಾಗದೆ ನಿಷ್ಕಾಮಧ್ಯಾನಮಾಡಿ ಶರೀರಗತ ಸಕಲಶತ್ರುಗಳನ್ನೂ ಸುಟ್ಟು ಹರಿದರ್ಶನಮಾಡಿದರೆ ನಂತರ ಇವನ ದೇಹಾದಿಗಳೂ ಮನಸ್ಸೂ ಕೂಡ ಗುಲಾಮರಂತೆ ಸೇವೆ ಮಾಡುವುವು. ದೇವರೇ ಒಲಿದಮೇಲೆ ಇತರ ಸರ್ವವೂ ಇವನಿಗೆ ಅನುಕೂಲವಾಗುವುದರಲ್ಲಿ ಅಡ್ಡಿಯೇನು? ಧೃತರಾಷ್ಟ್ರರ ಆ ಪ್ರಶ್ನೆಗೆ ಸಂಜಯರು 18 ಅಧ್ಯಾಯಗಳನ್ನೇ ಉತ್ತರವಾಗಿ ಹೇಳಿರುತ್ತಾರೆ:-

ಶ್ಲೋಕ ಃ--ಸಂಜಯ ಉವಾಚ:-

ದೃಷ್ಟ್ವಾತು ಪಾಂಡವಾನೀಕಂ ವ್ಯೂಢಂ ದುರ್ಯೋಧನಸ್ತದಾ।
ಆಚಾರ್ಯಮುಪಸಂಗಮ್ಯ ರಾಜಾವಚನಮಬ್ರವೀತ್॥2/1॥

ಗೀ.ಪ್ರ) ದೃಷ್ಟ್ವಾ, ತು, ಪಾಂಡವಾನೀಕಂ, ವ್ಯೂಢಂ, ದುರ್ಯೋಧನಃ, ತದಾ, ಆಚಾರ್ಯಂ, ಉಪಸಂಗಮ್ಯ, ರಾಜಾ, ವಚನಂ, ಅಬ್ರವೀತ್॥

ತದಾ= ಆ ಸಮಯದಲ್ಲಿ, ರಾಜಾ= ರಾಜನಾದ, ದುರ್ಯೋಧನಃ= ದುರ್ಯೋಧನನು, ವ್ಯೂಢಂ= ವ್ಯೂಹವಾಗಿ ರಚಿಸಲ್ಪಟ್ಟ, ಪಾಂಡವಾನೀಕಂ= ಪಾಂಡವರ ಸೇನೆಯನ್ನು , ದೃಷ್ಟ್ವಾ ತು= ನೋಡಿದ ಕೂಡಲೇ, ಆಚಾರ್ಯಂ=ದ್ರೋಣಾಚಾರ್ಯರನ್ನು, ಉಪಸಂಗಮ್ಯ= ಹೊಂದಿ, ವಚನಂ= ಮುಂದೆ ಹೇಳುವ ಮಾತನ್ನು, ಅಬ್ರವೀತ್= ಹೇಳಿದನು.

ಗೀತಾವಿವೃತ್ತಿಃ ಧೃತರಾಷ್ಟ್ರಪ್ರಶ್ನಸ್ಯ ಸಂಜಯ ಉತ್ತರಮುಕ್ತವಾನಿತ್ಯಾಹ ವೈಶಂಪಾಯನೋ ಜನಮೇಜಯಂ ಪ್ರತಿ। ಸಂಜಯ ಉವಾಚ ಇತ್ಯಾದಿನವಭಿಃ ಶ್ಲೋಕೈಃ ದುರ್ಯೋಧನಕೃತವ್ಯಾಪಾರಂ ಆಹ। ದೃಷ್ಟ್ವೇತ್ಯಾದಿನಾ॥ ದುರ್ಯೋಧನಸ್ತು ರಾಜಾ ತದಾ ಯುದ್ಧಾರ್ಥಂ ಮಿಲಿತಸಮಯೇ ವ್ಯೂಢಂ ವ್ಯೂಹಾತ್ಮನಾ ರಚಿತಂ ಪಾಂಡವಸೈನ್ಯಂ ದೃಷ್ಟ್ವಾ ತು ದೃಷ್ಟ್ವೈವ ಇತಿ ವಾ ತೋರನ್ವಯಃ। ದ್ರೋಣಾಚಾರ್ಯಸಮೀಪಮಾಗತ್ಯ ವಚನಮುವಾಚ॥ 2/1 ॥

ಶ್ರೀ ಹೆಚ್. ಎಸ್.ದುರ್ಯೋಧನನ ವ್ಯಾಪಾರವನ್ನು ಹೇಳುತ್ತಾರೆ. ಧೃತರಾಷ್ಟ್ರರಾಜಾ! ವ್ಯೂಹಾತ್ಮಕವಾಗಿ ರಚಿತವಾದ ಪಾಂಡವರ ಸೈನ್ಯವನ್ನು ನಿನ್ನ ಪುತ್ರನಾದ ದುರ್ಯೋಧನನು ನೋಡಿ ದ್ರೋಣಾಚಾರ್ಯರ ಬಳಿಗೆ ಹೋಗಿ ಮಾತನಾಡಿದನು-

ವಿಶೇಷಾರ್ಥ:- ತು ಶಬ್ದ ಎಲ್ಲಾ ಪದಗಳ ಜೊತೆಯಲ್ಲೂ ಅನ್ವಯಿಸುತ್ತೆ. ದೃಷ್ಟ್ವಾ +ತು =ಪಾಂಡವರ ದೊಡ್ಡಸೇನೆಯನ್ನು ನೋಡಿದಕೂಡಲೇ (ವಿಳಂಬವಿಲ್ಲದೇ ಎಂದರ್ಥ) ಧೈರ್ಯವಿಲ್ಲದೇಹೋಯಿತೆಂದು ಅರ್ಥ. (2) ಪಾಂಡವಾನೀಕಂ +ತು =ಪಾಂಡವರ ಸೈನ್ಯಮಾತ್ರ ನೋಡೇ ಹೀಗಾಯ್ತು. ಇನ್ನೂ ನಾಯಕರನ್ನು ನೋಡೇ ಇಲ್ಲ. (3) ವ್ಯೂಢಂ+ತು = ವ್ಯೂಹಾತ್ಮನಾ ಸೈನ್ಯರಚಿತವಾಗಿರುವಾಗಲೇ(ಇನ್ನೂ ಯುದ್ಧವಿಲ್ಲವೆಂದರ್ಥ) ಆಚಾರ್ಯಂ+ತು= ಸಾಕ್ಷಾತ್ ದ್ರೋಣಾಚಾರ್ಯರನ್ನೇ, ಮಿತ್ರಾದಿ ಗಳನ್ನು ಕುರಿತು ಹೋಗೋದೇ? ಅವರಿಂದ ಉಪಕಾರವಾಗಲ್ಲವೆಂದು ನಿಶ್ಚಯಿಸಿ ಗುರುಡಿ ಆಚಾರ್ಯರಲ್ಲೇ ಬಂದು, ರಾಜಾ+ತು= ಆಳಿನ ಕೈಲಿ ಹೇಳಿ ಕಳುಹಿಸದೇ ರಾಜನಾದ ತಾನೇ ಬಂದು, ವಚನಂ+ತು= ಆಕ್ಷೇಪ ನಿಗ್ರಹಾದಿಗಳನ್ನು ಮಾಡದೆ ಪ್ರಿಯವಾದ ಮಾತುಗಳನ್ನೇ ಆಡಿದ. ದುರ್ಯೋಧನನ ಸೈನ್ಯ ಸೂಚೀಮುಖವೆಂಬ ವ್ಯೂಹಾಕಾರವಾಗಿ ನಿಂತಿತ್ತು. ಪಾಂಡವರ ಸೈನ್ಯವಜ್ರವ್ಯೂಹಾಕಾರವಾಗಿ ನಿಂತಿತ್ತು. ಈ ವ್ಯೂಹವನ್ನೇ ದುರ್ಯೊಧನ ನೋಡಿದ್ದು- ದುರ್ಯೋಧನನು ಎಲ್ಲರನ್ನೂ ಬಿಟ್ಟು ದ್ರೋಣಾಚಾರ್ಯರ ಬಳಿಗೇ ಏಕೆ ಹೋದನೆಂದರೆ:-
(1) ದ್ರೋಣರು ಶಾಪಾದಪಿ ಶರಾದಪಿಗಳಲ್ಲಿ ಶ್ರೇಷ್ಠರು. ಗುರುಗಳು. ಆದ್ದರಿಂದ ಧೃಷ್ಟದ್ಯುಮ್ನನಿಂದ ರಕ್ಷಿತವಾದ ಪಾಂಡವಸೇನಾ ವೈಭವ ಹೇಳಿದರೆ ಅವರಿಗೆ ಕೋಪೋದ್ರೇಕವಾಗುತ್ತೆಂದು ತಿಳಿದು ಅವರ ಬಳಿಗೇ ಬಂದ. ಭೀಷ್ಮರಿಗೆ ಸೇನಾಧಿಪತ್ಯವನ್ನು ಕೊಟ್ಟು ಸಂತೋಷಪಡಿಸಿದ್ದಾನೆ. ದ್ರೋಣಾಚಾರ್ಯರಿಗೆ ಉತ್ಸಾಹ ಹೋಗಬಾರದೆಂದು ತಾನೇ ಅವರಲ್ಲಿ ಹೋಗಿ ಮಾತನಾಡಿದನು.

'ಅಬ್ರವೀತ್' ಎಂದರೆ ಸಾಕಾಗಿತ್ತು. ವಚನಂ ಎಂಬ ಪುನರುಕ್ತಿಯು ಸಂಕ್ಷಿಪ್ತವಾಗಿ ಮಾತಾಡಿದರೂಬಹ್ವರ್ಥಗರ್ಭಿತವಾಗಿ ಮಾತಾಡಿದನೆಂಬುದನ್ನು ಸೂಚಿಸುತ್ತೆ.

ಶ್ಲೋ॥ ಪಶ್ಯೈತಾಂ ಪಾಂಡುಪುತ್ರಾಣಾಮಾಚಾರ್ಯ ಮಹತೀಂ ಚಮೂಂ।

ವ್ಯೂಢಾಂ ದ್ರುಪದಪುತ್ರೇಣ ತವ ಶಿಷ್ಯೇಣ ಧೀಮತಾ॥3/1॥

ಗೀ ಪ್ರ ಪಶ್ಯ , ಏತಾಂ, ಪಾಂಡುಪುತ್ರಾಣಾಂ, ಆಚಾರ್ಯ, ಮಹತೀಂ, ಚಮೂಂ, ವ್ಯೂಢಾಂ, ದ್ರುಪದಪುತ್ರೇಣ, ತವ, ಶಿಷ್ಯೇಣ, ಧೀಮತಾ।

ಹೇ ಆಚಾರ್ಯ=ಎಲೈ ದ್ರೋಣಾಚಾರ್ಯರೇ! ,ತವ=ನಿನ್ನ ,ಧೀಮತಾ=ಬುದ್ಧಿವಂತ, ಶಿಷ್ಯೇಣ=ಶಿಷ್ಯನಾದ, ದ್ರುಪದಪುತ್ರೇಣ= ದ್ರುಪದರಾಜನಮಗನಿಂದ (ದೃಷ್ಟದ್ಯುಮ್ನನಿಂದ), ವ್ಯೂಢಾಂ=ವ್ಯೂಹವಾಗಿ ರಚಿಸಲ್ಪಟ್ಟ, ಪಾಂಡುಪುತ್ರಾಣಾಂ=ಪಾಂಡವರ, ಮಹತೀಂ= ದೊಡ್ಡದಾದ, ಏತಾಂ=ಈ, ಚಮೂಂ= ಸೈನ್ಯವನ್ನು, ಪಶ್ಯ=ನೋಡು!

ಗೀತಾವಿವೃತ್ತಿಃ ತದ್ವಚನಮೇವ ಅನುವದತಿ ಸಂಜಯಃ। ಪಶ್ಯೈತಾಂ ಇತ್ಯಾದಿನಾ। ಹೇ ಆಚಾರ್ಯ, ತವ ಶಿಷ್ಯೇಣ ಧೀಮತಾ ಧೃಷ್ಟದ್ಯುಮ್ನೇನ ವ್ಯೂಢಾಂ ಪಾಂಡುಪುತ್ರಾಣಾಂ ಏತಾಂ ಮಹತೀಂ ಚಮೂಂ ಸೇನಾಂ ಪಶ್ಯ॥3॥

<u>ಶ್ರೀ ಹೆಚ್. ಎಸ್.ಅವತಾರಿಕೆ :</u> ದುರ್ಯೋಧನನು ದ್ರೋಣರಲ್ಲಿ ಸಂಕ್ಷೇಪವಾಗಿ ಬಹ್ವರ್ಥಗರ್ಭಿತವಾದ ಮಾತುಗಳಾವುವನ್ನು ಆಡಿದನೆಂದರೆ:

ಆಚಾರ್ಯರೇ! ನಿಮ್ಮ ಶಿಷ್ಯನಾದ, ಬುದ್ಧಿವಂತನಾದ, ದ್ರುಪದರಾಜಕುಮಾರನಾದ, ಧೃಷ್ಟದ್ಯುಮ್ನನೆಂಬ ಪಾಂಡವರ ಸೇನಾಧಿಪತಿಯಿಂದ ಸಹಿತವಾದ ಮಹತ್ತರವಾದ ಪಾಂಡವರ ಸೈನ್ಯವನ್ನು ನೋಡಿರಿ.

ವಿಶೇಷ: ಪಾಂಡುಪುತ್ರಣಾಮಾಚಾರ್ಯ ಎಂದು ಪದ ಮಾಡಿದರೆ ಪಾಂಡುಪುತ್ರರಿಗೆ ನೀವು ಗುರುಗಳು. ಅವರಲ್ಲಿ ಪಕ್ಷಪಾತದಿಂದ ಆವೇಶರಹಿತರಾಗಿ ಕಪಟಯುದ್ಧವನ್ನು ಮಾಡಬೇಡಿ. ನೀವು ನಮಗೂ ಆಚಾರ್ಯರು. ಸಮದೃಷ್ಟಿಯಿಂದ ನೋಡಿ ಎಂದು ಭಾವ.

''ತವ ಶಿಷ್ಯೇಣ ದ್ರುಪದಪುತ್ರೇಣ'' ಎಂಬಲ್ಲಿತವಶಿಷ್ಯೇಣ ಎಂದು ಹೇಳಿದ್ದರಿಂದ ನಿಮ್ಮ ಶಿಷ್ಯನೇ ನಿಮಗೆ ವಿರೋಧಮಾಡುತ್ತಾನೆಂದು ಪ್ರಾಪ್ತವಾದ್ದರಿಂದ ಅವರಿಗೆ ಕ್ರೋಧ ಹುಟ್ಟುತ್ತೆ. ದ್ರುಪದಪುತ್ರೇಣ ಎಂದು ಹೇಳಿದ್ದರಿಂದ ದ್ರುಪದನ ಆ ಪೂರ್ವಾಪರಾಧವನ್ನು ಅವರ ಮನಸ್ಸಿಗೆ ತಂದಿಟ್ಟಂತೆ ಆಗುತ್ತೆ. ಧೀಮತಾ ಎಂದು ಏಕೆ ವಿಶೇಷಣ ಕೊಟ್ಟನೆಂದರೆ- ವಿರೋಧಕಾಲದಲ್ಲಿ ಶಿಷ್ಯ ಅಥವಾ ಮಗನನ್ನು ಪ್ರಶಂಸಿಸಿದರೆ ಉತ್ತಮರಿಗೆ ಶಾಪ ಕೊಡಬೇಕೆಂಬ ಸಿಟ್ಟುಬರುತ್ತೆ. ಹಾಗೆ ಧೃಷ್ಟದ್ಯುಮ್ನನ ಮೇಲೆ ಸಿಟ್ಟು ಬರಲಿ ಎಂದೇ ಕೌರವನು ಹೀಗೆ ಹೇಳಿದನು.

ಶ್ಲೋ॥ ಅತ್ರ ಶೂರಾಮಹೇಷ್ವಾಸಾ ಭೀಮಾರ್ಜುನಸಮಾ ಯುಧಿ।
ಯುಯುಧಾನೋ ವಿರಾಟಶ್ಚ ದ್ರುಪದಶ್ಚ ಮಹಾರಥಃ॥ 4/1॥

ಗೀ. ಪ್ರ) ಅತ್ರ, ಶೂರಾಃ, ಮಹೇಷ್ವಾಸಾಃ, ಭೀಮಾರ್ಜುನಸಮಾಃ, ಯುಧಿ, ಯುಯುಧಾನಃ, ವಿರಾಟಃ, ಚ ,ದ್ರುಪದಃ, ಚ ಮಹಾರಥಃ॥

ಶ್ಲೋ॥ ದೃಷ್ಟಕೇತುಶ್ಚೇಕಿತಾನಃ ಕಾಶಿರಾಜಶ್ಚವೀರ್ಯವಾನ್।
ಪುರುಜಿತ್ಕುಂತಿಭೋಜಶ್ಚ ಶೈಬ್ಯಶ್ಚನರಪುಂಗವಃ॥5/1 ॥
ಯುಧಾಮನ್ಯುಶ್ಚ ವಿಕ್ರಾಂತ ಉತ್ತಮೌಜಾಶ್ಚ ವೀರ್ಯವಾನ್।
ಸೌಭದ್ರೋ ದ್ರೌಪದೇಯಾಶ್ಚ ಸರ್ವ ಏವ ಮಹಾರಥಾಃ ॥6/1 ॥

ಗೀ.ಪ್ರ) ದೃಷ್ಟಕೇತುಃ, ಚೇಕಿತಾನಃ, ಕಾಶಿರಾಜಃ, ಚ, ವೀರ್ಯವಾನ್, ಪುರುಜಿತ್, ಕುಂತಿಭೋಜಃ, ಚ ಶೈಬ್ಯಃ, ಚ, ನರಪುಂಗವಃ।

ಯುಧಾಮನ್ಯುಃ, ಚ, ವಿಕ್ರಾಂತಃ, ಉತ್ತಮೌಜಾಃ, ಚ ,ವೀರ್ಯವಾನ್, ಸೌಭದ್ರಃ, ದ್ರೌಪದೇಯಾಃ, ಚ ಸರ್ವೇ, ಏವ, ಮಹಾರಥಾಃ॥

ಅತ್ರ=ಈಸೈನ್ಯದಲ್ಲಿ, ಮಹೇಷ್ವಾಸಾಃ=ದೊಡ್ಡ ದೊಡ್ಡ ಧನುಸ್ಸುಳ್ಳ , ಯುಧಿ=ಯುದ್ಧದಲ್ಲಿ, ಭೀಮಾರ್ಜುನಸಮಾಃ= ಭೀಮಾರ್ಜುನ

ರಿಗೆ ಸಮಾನರಾದ, ಶೂರಾಃ= ಶೂರರು, (ಸಂತಿ= ಇದ್ದಾರೆ) (ಯಾರಾರೆಂದರೆ) ಯುಯುಧಾನಃ= ಸಾತ್ಯಕಿಯು, ಚ ವಿರಾಟಃ= ವಿರಾಟಮಹಾರಾಜನು, ಚ=ಮತ್ತು ಮಹಾರಥಃ=ಮಹಾರಥಿಕನಾದ, ದ್ರುಪದಃ=ದ್ರುಪದ ಮಹಾರಾಜನು, ಚ=ಮತ್ತು, ದೃಷ್ಟಕೇತುಃ=ದೃಷ್ಟಕೇತುರಾಜನು, ಚೇಕಿತಾನಃ=ಚೇಕಿತಾನನು, ಚ=ಮತ್ತು, ವೀರ್ಯವಾನ್= ಬಲಿಷ್ಠನಾದ, ಕಾಶಿರಾಜಃ=ಕಾಶಿ ರಾಜನು, ಪುರಜಿತ್= ಪುರಜಿತನು, ಕುಂತಿಭೋಜಃ= ಕುಂತಿಭೋಜನು, ಚ=ಮತ್ತು ನರಪುಂಗವಃ= ಮನುಷ್ಯಶ್ರೇಷ್ಠನಾದ, ಶೈಬ್ಯಃ= ಶೈಬ್ಯನು, ಚ=ಮತ್ತು, ವಿಕ್ರಾಂತಃ= ಪರಾಕ್ರಮಿಯಾದ, ಯುಧಾಮನ್ಯುಃ= ಯುಧಾಮನ್ಯುವು ಚ=ಮತ್ತು, ವೀರ್ಯ ವಾನ್= ಬಲಿಷ್ಠನಾದ, ಉತ್ತಮೌಜಾಃ= ಉತ್ತಮೌಜನು, ಸೌಭದ್ರಃ= ಸುಭದ್ರಾಪುತ್ರನಾದ ಅಭಿಮನ್ಯುವು, ಚ=ಮತ್ತು, ದ್ರೌಪದೇಯಾಃ= ದ್ರೌಪದೀಮಕ್ಕಳಾದ ಪ್ರತಿವಿಂಧ್ಯ ಆದಿಗಳು, (ಏತೇ) ಈಎಲ್ಲರೂ, ಸರ್ವೇ ಏವ ಮಹಾರಥಾಃ= ಮಹಾ ರಥಿಕರು.।। 5।। 6।।

ಗೀತಾವಿವೃತ್ತಿಃ ಅತ್ರ ಸೇನಾಯಾಂ ಮಹೇಷ್ವಾಸಾಃ ಮಹಾಧಾನುಷ್ಕಾಃ ಯುಧಿ ಭೀಮಾರ್ಜುನಸಮಾಃ ಶೂರಾಃ ಸಂತಿ। ತೇ ಕ ಇತ್ಯತ ಆಹ।। ''ಯುಯುಧಾನ'' ಇತ್ಯಾದಿನಾ। ಮಹಾರಥ ಇತಿ ಪ್ರತ್ಯೇಕಮನ್ವೇತಿ ।।4।। ವೀರ್ಯವಾನಿತಿ ವಿಶೇಷಣಂ ನರಪುಂಗವೋ ನರಶ್ರೇಷ್ಠ ಇತ್ಯಪಿ ತ್ರಯಾಣಾಮ್।।5।। ಮಹಾರಥತ್ವಂ ನಾಮ 'ಏಕೋ ದಶಸಹಸ್ರಾಣಾಂ ಯೋಧಯೇದ್ಯಃ ಸ ಧನ್ವಿನಾಂ। ಶಸ್ತ್ರಶಾಸ್ತ್ರಪ್ರವೀಣಶ್ಚ ಮಹಾರಥ ಇತಿ ಸ್ಮೃತಃ।।' (ಉದ್ಯೋಗ ಪರ್ವ). 168/141) ಇತ್ಯುಕ್ತರೂಪಮ್। ವಿಕ್ರಾಂತಃ ಪರಾಕ್ರಮವಾನ್। ಸೌಭದ್ರಃ ಅಭಿಮನ್ಯುಃ। ದ್ರೌಪದೇಯಾಃ ದ್ರೌಪದೀಪುತ್ರಾಃ।। 6।।

ಶ್ರೀ ಹೆಚ್.ಎಸ್।ಈ ಸೇನೆಯಲ್ಲಿ ಭೀಮಾರ್ಜುನರಿಗೆ ಸಮರಾದ, ಮಹಾಧನುರ್ಧಾರಿಗಳಾದ, ಮಹಾರಥಿಕರಾದ,ಶೂರರಾದ ಯೋಧರುಗಳನ್ನು ಹೇಳುತ್ತೇನೆ. ಯುಯುಧಾನ= ವಿರಾಟರಾಜ, ದ್ರುಪದರಾಜ ಇಂಥವರು.

ವಿಶೇಷ: ಇಷ್ವಾಸಾ=ಕೋದಂಡ (ಮಹೇಷ್ವಾಸಾಃ) ಕೋದಂಡದಲ್ಲಿ ಮಹತ್ವವೇನೆಂದರೆ- ದೂರದಿಂದ ಪರಸೈನ್ಯವನ್ನು ನಾಶ ಮಾಡಲು ಸಾಮರ್ಥ್ಯವುಳ್ಳದ್ದು- ಇಂಥಾ ಕೋದಂಡಧಾರಿಗಳು ಯುಯುಧಾನಾದಿಗಳು ಎಂದರ್ಥ. ಯುಯು ಧಾನಃ= ಅತಿಶಯೇನ ಯುಧ್ಯತ ಇತಿ ಯುಯುಧಾನಃ ಸಾತ್ಯಕಿಃ. ಇವರಲ್ಲಿ ಗರುಡನ ಆವೇಶವಿದೆ. ಅರ್ಜುನನ ಶಿಷ್ಯ- ಕೃಷ್ಣ ಭಕ್ತ.

ವಿರಾಟಃ= ಶತ್ರೂನ್ ವಿಶೇಷೇಣ ರಟಯತಿ ಓಡಾಡಿಸುತ್ತಾನೆ

ದ್ರುಪದಃ=ದ್ರುಃ ವೃಕ್ಷಃ + ಏವಪದಂ ಧ್ವಜೇ (ಚಿಹ್ನಂ) ಯಸ್ಯ ಸಃ= ಧ್ವಜದಲ್ಲಿ ವೃಕ್ಷ ಚಿಹ್ನೆಯನ್ನು ಉಳ್ಳವ.

ಮಹಾರಥಃ= ಏಕೋದಶಸಹಸ್ರಾಣಿ ಯೋಧಯೇದ್ಯಸ್ತು ಧನ್ವಿನಾಂ। ಶಸ್ತ್ರಶಾಸ್ತ್ರಪ್ರವೀಣಶ್ಚ ಮಹಾರಥ ಇತಿ ಸ್ಮೃತಃ।

ಧನುರಾದ್ಯಾಯುಧಪಾಣಿಗಳಿಂದ 10 ಸಹಸ್ರ ಪ್ರತಿವೀರರನ್ನು ಇತರರ ಸಹಾಯವಿಲ್ಲದೇ ಒಬ್ಬನೇ ಸಂಹಾರ ಮಾಡುವವರೆಗೂ ಯುದ್ಧಮಾಡುವುದರಲ್ಲಿಯಾವಾತ ಶಕ್ತನೋ ಮತ್ತು ಧನುರ್ವಿದ್ಯಾ ಪ್ರವೀಣನೋ ಆತನು ಮಹಾರಥಿಕನು.

ಯುಧಿ= ಅತ್ರ ಪಾಂಡವಸೇನೆಯಲ್ಲಿ ಯುದ್ಧಾರ್ಥವಾಗಿ ಜನರು ಬಂದಿದ್ದಾರೆ. ಅಥವಾ ಯುಧಿ ಕೋದಂಡ ಪಾಣಿಗಳಾದ ಅವರು ಭೀಮಾರ್ಜುನರ ಸಮರಾದ್ದರಿಂದ ಯುದ್ಧದಲ್ಲಿ( ಯುದ್ಧ ವಿಷಯ ದಲ್ಲಿ) ಶೂರರು.

ದೃಷ್ಟಕೇತು, ಚೇಕಿತಾನ, ಕಾಶಿರಾಜನು, ಪುರುಜಿತ್, ಕುಂತಿಭೋಜ, ಶರಪುಂಗವರಾದ ಶೈಬ್ಯ, ಇವರೆಲ್ಲಾ ಪ್ರಬಲರಾದ ಶೂರರು.

ವಿಶೇಷ: ಚ ಎಂಬ ಸಮುಚ್ಚಯಾತ್ಮಕ ಪದವಿರೋಣದರಿಂದ ವೀರ್ಯವಾನ್ ಎಂಬ ವಿಶೇಷಣವು ಎಲ್ಲದಕ್ಕೂ ಅನ್ವಯಿಸುತ್ತದೆ.

ಧೃ ಷ್ಟಕೇತುಃ= ಧೃಷ್ಟಃ ಪರಭಯಂಕರಃ ಕೇತುರಸ್ಯೇತಿ (ಶಿಶುಪಾಲ ಪುತ್ರ)

ಚೇಕಿತಾನಃ= ಚೇಕಿತಾನಸ್ಯ ಅಪತ್ಯಂ (ಇವನು ವೃಷ್ಣಿಗಳಲ್ಲೊಬ್ಬ)

ಪುರುಜಿತ್=ಯುದ್ಧೇ ಪುರೂನ್ ಬಹೂನ್ ಜಯತೀತಿ (ಕುಂತಿ ಭೋಜನ ಮಗ)

ಕುಂತಿಭೋಜ= ಇವನು ಕುಂತಿಯ ಸಾಕುತಂದೆ

ಶೈಬ್ಯಃ= ಶಿಬೇರ್ಗೋತ್ರಾಪತ್ಯಂ ಶೈಬ್ಯಃ

ನರಪುಂಗವಃ ಎಂಬುದು ಪುರುಜಿತ್, ಕುಂತಿಭೋಜ, ಶೈಬ್ಯ ಈ ಮೂರು ಜನರಿಗೂ ಅನ್ವಯಿಸುತ್ತದೆ.

ಯುಧಾಮನ್ಯು, ಉತ್ತಮೌಜ, ಅಭಿಮನ್ಯು, ದ್ರೌಪದೀ ಪಂಚಪುತ್ರರು ಇವರೆಲ್ಲಾ ಮಹಾರಥಿಕರು.

ವಿಶೇಷ: ಯುಧಾಮನ್ಯುಃ= ಯುಧಾಯಾಂ ಯುದ್ಧೇ, ಮನ್ಯುಃ ಕೋಪೋವೇಗೋ ಯಸ್ಯ ಸಃ (ಯುದ್ಧ ದಲ್ಲಿ ಕೋಪವು ಳ್ಳವನು ಪಾಂಚಾಲ್ಯರು)

ಉತ್ತಮೌಜಾಃ= ಉತ್ತಮಂ ಓಜೋ ಬಲಂ ಯಸ್ಯ ಸಃ (ಪಾಂಚಾಲಃ)

ವೀರ್ಯವಾನ್= ವಿ ವಿವಿಧ ದಿಶಿ, ಈರಯತಿ ಪ್ರೇರಯತೀತಿ ವೀರ್ಯಂ ವೀರ್ಯಂ ಅಸ್ಯಾಸ್ತೀತಿ ವೀರ್ಯವಾನ್ (ಮತುಪ್ ಪ್ರತ್ಯಯ)

ದ್ರೌಪದೇಯರು- ಪ್ರತಿವಿಂದ್ಯ, ಸೂತಸಮ, ಶ್ರುತಿಕೀರ್ತಿ, ಶತಾನೀಕ, ಶ್ರುತಸೇನಃ।

ಶ್ಲೋ॥ ಅಸ್ಮಾಕಂ ತು ವಿಶಿಷ್ಟಾಯೇ ತಾನ್ನಿಬೋಧ ದ್ವಿಜೋತ್ತಮ।

ನಾಯಕಾ ಮಮ ಸೈನ್ಯಸ್ಯ ಸಂಜ್ಞಾರ್ಥಂ ತಾನ್ ಬ್ರವೀಮಿ ತೇ॥ 7/1 ॥

ಗೀ.ಪ್ರ. ಚಂ. ಅಸ್ಮಾಕಂ, ತು, ವಿಶಿಷ್ಟಾಃ, ಯೇ, ತಾನ್, ನಿಬೋಧ, ದ್ವಿಜೋತ್ತಮ, ನಾಯಕಾಃ, ಮಮ, ಸೈನ್ಯಸ್ಯ, ಸಂಜ್ಞಾರ್ಥಂ, ತಾನ್, ಬ್ರವೀಮಿ, ತೇ.॥

ಹೇ ದ್ವಿಜೋತ್ತಮ= ಎಲೈ ಬ್ರಾಹ್ಮಣಶ್ರೇಷ್ಠನೇ, ಅಸ್ಮಾಕಂ ತು= ನಮ್ಮಗಳ ಮಧ್ಯದಲ್ಲಿಯಾದರೂ , ಯೇ= ಯಾರು ಯಾರು, ವಿಶಿಷ್ಟಾಃ= ಪ್ರಮುಖರಾದವರೋ, ತಾನ್= ಅವರನ್ನು, ನಿಬೋಧ= ತಿಳಿದುಕೊಳ್ಳುವವನಾಗು. ಸಂಜ್ಞಾರ್ಥಂ= ತಿಳಿದುಕೊಳ್ಳುವುದಕ್ಕಾಗಿ, ಮಮ= ನನ್ನ, ಸೈನ್ಯಸ್ಯ=ಸೈನ್ಯಕ್ಕೆ (ಯಾರು), ನಾಯಕಾಃ=ಸೇನಾಪತಿಗಳೋ, ತಾನ್= ಅವರನ್ನು ತೇ=ನಿನಗೋಸ್ಕರ, ಬ್ರವೀಮಿ=ಹೇಳು ತ್ತೇನೆ.

ಶ್ರೀ ಹೆಚ್. ಎಸ್ ಭೂಸುರೋತ್ತಮನೇ! ನಮ್ಮ ಸೈನ್ಯದಲ್ಲಿ ಬಲಿಷ್ಠರಾದ ಸೇನಾನಾಯಕರನ್ನು ನಿಮ್ಮ (ಸಂ+ಜ್ಞಾರ್ಥಂ) ವಿಶದವಾದ ಜ್ಞಾನಕ್ಕೋಸ್ಕರ ಹೇಳುತ್ತೇನೆ.

ಶ್ಲೋ॥ ಭವಾನ್ ಭೀಷ್ಮಶ್ಚ ಕರ್ಣಶ್ಚ ಕೃಪಶ್ಚ ಸಮಿತಿಂಜಯಃ।

ಅಶ್ವತ್ಥಾಮಾ ವಿಕರ್ಣಶ್ಚ ಸೌಮದತ್ತಿಸ್ತಥೈವಚ॥8/1॥

ಅನ್ಯೇ ಚ ಬಹವಶ್ಶೂರಾ ಮದರ್ಥೇ ತ್ಯಕ್ತಜೀವಿತಾಃ।

ನಾನಾಶಸ್ತ್ರಪ್ರಹರಣಾಸ್ಸರ್ವೇ ಯುದ್ಧವಿಶಾರದಾಃ॥9/1॥

ಗೀ. ಪ್ರ. ಚಂ ಭವಾನ್, ಭೀಷ್ಮಃ, ಚ, ಕರ್ಣಃ, ಚ, ಕೃಪಃ, ಚ, ಸಮಿತಿಂಜಯಃ, ಅಶ್ವತ್ಥಾಮಾ, ವಿಕರ್ಣಃ, ಚ, ಸೌಮದತ್ತಿಃ, ತಥಾ, ಏವ, ಚ॥

ಅನ್ಯೇ, ಚ, ಬಹವಃ, ಶೂರಾಃ, ಮದರ್ಥೇ, ತ್ಯಕ್ತಜೀವಿತಾಃ, ನಾನಾಶಸ್ತ್ರಪ್ರಹರಣಾಃ, ಸರ್ವೇ, ಯುದ್ಧ-ವಿಶಾರದಾಃ॥

ಭವಾನ್=ನೀನು, ಚ=ಮತ್ತು, ಭೀಷ್ಮಃ=ಪಿತಾಮಹರಾದ ಭೀಷ್ಮರು, ಚ=ಮತ್ತು, ಕರ್ಣಃ=ಕರ್ಣನು, ಚ=ಮತ್ತು, ಸಮಿತಿಂ ಜಯಃ= ಯುದ್ಧದಲ್ಲಿ ಜಯಶೀಲರಾದ, ಕೃಪಃ=ಕೃಪಾಚಾರ್ಯರು, ಚ=ಮತ್ತು, ಅಶ್ವತ್ಥಾಮಾ= ಅಶ್ವತ್ಥಾಮಾ -ಚಾರ್ಯರು, ಚ=ಮತ್ತು, ವಿಕರ್ಣಃ=ವಿಕರ್ಣನು, ತಥೈವ=ಹಾಗೆಯೇ, ಸೌಮದತ್ತಿಃ= ಸೋಮದತ್ತನ ಮಗನಾದ ಭೂರಿಶ್ರವನು, ಚ=ಮತ್ತು, ಅನ್ಯೇ=ಇತರರಾದ, ಬಹವಃ=ಅನೇಕರಾದ, ಶೂರಾಃ=ಶೂರರು, ಮದರ್ಥೇ=ನನಗೋಸ್ಕರ, ತ್ಯಕ್ತಜೀವಿತಾಃ=ಪ್ರಾಣಗಳನ್ನು ಬಿಡುವುದಕ್ಕೆ ಸಿದ್ಧರಾಗಿದ್ದಾರೆ, (ಏತೇ) ಸರ್ವೇ=ಇವರೆಲ್ಲರೂ, ನಾನಾಶಸ್ತ್ರಪ್ರಹರಣಾಃ= ಅನೇಕ ವಿಧವಾದ ಶಸ್ತ್ರಗಳಿಂದ ಯುಕ್ತರಾದವರು, ಯುದ್ಧವಿಶಾರದಾಃ= ಯುದ್ಧದಲ್ಲಿ ಪಂಡಿತರಾದವರು.

ಗೀತಾವಿವೃತ್ತಿಃ- ಅಸ್ಮಾಕಂ ತ್ವಿತಿ ಪಾಂಡವವ್ಯಾವರ್ತಕಸ್ತುಶಬ್ದಃ। ಅಸ್ಮಾಕಂ ಸಂಬಂಧಿನೋ ವಿಶಿಷ್ಟಾಃ ಬಲಿಷ್ಠಾಃ ಮಮ ಸೈನ್ಯಸ್ಯ ನಾಯಕಾಃ ನೇತಾರೋ ಯೇ ತಾನ್ ನಿಬೋಧ ಬುದ್ಧಿಸ್ಥಾನ್ ಜಾನೀಹಿ। ತೇ ತವ ಸಮ್ಯಗ್ ಜ್ಞಾನಾರ್ಥಂ ತಾನ್ ಬ್ರವೀಮಿ। ದ್ವಿಜೋತ್ತಮ ಇತ್ಯಾಚಾರ್ಯಸಂಬೋಧನಮ್॥ 7 ॥ ತಾನಾಹ ದ್ವಾಭ್ಯಾಂ॥ ''ಭವಾನಿತ್ಯಾದಿನಾ''। ಸಮಿತಿಂಜಯಃ ಯುದ್ಧೇ ಜಯಶೀಲಃ ಸೌಮದತ್ತಿಃ ಸೋಮದತ್ತಸುತೋ ಭೂರಿಶ್ರವಾಃ॥ 8 ॥ ಶೂರಾ ಏವೇತಿ ವಾ ಮದರ್ಥಂ ಏವೇತಿ

ವಾಽವಧಾರಣಾನ್ವಯಃ। ತ್ಯಕ್ತಜೀವಿತಾಃ ಪ್ರಾಣತ್ಯಾಗೇ ಕೃತನಿಶ್ಚಯಾ ಇತ್ಯರ್ಥಃ। ಪ್ರಹ್ರಿಯಂತೇ ಏಭಿರಿತಿ ಪ್ರಹರಣಾನಿ ಅಸ್ತ್ರಾಣಿ। ನಾನಾವಿಧಾನಿ ಶಸ್ತ್ರಾಣಿ ಯೇಷಾಂ ತೇ ನಾನಾಶಸ್ತ್ರಪ್ರಹರಣಾಃ। ಯುದ್ಧವಿಶಾರದಾಃ ಯುದ್ಧಕುಶಲಾಃ।। 9 ।।

ಶ್ರೀ ಹೆಚ್ ಎಸ್. ಯುದ್ಧದಲ್ಲಿ ಜಯಶೀಲರಾದ ತಾವು, ಭೀಷ್ಮರು, ಕರ್ಣನು, ಕೃಪನು, ಅಶ್ವತ್ಥಾಮನು, ವಿಕರ್ಣನು, ಸೋಮದತ್ತನ ಮಗನಾದ ಭೂರಿಶ್ರವನು,

ವಿಶೇಷ: ಸರ್ವ ಶ್ರೇಷ್ಠರು ದ್ರೋಣರು ಎಂಬುದನ್ನು ಸೂಚಿಸಲು ಮೊದಲು ಭೀಷ್ಮರ ಹೆಸರನ್ನು ಹೇಳದೆ ಭವಾನ್ ಎಂದು ಹೇಳಿದನು. ಕರ್ಣನ ಹೆಸರು ಮೊದಲು ತೆಗೆದುಕೊಂಡಿದ್ದರಿಂದ ದ್ರೋಣರಿಗೆ ಸಿಟ್ಟುಬಂದೀತೆಂದು ಶಂಕಿಸಿ ಅವರ ಭಾವಮೈದುನ ಕೃಪರ ಹೆಸರು ಹೇಳುವಾಗ ಸಮಿತಿಂಜಯಃ ಎಂಬ ವಿಶೇಷಣ ಕೊಟ್ಟು ಹೇಳಿದ( ಸಮಿತಿಂ ಯುದ್ಧಂ ಜಯತಿ ಚೆನ್ನಾಗಿ ಯುದ್ಧಮಾಡುವವನು) . ತನ್ನ ಬಂಧುಗಳ ಹೆಸರನ್ನು ಹೇಳುವಾಗ ಮೊದಲು ಅಶ್ವತ್ಥಾಮರ ಹೆಸರು ಹೇಳಿದ್ದು ದ್ರೋಣರ ಪ್ರೀತ್ಯರ್ಥವಾಗಿ.।।8।।

ನನಗೋಸ್ಕರ ಪ್ರಾಣತ್ಯಾಗದಲ್ಲಿ ಕೃತನಿಶ್ಚಯರಾಗಿಯೂ, ನಾನಾವಿಧವಾದ ಶಸ್ತ್ರಾಸ್ತ್ರವುಳ್ಳವರಾಗಿಯೂ ಯುದ್ಧದಲ್ಲಿ ಕುಶಲರಾದ ಇನ್ನೂ ಬೇರೆ ಶೂರರು ನಮ್ಮ ಸೈನ್ಯದಲ್ಲಿ ಇರುತ್ತಾರೆ.

ವಿಶೇಷ: ತ್ಯಕ್ತ= ಬಿಡಲ್ಪಟ್ಟ (ಪ್ರಾಣತ್ಯಾಗದಲ್ಲಿ ನಿಶ್ಚಯಬುದ್ಧಿವುಳ್ಳವರೆಂಬ ಅರ್ಥದಲ್ಲಿ ಹೇಳಿದಾಗ್ಯೂ ಪ್ರಾಣ ಬಿಟ್ಟವರೆಂದೇ ಅರ್ಥವಾಗುವುದು. ಅಮಂಗಳ ಶಬ್ದವು ಮುಂದಾಗುವುದನ್ನು ಸೂಚಿಸುತ್ತೆ)।।9।।

ಶ್ಲೋ।। ಅಪರ್ಯಾಪ್ತಂ ತದಸ್ಮಾಕಂ ಬಲಂ ಭೀಷ್ಮಾಭಿರಕ್ಷಿತಂ।

ಪರ್ಯಾಪ್ತಂ ತ್ವಿದಮೇತೇಷಾಂ ಬಲಂ ಭೀಮಾಭಿರಕ್ಷಿತಂ।। 10/1।।

ಗೀ. ಪ್ರ. ಚಂ ಅಪರ್ಯಾಪ್ತಂ, ತತ್, ಅಸ್ಮಾಕಂ, ಬಲಂ, ಭೀಷ್ಮಾಭಿರಕ್ಷಿತಂ, ಪರ್ಯಾಪ್ತಂ, ತು ಇದಂ, ಏತೇಷಾಂ, ಬಲಂ, ಭೀಷ್ಮಾಭಿರಕ್ಷಿತಂ।।

ಭೀಷ್ಮಾಭಿರಕ್ಷಿತಂ= ಭೀಷ್ಮಾಚಾರ್ಯರಿಂದ ರಕ್ಷಿಸಲ್ಪಟ್ಟ, ಅಸ್ಮಾಕಂ=ನಮ್ಮ,ತತ್=ಆ, ಬಲಂ=ಸೈನ್ಯವು ಅಪರ್ಯಾಪ್ತಂ= ಪಾಂಡವರನ್ನು ಜಯಿಸುವುದಕ್ಕೆ ಅಸಮರ್ಥವಾದುದು, ಭೀಮಾಭಿರಕ್ಷಿತಂ=ಭೀಮಸೇನನಿಂದ ರಕ್ಷಿಸಲ್ಪಟ್ಟ, ಏತೇಷಾಂ= ಪಾಂಡವರ, ಇದಂ= ಈ, ಬಲಂ= ಸೈನ್ಯವು, ಪರ್ಯಾಪ್ತಂ ತು=ನಮ್ಮ ಸೈನ್ಯವನ್ನು ಜಯಿಸಲು ಸಮರ್ಥ ವಾದುದು.

ಗೀತಾವಿವೃತ್ತಿಃ ಬಲದ್ವಯೇ ಬಲಿಷ್ಠಪರಿಗಣನೇ ಪಾಂಡವವಿಜಯೇ ಮಮ ಸಂದೇಹೋಽಸ್ತಿ ತತೋ ಭವದಾದಯಃ ಸರ್ವೇ ಬಹುಸನ್ನದ್ಧಾ ಭವಂತ್ವಿತಿ ಭಾವೇನಾಹ।। ಅಪರ್ಯಾಪ್ತಮಿತಿ।। ಸೇನಾಪತಿಭೂತಭೀಷ್ಮಾಭಿರಕ್ಷಿತಮ್। ಅಸ್ಮಾಕಂ ತತ್ಪ್ರಾಗುಕ್ತಬಲಿಷ್ಠೋಪೇತಂ ಬಲಂ ಅಪರ್ಯಾಪ್ತಂ ಪಾಂಡವಜಯೇ ನ ಸಮರ್ಥಂ ಪ್ರತೀಯತೇ। ಭೀಷ್ಮಾಭಿರಕ್ಷಿತಮಿದಂ ಪಾಂಡವಾನಾಂ ಬಲಂ ತು ಪರ್ಯಾಪ್ತಂ ಅಸ್ಮದ್ವಿಜಯೇ ಶಕ್ತಂ ಪ್ರತೀಯತೇ।। 10 ।।

ಶ್ರೀ ಹೆಚ್. ಎಸ್.ಅವತಾರಿಕೆ: ಬಲದ್ವಯದಲ್ಲಿ ಬಲಿಷ್ಠ ಪರಿಗಣನೆಯಲ್ಲಿ ನನಗೆ ಪಾಂಡವವಿಜಯದಲ್ಲಿ ಸಂದೇಹ ವುಂಟಾಗಿದೆ ಆದ್ದರಿಂದ ನೀವೆಲ್ಲರೂ ಬಹುಸನ್ನದ್ಧರಾಗಿರಬೇಕೆಂಬ ಭಾವದಿಂದ ಹೇಳುತ್ತಾನೆ.

ಭೀಷ್ಮನಿಂದ ರಕ್ಷಿತವಾದ ನಮ್ಮ ಬಲ ಜಯಿಸುವುದರಲ್ಲಿ ಅಸಮರ್ಥವಾಗಿಯೂ, ಭೀಮಸೇನನಿಂದ ರಕ್ಷಿತವಾದ ಪಾಂಡವರ ಬಲವು ನಮ್ಮನ್ನು ಜಯಿಸುವುದರಲ್ಲಿ ಸಮರ್ಥವಾಗಿಯೂ ತೋರುತ್ತೆ.

ವಿಶೇಷ: ತವ ಶಿಷ್ಯೇಣ ಧೀಮತಾ ಎಂದು ಹೇಳಿದ ದುರ್ಯೋಧನನೇ ಧೃಷ್ಟದ್ಯುಮ್ನಾಭಿರಕ್ಷಿತಂ ಎಂದು ಹೇಳದೇ ''ಭೀಮಾಭಿರಕ್ಷಿತಂ'' ಎಂದು ಏಕೆ ಹೇಳಿದನೆಂದರೆ:- ಸರ್ವಾಪೇಕ್ಷೆಯಿಂದ ಭೀಮನಿಂದಲೇ ಆತನಿಗೆ ಭಯ ಹೆಚ್ಚು. ಭೀಷ್ಮಾದಿಗಳೂ ಭೀಮಸಮಬಲರಲ್ಲವೆಂದು ತಿಳಿದಿದ್ದನು. ಭೀಷ್ಮದ್ರೋಣರೂ ಕೂಡ ಭೀಮನು ತಮ್ಮಿಂದ ದುರ್ಧರ್ಷನೆಂದು ತಿಳಿದಿದ್ದರು. ಆದ್ದರಿಂದಲೇ ಧೃಷ್ಟದ್ಯುಮ್ನನು ಹೆಸರಿಗೆ ಮಾತ್ರ ನಾಯಕನು. ನಿಜವಾಗಿ ತಮಗೆ ಭೀತಿಪಡಿಸುವ ಪರಬಲನಾಯಕನು ಭೀಮನೇ ಎಂದು ತಿಳಿದು ಭೀಷ್ಮಾದಿಗಳ ಮಾತನ್ನು ಸ್ಮರಿಸಿಕೊಂಡು ಯುದ್ಧಾರಂಭದಲ್ಲಿ ಕಾತುರನಾಗಿದ್ದಾನೆ. ಇದಕ್ಕೆ ಪ್ರಮಾಣ.

1. ಉದ್ಯೋಗಪರ್ವದಲ್ಲಿ ಭೀಷ್ಮವಚನ: ''ನ ತಸ್ಯಾಸ್ತಿ ಸಮೋ ಯುದ್ಧೇ ಗದಯಾ ಸಾಯಕೈರಪಿ। ನಾಗಾಯುತ ಬಲೋ ಮಾನೀ ತೇಜಸಾ ನ ಸಮಾನುಷಃ॥''

2. ಶಾಂತಿಪರ್ವದಲ್ಲಿ ಭೀಷ್ಮವಚನ:''ವಾಯುರ್ಭೀಮೋ ಭೀಮನಾದೋ ಮಹೌಜಾಃ ಸರ್ವೇಷಾಂಚ- ಪ್ರಾಣಿನಾಂ ಪ್ರಾಣಭೂತಃ। ಅನಾವೃತ್ತಿರ್ದೇಹಿನಾಂ ದೇಹಪಾತೇ ತಸ್ಮಾದ್ವಾಯುರ್ದೇವ ದೇವೋ- ವರಿಷ್ಠಃ॥''

3. ವಿರಾಟಪರ್ವದಲ್ಲಿ ವಿದುರರ ವಚನ:'' ಪಂಚಾನಾಂ ಪಾಂಡುಪುತ್ರಾಣಾಂ ಯತ್ತೇಜಃ ಪ್ರಜಿಹೀರ್ಷಸಿ। ಪಂಚಾನಾ ಮಿವ ಭೂತಾನಾಂ ಮಹತಾಂ ಲೋಕಧಾರಿಣಾಂ। ಭೀಮಸೇನಂ ತು ಕೌಂತೇಯಂ ಯಸ್ಯನಾಸ್ತಿ ಸಮೋ ಬಲೇ॥''

4. ಉದ್ಯೋಗ ಪರ್ವದಲ್ಲಿ ಧೃತರಾಷ್ಟ್ರ ಉವಾಚ: '' (ಅ 51) ಸರ್ವ ಏತೇ ಮಹೋತ್ಸಾಹಾ ಯೇ ತ್ವಯಾ ಪರಿಕೀರ್ತಿತಾಃ। ಏಕತಸ್ತ್ವೇವತೇ ಸರ್ವೇ ಸಮೇತಾ ಭೀಮಏಕತಃ। ಭೀಮಸೇನಾದ್ಧಿ ಮೇ ಭೂಯೋ ಭಯಂ ಸಂಜಾಯತೇ ಮಹತ್। ಕೃದ್ಧಾದಮರ್ಷಣಾತ್ತಾತ ವ್ಯಾಘ್ರಾದಿವ ಮಹಾರುರೋಃ। ಜಾಗರ್ಮಿ ರಾತ್ರಯಃ ಸರ್ವಾ ದೀರ್ಘಮುಷ್ಣಂಚನಿಃ ಶ್ವಸನ್॥''

5. ದ್ರೋಣವಾಕ್ಯ: ''ಸಪುತ್ರಃ ಸಕೃಪಃ ಶಸ್ತ್ರಂ ಗೃಹೀಷ್ಯೇ ಭವತಾಂ ಕೃತೇ। ರಕ್ಷಣೇ ಭವತಾಂಚೈವ ಕುರ್ಯಾಂ ಯತ್ನಂ ಸಶಕ್ತಿತಃ। ನ ತು ಭೀಮಾದ್ರಕ್ಷಿತಂ ವಃ ಶಕ್ತಃ ಸತ್ಯಂ ಬ್ರವೀಮ್ಯಹಂ॥''

6. ವೇದವ್ಯಾಸರೇ ಹೇಳುತ್ತಾರೆ:'' ದ್ವಾವಿಮೌ ಪುರುಷೌ ಲೋಕೇ ವಾಸುದೇವಾದನಂತರೌ। ಭೀಮಸ್ತು ಪ್ರಥಮಂ ತತ್ರ ದ್ವಿತೀಯೋ ದ್ರೌಣಿರೇವಚ॥''

ಕಲಿಸ್ವರೂಪನಾದ ದುರ್ಯೋಧನನಿಗೆ ಇಂಥಾ ಭೀಮಸೇನನಿಂದ ಭಯವು ಹುಟ್ಟಿದ್ದೇನಾಶ್ಚರ್ಯವಲ್ಲ.

ಶ್ಲೋ॥ ಅಯನೇಷು ಚ ಸರ್ವೇಷು ಯಥಾಭಾಗಮವಸ್ಥಿತಾಃ।
ಭೀಷ್ಮಮೇವಾಭಿರಕ್ಷಂತು ಭವಂತಸ್ಸರ್ವ ಏವ ಹಿ॥ 11/1॥

ಗೀ.ಪ್ರ) ಅಯನೇಷು, ಚ , ಸರ್ವೇಷು, ಯಥಾಭಾಗಂ, ಅವಸ್ಥಿತಾಃ, ಭೀಷ್ಮಂ, ಏವ, ಅಭಿರಕ್ಷಂತು, ಭವಂತಃ, ಸರ್ವೇ, ಏವ, ಹಿ॥

ಹಿ=ಪಾಂಡವರ ಸೈನ್ಯವು ಬಲಿಷ್ಠವಾದ ಕಾರಣ, ಸರ್ವೇಷು=ಸಮಸ್ತವಾದ, ಅಯನೇಷು=ವ್ಯೂಹ ಪ್ರವೇಶ ಮಾರ್ಗಗಳಲ್ಲಿ ಯಥಾಭಾಗಂ= ನಿಮಗೆ ನಿಯಮನಮಾಡಿದ ಪ್ರಕಾರ, ಭವಂತಃ ಸರ್ವೇ=ನೀವೆಲ್ಲರೂಕೂಡಿ, ಅವಸ್ಥಿತಾಃ= ನಿಂತವರಾಗಿ, ಭೀಷ್ಮಂಏವ=ಭೀಷ್ಮಾಚಾರ್ಯರನ್ನೇ, ಅಭಿ ರಕ್ಷಂತು = ರಕ್ಷಣೆಮಾಡಿರಿ.

ಗೀತಾವಿವೃತ್ತಿಃ ಹಿ ಯಸ್ಮಾದೇವಮತೋ ಭವಂತಃ ಸರ್ವ ಏವ ಸರ್ವೇಷ್ವಯನೇಷು ವ್ಯೂಹಪ್ರವೇಶಮಾರ್ಗೇಷು ಯಥಾಭಾಗಮವಸ್ಥಿತಾಃ ಸ್ವಸ್ವವರಣಭೂಮಿಸ್ಥಾನೇಷು ದೃಢಮವಸ್ಥಿತಾಃ ಸಂತಃ ಭೀಷ್ಮಮೇವಾಭಿರಕ್ಷಂತು। ಅನ್ಯೈರ್ಯುಧ್ಯಮಾನೋ ಭೀಷ್ಮಃ ಪೃಷ್ಠತೋಽರಿಭಿರ್ಯಥಾ ನ ಹನ್ಯತೇ ತಥಾ ರಕ್ಷಂತ್ವಿತಿ ದ್ರೋಣಾಚಾರ್ಯಮುಕ್ತ್ವಾ ವಿಷಸಾದ॥ 11 ॥

ಶ್ರೀ. ಹೆಚ್.ಎಸ್.ಅವರಿಗಿಂತಲೂ ನಮಗೆ 4 ಅಕ್ಷೋಹಿಣೀ ಸೈನ್ಯ ಹೆಚ್ಚಾಗಿದ್ದರೂ ಉಭಯ ಸೇನೆಯಲ್ಲಿರುವ ಬಲಿಷ್ಠರನ್ನು ಪರಿಗಣನೆ ಮಾಡಿ ನೋಡಿದರೆ ನಮಗೆ ಜಯವಾಗಲಾರದೆಂದು ತೋರುತ್ತದೆ. ಆದ್ದರಿಂದ ನೀವೆಲ್ಲರೂ ಬಹಳ ಜಾಗರೂಕರಾಗಿ ನಮ್ಮ ಮುಖ್ಯ ಸೇನಾಧಿಪತಿಗಳಾದ ಭೀಷ್ಮ ಪಿತಾಮಹರಿಗೆ ಬೆಂಗಾವಲಾಗಿದ್ದು ವ್ಯೂಹ ಪ್ರವೇಶಮಾಡುವ ಮಾರ್ಗಗಳಲ್ಲಿ ನಿಮ್ಮ ನಿಮ್ಮ ರಣಭೂಮಿಯ ಸ್ಥಾನಗಳಲ್ಲಿ ದೃಢವಾಗಿ ನಿಂತು ಇತರರೊಡನೆ ಯುದ್ಧಮಾಡುವ ಭೀಷ್ಮನು ಹಿಂದುಗಡೆಯಿಂದ ಬಂದ ಶತ್ರುಗಳಿಂದ ಹತನಾಗದಂತೆ ಅವನನ್ನು ಕಾಪಾಡಬೇಕು ಎಂದು ದುರ್ಯೋಧನನು ಹೇಳಿದನು.

ವಿಶೇಷ:- 1) ''ಅಭಿರಕ್ಷಂತು'' ಎಂಬ ಪದವು ಮಂತ್ರಶಾಸ್ತ್ರ ಪ್ರಸಿದ್ಧ. ಮಂತ್ರದಿಂದ ಪೂತವಾದ ಬಿಳೀಸಾಸಿವೆ ಯನ್ನು ಯಾತುಧಾನಾದಿಗಳು ಉಪದ್ರವ ಕೊಡದಿರಲು ಸುತ್ತಲೂ ಎರೆಚುವಾಗ ''ಏನಂ ಯಾತುಧಾರೇಭ್ಯೋ ಅಭಿರಕ್ಷಂತು'' ಎಂದು ಹೇಳುತ್ತಾರೆ. ಇಲ್ಲಿ ದುರ್ಯೋಧನನು ಅದೇ ಪದವನ್ನು ಉಪಯೋಗಿಸಿರು ವುದರಿಂದ ಭೀಷ್ಮರನ್ನು ಹಿಂದಿನಿಂದ ಬಂದು ಕೊಲ್ಲದಂತೆ ಅವರನ್ನು

ಬೇಡಿದ ರೆಂದರ್ಥ. 2) ಭೀಷ್ಮಮೇವ ಎಂಬಲ್ಲಿನ ಏವ ಶಬ್ದವು ಈ ಶ್ಲೋಕದ ಅನೇಕ ಶಬ್ದಗಳಲ್ಲಿ ಅನ್ವಯಿಸುತ್ತದೆ. ಭೀಷ್ಮಮೇವ= ಭೀಷ್ಮನನ್ನೇ ಎನ್ನುವುದರ ಅರ್ಥವೇನೆಂದರೆ:- ಭೀಷ್ಮರು ಸೇನಾನಾಯಕರಾದ್ದರಿಂದಲೂ, ಜಯಸಂಪಾದನೆಗೆ ಅವರೇ ಪ್ರಧಾನರಾದ್ದರಿಂದಲೂ, ಬಹುಸಾಹಸದಿಂದ ಅವರನ್ನೇ ಕಾಪಾಡ ಬೇಕೆಂದರ್ಥ ಅಥವಾ ಸಾವಿರ ರಥಿಗಳನ್ನು10ಸಾವಿರಯೋಧರನ್ನು ಪ್ರತಿದಿವಿಸವೂ ಕೊಲ್ಲುತ್ತೇನೆಂದು ಪ್ರತಿಜ್ಞೆಮಾಡಿದ್ದಾರಾದ್ದರಿಂದ ಅವರನ್ನೇ ಕಾಪಾಡಬೇಕೆಂದು ಅರ್ಥ. ಅಥವಾ ಐಕ್ಯಮತ್ಯ ಅವಶ್ಯಕವಾದ್ದರಿಂದ ಸೇನಾಕ್ಕೆ ಐಕ್ಯಪ್ರದನಾದ ನಾಯಕನನ್ನಷ್ಟೇ ಮೊದಲು ಕಾಪಾಡಬೇಕು. ಅಭಿರಕ್ಷಂತ್ವೇವ ಎಂಬ ಯೋಜನೆಯಲ್ಲಿ ನೀವು ಸ್ವತಂತ್ರ ವಾಗಿ ಬೇರೆ ಬೇರೆ ಕಡೆಗೆ ಯುದ್ಧಕ್ಕೆ ಹೊರಟುಹೋಗಬೇಡಿ ಎಂದುಅರ್ಥ.''ಸರ್ವಏವ'' ಎಂಬ ಯೋಜನೆಯಲ್ಲಿ ಯದ್ಯಪಿ ದುಶ್ಶಾಸನಾದಿ 12 ಜನರು ಭೀಷ್ಮಾಚಾರ್ಯರಿಗೆ ಅಂಗರಕ್ಷಕರಾಗಿದ್ದಾರೆ. ಆದರೂ ಕೂಡ ಈ ವಿಶೇಷ ಸಮಯದಲ್ಲಿಸರ್ವರೂ ರಕ್ಷಕರಾಗಿರುವುದು ಅವಶ್ಯಕವಾಗಿ ಕಾಣುತ್ತೆಂದು ಧೈರ್ಯಹೀನತೆಯಿಂದ ಹೇಳುತ್ತಾನೆ. ''ಯಥಾಭಾಗಮವಸ್ಥಿತಾ'' ಎಂಬ ಯೋಜನೆಯಲ್ಲಿಸೇನಾನಾಯಕನು ನಿರ್ದೇಶಮಾಡಿದ ಸ್ಥಳದಲ್ಲಿದ್ದೇ ಯುದ್ಧವಮಾಡಬೇಕು. ಭೀರುಗಳಾಗಿ ಓಡಿಹೋಗ ಬಾರದು. (ಇದೂ ಇವನ ಮನೋದೌರ್ಬಲ್ಯವನ್ನೇ ತೋರಿಸುತ್ತೆ)

ಶ್ಲೋ।। ತಸ್ಯ ಸಂಜನಯನ್ ಹರ್ಷಂ ಕುರುವೃದ್ಧಃ ಪಿತಾಮಹಃ।

ಸಿಂಹನಾದಂ ವಿನದ್ಯೋಚ್ಚೈಃ ಶಂಖಂ ದಧ್ಮೌ ಪ್ರತಾಪವಾನ್।। 12/1।।

ಗೀ. ಪ್ರ) ತಸ್ಯ, ಸಂಜನಯನ್, ಹರ್ಷಂ, ಕುರುವೃದ್ಧಃ, ಪಿತಾಮಹಃ, ಸಿಂಹನಾದಂ, ವಿನದ್ಯ, ಉಚ್ಚೈಃ , ಶಂಖಂ, ದಧ್ಮೌ, ಪ್ರತಾಪವಾನ್।।

ಕುರುವೃದ್ಧಃ=ಕುರುವಂಶಸ್ಥರಲ್ಲಿ ವೃದ್ಧನಾದ, ಪ್ರತಾಪವಾನ್= ಪರಾಕ್ರಮವಂತರಾದ, ಪಿತಾಮಹಃ= ಭೀಷ್ಮಾ ಚಾರ್ಯರು, ತಸ್ಯ= ಆ ದುರ್ಯೋಧನನಿಗೆ, ಹರ್ಷಂ=ಉತ್ಸಾಹವನ್ನು, ಸಂಜನಯನ್=ಹುಟ್ಟಿಸುವುದಕ್ಕೋಸ್ಕರ, ಉಚ್ಚೈಃ=ಘಟ್ಟಿಯಾಗಿ, ಸಿಂಹನಾದಂ =ಸಿಂಹನಾದವನ್ನು,ವಿನದ್ಯ=ಮಾಡಿ( ಸಿಂಹದಂತೆ ಗರ್ಜನೆಯ ಮಾಡಿ) , ಶಂಖಂ= ಶಂಖವನ್ನು , ದಧ್ಮೌ=ಧ್ವನಿಯಿಂದ ಪೂರ್ಣಮಾಡಿದನು.

ಗೀತಾವಿವೃತ್ತಿಃ ಏವಂ ವಿಷಾದಿನಸ್ತಸ್ಯ ದುರ್ಯೋಧನಸ್ಯ ಹರ್ಷಂ ಸಂಜನಯನ್ ಜನಯಿತುಮ್। ''ಲಕ್ಷಣಹೇತ್ವೋಃ ಕ್ರಿಯಾಯಾ'' ಇತಿ ಹೇತೌ ಶತ್ರಂತಮ್। ಪ್ರತಾಪವಾನ್ ಕುರುವೃದ್ಧಃ ಪಿತಾಮಹೋ ಭೀಷ್ಮಃ ಸಿಂಹನಾದಂ ಉಚ್ಚೈರ್ವಿನದ್ಯ ಶಂಖಂ ದಧ್ಮೌ। ಧ್ಮಾ ಶಬ್ದೇ।।12।।

ಶ್ರೀ ಹೆಚ್.ಎಸ್.ಈ ಪ್ರಕಾರ ವಿಷಣ್ಣನಾದ ದುರ್ಯೋಧನನಿಗೆ ಸಂತೋಷವನ್ನು ಉಂಟುಮಾಡುವುದಕ್ಕೆ ಕುರುಕುಲ ಶ್ರೇಷ್ಠ ರಾದ ಭೀಷ್ಮರು ಗಟ್ಟಿಯಾಗಿ ಸಿಂಹನಾದವನ್ನು ಮಾಡಿ ಶಂಖವನ್ನು ಊದಿದರು.

ವಿಶೇಷ।- ಸಂಜನಯನ್(ತಸ್ಮೈ ಇತ್ಯರ್ಥೇ ಶತ್ ಪ್ರತ್ಯಯಃ= ಸಂಜನನಾರ್ಥಂ) ಸಂತೋಷವಾಗಲೀ ಎಂದೇ ಶಂಖವೂದಿದರು. ಈ ಮಾತಿನಿಂದ ದುರ್ಯೋಧನನಿಗೆ ಅದುವರೆಗೆ ವಿಷಾದವಿತ್ತೆಂದು ಸೂಚಿತವಾಗುತ್ತೆ. ಕುರುವೃದ್ಧಃ= ಕುರುವೃದ್ಧತ್ವಾತ್ ರಾಜರ್ಷಿಗಳಾದ ಮತ್ತುಕುರುಕುಲದಲ್ಲಿವೃದ್ಧರಾದ್ದರಿಂದ ದುರ್ಯೋಧನನ ಹೃದಯ ಇಂಗಿತವನ್ನುಯೋಗಬಲದಿಂದ ತಿಳಿದು ಪಿತಾಮಹರಾದ್ದರಿಂದ ಮೊಮ್ಮಗನಲ್ಲಿ ಕನಿಕರಹೊಂದಿದರು.ಪ್ರತಾಪವಾನ್ ಎಂದು ಹೇಳಿರುವುದರಿಂದ ಶ್ರೇಷ್ಠವಾದ ಸಿಂಹನಾದವನ್ನು ಮಾಡಿದರು. ದುರ್ಯೋಧನನು ''ಅಪರ್ಯಾಪ್ತಂ ತದಸ್ಮಾಕಂ''_(ಜಯಿಸಲು ಅಸಮರ್ಥರು) ಈ ರೀತಿ ಹೇಳಿರುವುದರಿಂದ ಅವನಿಗೆ ವಿಷಾದನಾಶಮಾಡಿ ಮನಸ್ಸಿನಲ್ಲಿಧೈರ್ಯ ಹುಟ್ಟಿಸಬೇಕೆಂಬ ಉದ್ದೇಶದಿಂದ ಗಟ್ಟಿಯಾಗಿ ಶಂಖವನ್ನು ಊದಿದರು.

ಭೀಷ್ಮಪರ್ವದಲ್ಲಿ ಹೀಗೆ ಹೇಳಿದೆ:- ''ಅಹನ್ಯಹನಿ ಪಾರ್ಥಾನಾಂ ವೃದ್ಧಃ ಕುರುಪಿತಾಮಹಃ। ಭರದ್ವಾಜಾತ್ಮಜಶ್ಚೈವ ಪ್ರಾತರುತ್ಥಾಯ ಸಂಯತೌ। ಜಯೋಸ್ತುಪಾಂಡುಪುತ್ರಾಣಾಂ ಇತ್ಯೂಚತುರರಿಂದಮೌ। ಯುಯುಧಾತೇ ತವಾರ್ಥಾಯ ಯಥಾಸಸಮಯಃ ಕೃತಃ।।'' ಹೀಗೆ ಭೀಷ್ಮಾಚಾರ್ಯರು ಪಾಂಡವರಿಗೆ ಆಶೀರ್ವಾದ ಮಾಡುವವರಾದರೂ ಕಪಟಯುದ್ಧಮಾಡಲಿಲ್ಲ. ಪ್ರತಿಜ್ಞೆ ಮಾಡಿದಂತೆ

ಯೋಧರನ್ನು ಸಂಹರಿಸಿ ರಾಜನಿಗೆ ಸಂತೋಷಪಡಿಸಿಯೇ ಪಡಿಸಿದರೆಂದು ಕುರುವೃದ್ಧಃ ಪಿತಾಮಹಃ, ಪ್ರತಾಪವಾನ್ ಎಂಬ ವಿಶೇಷಣಗಳು ಸೂಚಿಸುವವು. ಕುರುವೃದ್ಧರಾದ್ದರಿಂದ ಸತ್ಯದಲ್ಲಿ ದೀಕ್ಷೆಪ್ರತಾಪ ವುಳ್ಳವರಾದ್ದರಿಂದ ಪ್ರತಿಜ್ಞಾಪೂರ್ಣ ಮಾಡುವ ಸಾಮರ್ಥ್ಯವಿದೆ. ಪಿತಾಮಹರಾದ್ದರಿಂದ ರಾಜನ ನಿಂದೋಕ್ತಿಗಳೇ ಮುಂತಾದುವುಗಳ ಉಪೇಕ್ಷೆಮಾಡಿ ''ಮಿತ್ರದ್ರೋಹೇ ನಿಷ್ಕೃತಿ ರ್ನಾಸ್ತಿ ಲೋಕೇ ಮಹತ್ಪಾಪಂ ಬ್ರಹ್ಮಹತ್ಯಾ ಸಮಂತತ್'' ಎಂದು ಅಶ್ವಮೇಧಪರ್ವ 5ನೇ ಅಧ್ಯಾಯ ದಲ್ಲಿ ಹೇಳಿರುವಂತೆ ದ್ರೋಹಮಾಡಬಾರದೆಂದು ಅನುಸಂಧಾನಮಾಡಿಯೇ ಯುದ್ಧಮಾಡಿದರೆಂದು ಅರ್ಥ. ಕರ್ಣನು ಕೌರವರನ್ನು ಕುರಿತು ಮಾತನಾಡುವಾಗ ಭೀಷ್ಮರನ್ನು ನಿಂದಿಸಿದ್ದನು. ಅದೇನೆಂದರೆ :- '' ಶ್ರೋತ್ರವ್ಯಂ ಖಲುವೃದ್ಧಾನಾಂ ಇತಿ ಶಾಸ್ತ್ರ ನಿದರ್ಶನಂ। ನ ತು ಏವಂ ಹ್ಯತಿ ವೃದ್ಧಾನಾಮ್ ಪುನ ರ್ಬಾಲಾಹಿ ತೇ ಮತಾಃ॥'' ಆದ್ದರಿಂದ ಭೀಷ್ಮರು ಕರ್ಣ ಪಕ್ಷಪಾತಿಯಾದ ದುರ್ಯೋಧನನಿಗೆ ಅತಿವೃದ್ಧನಾದರೂ ತರುಣನಂತೆ ಯುದ್ಧಮಾಡಬಲ್ಲೆನೆಂದು ತೋರಿಸಲು ''ಉಚ್ಚೈಃ ಶಂಖಂ ದಧ್ಮೌ''

ಶ್ಲೋ॥ ತತಃ ಶಂಖಾಶ್ಚ ಭೇರ್ಯಶ್ಚ ಪಣವಾನಕಗೋಮುಖಾಃ।
ಸಹಸೈವಾಭ್ಯಹನ್ಯಂತ ಸಶಬ್ದಸ್ತುಮುಲೋಽಭವತ್॥13/1॥

ಗೀ.ಪ್ರ) ತತಃ, ಶಂಖಾಃ, ಚ , ಭೇರ್ಯಃ, ಚ, ಪಣವಾನಕಗೋಮುಖಾಃ, ಸಹಸಾ, ಏವ, ಅಭ್ಯಹನ್ಯಂತ, ಸಃ, ಶಬ್ದಃ, ತುಮುಲಃ, ಅಭವತ್॥

ತತಃ- ಭೀಷ್ಮಾಚಾರ್ಯರು ಶಂಖಧ್ವನಿಯನ್ನು ಮಾಡಿದ ತರುವಾಯ, ಶಂಖಾಃ= ಶಂಖಗಳು, ಣಚ= ಮತ್ತು, ಭೇರ್ಯಃ= ನಗಾರಿಗಳು, ಚ= ಮತ್ತು, ಪಣವಾನಕಗೋಮುಖಾಃ= ಪಣವ ಮೊದಲಾದ ಅನೇಕ ವಾದ್ಯಗಳು ಸಹಸಾ ಏವ= ಏಕಕಾಲದಲ್ಲಿ, ಅಭ್ಯಹನ್ಯಂತ= ಬಾರಿಸಲ್ಪಟ್ಟವು, ಸಃ = ಆ ಶಬ್ದವು, ತುಮುಲಃ= ಎಲ್ಲದೇಶಗಳಲ್ಲಿ ವ್ಯಾಪ್ತವಾದುದು, ಅಭವತ್= ಆಯಿತು।

ಗೀತಾವಿವೃತ್ತಿಃ ತತಃ ತಚ್ಛಂಖಧ್ವಾನಾನಂತರಂ ಪಣವಾನಕಗೋಮುಖಾಃ ವಾದ್ಯವಿಶೇಷಾಃ ಸಹಸೈವ ಯುಗಪದೇವ। ತುಮುಲಃ ಸರ್ವತ್ರ ಪರಿಪೂರ್ಣೋಽಭವತ್॥ 13 ॥

ಶ್ರೀ ಹೆಚ್.ಎಸ್. ಅನಂತರ ಪಣವ, ಆನಕ, ಗೋಮುಖ, ಶಂಖ, ಭೇರಿ ಇತ್ಯಾದಿ ವಾದ್ಯಗಳನ್ನು ಬಾರಿಸಿದರು. ಒಂದೇ ವೇಳೆಯಲ್ಲಿ ಈ ಶಬ್ದವು ಸರ್ವತ್ರ ವ್ಯಾಪಿಸಿತು.

ಶ್ಲೋ॥ ತತಃ ಶ್ವೇತೈರ್ಹಯೈರ್ಯುಕ್ತೇ ಮಹತಿಸ್ಯಂದನೇಸ್ಥಿತೌ।
ಮಾಧವಃ ಪಾಂಡವಶ್ಚೈವ ದಿವ್ಯೌ ಶಂಖೌ ಪ್ರದಧ್ಮತುಃ॥14/1॥

ಗೀಪ್ರ) ತತಃ, ಶ್ವೇತೈಃ, ಹಯೈಃ, ಯುಕ್ತೇ, ಮಹತಿ, ಸ್ಯಂದನೇ, ಸ್ಥಿತೌ, ಮಾಧವಃ, ಪಾಂಡವಃ, ಚ, ಏವ, ದಿವ್ಯೌ, ಶಂಖೌ, ಪ್ರದಧ್ಮತುಃ॥

ತತಃ= ದುರ್ಯೋಧನನ ಸೈನ್ಯದಲ್ಲಿ ಶಂಖಧ್ವನಿಯಾದ ತರುವಾಯ, ಮಾಧವಃ= ಶ್ರೀಕೃಷ್ಣನು, ಚ= ಮತ್ತು ಪಾಂಡವಃ = ಅರ್ಜುನನು, ಏತೌ= ಇವರಿಬ್ಬರು, ಶ್ವೇತೈಃ= ಬೆಳ್ಳಗಿರುವ, ಹಯೈಃ= ಕುದುರೆಗಳಿಂದ, ಯುಕ್ತೇ= ಕೂಡಿದ, ಮಹತಿ= ಉತ್ತಮವಾದ, ಸ್ಯಂದನೇ= ರಥದಲ್ಲಿ, ಸ್ಥಿತೌ ಏವ= ಕುಳಿತವರಾಗಿಯೇ, ದಿವ್ಯೌ= ಶ್ರೇಷ್ಠವಾದ, ಶಂಖೌ= ಶಂಖಗಳನ್ನು, ಪ್ರದಧ್ಮತುಃ= ಊದಿದರು.

ಗೀತಾವಿವೃತ್ತಿಃ ತತಃ ತೇಷಾಂ ಘೋಷಾನಂತರಂ ಶ್ವೇತಹಯೈಃ ಶುಕ್ಲವರ್ಣಾಶ್ವೈಃ ಯುಕ್ತೇ ಸ್ಯಂದನೇ ರಥೇ ಪಾಂಡವಸ್ತ್ವರ್ಜುನಃ। ಸ್ಥಿತಾವೇವ ಇತ್ಯನ್ವಯಃ॥ 14 ॥

ಶ್ರೀಹೆಚ್.ಎಸ್. ಅನಂತರ ಶ್ವೇತಾಶ್ವಗಳಿಂದ ಯುಕ್ತವಾದ ದಿವ್ಯರಥದಲ್ಲಿ ಕುಳಿತ ಕೃಷ್ಣಾರ್ಜುನರು ದಿವ್ಯ ಶಂಖಗಳನ್ನು ಊದಿದರು.

ವಿಶೇಷಾರ್ಥ:- ಪಾಂಡವಶ್ಚೈವ ಅನ್ನುವುದರಲ್ಲಿರುವ ''ಏವ'' ಶಬ್ದವು ಸ್ಥಿತೌ ಎನ್ನುವ ಶಬ್ದದಲ್ಲಿ ಅನ್ವಯ. ಸ್ಥಿತಾವೇವ= ಕುಳಿತವರಾಗಿಯೇ (ಶಂಖಗಳನ್ನೂದಿದರು) ಎಂದರ್ಥ.

ಮಹತಿಸ್ಯಂದನೇ= ರಥಕ್ಕೆ ಮಹತ್ವವೇನೆಂದರೆ: ಇದು ಅಗ್ನಿದತ್ತ ರಥವು. ವಿಧಿಯಿಂದ ಸೃಷ್ಟಿತವು. ಧ್ವಜ ದಲ್ಲಿ ಮಾರುತಿವುಳ್ಳದ್ದು. ಈ ರಥದಲ್ಲಿರುವಾಗ ಸೋಲಿಲ್ಲವೆಂದು ಸೂಚನೆ. ''ನಾದೇನ ರಿಪುಸೈನ್ಯಾನಾಂ ಯೇಷಾಂ ಸಂಜ್ಞಾಪ್ರಣಶ್ಯತಿ'' ರಥ ಬರುವಾಗವುಂಟಾಗುವ

ಧ್ವನಿಯಿಂದಲೇ ಶತ್ರುಗಳಿಗೆ ಮೂರ್ಛೆ ವುಂಟಾಗುತ್ತದೆ. ಪ್ರಶ್ನೆ:- ಮೊದಲು ಮಾಧವನ ಹೆಸರನ್ನುನಂತರ ಪಾರ್ಥನ ಹೆಸರನ್ನುಹೇಳಲು ಕಾರಣವೇನಿದೆ?

ಉ:- ಇದುವರೆಗೆ ದುರ್ಯೋಧನನ ವೃತ್ತಾಂತವಾಯ್ತು. ಇನ್ನು ಮುಂದೆ ಪಾಂಡವರ ವೃತ್ತಾಂತವನ್ನು ಹೇಳುವಾಗ ''ಮಾಧವಃ ಪಾಂಡವಶ್ಚೈವ'' ಎಂದು ಹೇಳಿರುವುದರಿಂದ ಪಾಂಡವ ಪಕ್ಷದಲ್ಲಿಮಾಧವನೇ ಪ್ರಧಾನನು ಅರ್ಜುನಾದಿಗಳೆಲ್ಲನಿಮಿತ್ತ ಮಾತ್ರವೆಂದು ಸೂಚಿತವಾಗುತ್ತೆ.

ರಥ ತದಪಶ್ಚಾತ್ ಭಾಗದಲ್ಲಿರುವ ಅರ್ಜುನನನ್ನು ರಥದ ಪೂರ್ವಭಾಗದಲ್ಲಿರುವ ಮಾಧವನು ರಕ್ಷಣೆ ಮಾಡುತ್ತಾನೆ ಂಬುದನ್ನು ಸೂಚಿಸಲು ಮೊದಲು ಮಾಧವ ಎಂದೂ ನಂತರ ಪಾಂಡವ ಎಂಬ ಪದಗಳನ್ನು ಉಪಯೋಗಿಸಿರುವರು. ಇಲ್ಲಿ ಗೋವಿಂದ , ಕೃಷ್ಣ ಇತ್ಯಾದಿ ಪದಗಳನ್ನು ಉಪಯೋಗಿಸದೇ ★<u>ಮಾಧವ</u>★ ಎಂದು ಅಂದಿರುವುದು ಈಗ ಹೇಳುವ ವಿಷಯಕ್ಕಾಗಿ:- ಮಾಯಾಃ ಧವಃ= ಮಾಧವಃ ಲಕ್ಷ್ಮೀಪತಿಯೆಂದು ಅರ್ಥ. ಪಾಂಡವರಿಗೆ ಲಕ್ಷ್ಮೀ ಅನುಗ್ರಹಾಖ್ಯವಾದ ಜಯವೆಂದು ಸೂಚಿತವಾಗುವುದು. ಪಾಂಡವರ ಜಯಕ್ಕೆ ಮಹತ್ತರವಾದ ರಥವೊಂದೇ ಸಾಕು. ಇಂಥಾದ್ದರಲ್ಲಿ ಅ ರಥದಲ್ಲಿ ಪಾಂಡವ ಮಾಧವರಿಬ್ಬರೂ ಕುಳಿತಿದ್ದಾರೆ. ಸಾಲದ್ದಕ್ಕೆ 2ಶಂಖಗಳನ್ನು ಊದಿದ್ದಾರೆ. ಹಿಂದೆ ಅನೇಕ ಶಂಖಗಳೂದಲ್ಪಟ್ಟವು- ಈ 2 ಶಂಖಗಳು ಅದಕ್ಕೆ ಉತ್ತರರೂಪವಾಗಿ ಊದಿದರೆ ಸಾಕೆ ಎಂಬ ಶಂಕಾಪರಿ ಹಾರಕ್ಕಾಗಿ ದಿವ್ಯೌ ಎಂದು ಹೇಳಲ್ಪಟ್ಟಿದೆ.

ಪ್ರ+ ದಧ್ಮತುಃ ''ಪ್ರ'' ಎಂಬ ಉಪಸರ್ಗವು ಎಂದರೆ ಪ್ರಕರ್ಷೇಣ ಊದಿದರು ಎಂದು ಅರ್ಥ ಕೊಡುತ್ತೆ. ಕೌರವಸೇನಾ ನಾಯಕರಾದ ಭೀಷ್ಮರೂ, ಸೈನಿಕರೂ ಶಂಖಗಳನ್ನು ಊದಿದಮೇಲೆ- ಧೃಷ್ಟದ್ಯುಮ್ನ ಶಂಖವನ್ನು ಊದದೇ ಮಾಧವ-ಪಾಂಡವರು ಶಂಖಗಳನ್ನು ಊದಿದ್ದಾರೆ. ಅದರಲ್ಲೂ ದಿವ್ಯ ಶಂಖಗಳನ್ನು ಊದಿದ್ದಾರೆ. ಮತ್ತುಗಟ್ಟಿಯಾಗಿ ಊದಿದ್ದಾರೆ. ಆದ್ದರಿಂದ ಈ ಎರಡು ಶಂಖಧ್ವನಿಯೇ ಪರಕೀಯರ ಶಂಖಧ್ವನಿಗಳನ್ನು ಮೀರಿ ಕೌರವರ ಹೃದಯ ವಿದಾರಣ ಮಾಡಿತೆಂದು ಮುಂದೆ ಸೂಚಿತವಾಗುತ್ತೆ.

ಶ್ಲೋ|| ಪಾಂಚಜನ್ಯಂ ಹೃಷಿಕೇಶೋ ದೇವದತ್ತಂ ಧನಂಜಯಃ|

ಪೌಂಡ್ರಂ ದಧ್ಮೌ ಮಹಾಶಂಖಂ ಭೀಮಕರ್ಮಾ ವೃಕೋದರಃ|| 15/1||

ಗೀತಾ ಪ್ರ.ಚಂ ಪಾಂಚಜನ್ಯಂ, ಹೃಷಿಕೇಶಃ, ದೇವದತ್ತಂ, ಧನಂಜಯಃ, ಪೌಂಡ್ರಂ, ದಧ್ಮೌ, ಮಹಾಶಂಖಂ, ಭೀಮಕರ್ಮಾ, ವೃಕೋದರಃ||

ಹೃಷಿಕೇಶಃ= ಶ್ರೀಕೃಷ್ಣನು, ಪಾಂಚಜನ್ಯಂ= ಪಾಂಚಜನ್ಯವೆಂಬ ಶಂಖವನ್ನು, ಧನಂಜಯಃ= ಅರ್ಜುನನು, ದೇವದತ್ತಂ= ದೇವದತ್ತವೆಂಬ ಶಂಖವನ್ನು, ಭೀಮಕರ್ಮಾ= ಭಯಂಕರಕಾರ್ಯವುಳ್ಳ, ವೃಕೋದರಃ= ಭೀಮಸೇನನು, ಪೌಂಡ್ರಂ= ಪೌಂಡ್ರವೆಂಬ, ಮಹಾಶಂಖಂ= ದೊಡ್ಡ ಶಂಖವನ್ನು, ದಧ್ಮೌ= ಊದಿದನು.

ಗೀತಾವಿವೃತ್ತಿ|| ತದ್ವಿವೃಣೋತಿ| ಪಾಂಚಜನ್ಯಮಿತಿ| ಹೃಷಿಕೇಶ ಶಬ್ದಾರ್ಥ ಉಕ್ತೋ ಭಾಷ್ಯೇ ಏಕಾದಶೇ| ''ಹೃಷಿಕಾಣಾಂ ಇಂದ್ರಿಯಾಣಾಂ ಈಶತ್ವಾಚ್ಚ ಹೃಷಿಕೇಶ'' ಇತ್ಯಾದಿ| ದಧ್ಮಾವಿತ್ಯನ್ವಯಃ|| 15 ||

ಶ್ರೀ ಹೆಚ್.ಎಸ್.ಹೃಷಿಕೇಶನು ಪಾಂಚಜನ್ಯವೆಂಬ ಶಂಖವನ್ನೂ, ಅರ್ಜುನನು ದೇವದತ್ತವೆಂಬ ಶಂಖವನ್ನೂ ಊದಿದರು. ಭಯಂಕರ ವಾದ ಯುದ-ವ್ಯಾಪಾರವುಳ್ಳ ಭೀಮಸೇನನು ಪೌಂಡ್ರವೆಂಬ ಮಹಾಶಂಖವನ್ನು ಊದಿದನು.

ವಿಶೇಷ:- ಆ ಶಂಖಗಳು ಅನಾಮಧೇಯಗಳಲ್ಲ. ಪಾಂಚಜನ್ಯದ ವಿಷಯ:-ದೇವರಿಗೆ ಸ್ವಾತ್ಮಕವಾದ ಆಯುಧಗಳು (ಎಂದರೆ ತಾನೇ ಆಯುಧಗಳ ರೂಪ ಹೊಂದಿರುತ್ತಾನೆ, ಲಕ್ಷ್ಮ್ಯಾತ್ಮಕವಾದ ಆಯುಧಗಳು ಇವೆರಡೂ ಮುಕ್ತಸ್ಥಾನ ದಲ್ಲಿ ಮಾತ್ರ) ದೇವತಾತ್ಮಕವಾದ ಆಯುಧಗಳು ಪ್ರಸಿದ್ಧವಾಗಿವೆ. ಕೌಸ್ತುಭ ರತ್ನದಲ್ಲಿ ಬ್ರಹ್ಮದೇವರು, ಚಕ್ರದಲ್ಲಿ ಕಾಮ ಪ್ರವಿಷ್ಟನಾಗಿದ್ದಾನೆ. ಶಂಖದಲ್ಲಿ ಅನಿರುದ್ಧನಿದ್ದಾನೆ. ಇವೆಲ್ಲಾ ಅಮುಕ್ತಸ್ಥಾನದಲ್ಲಿ, ಇಂಥಾ ಶಂಖಾಭಿಮಾನಿ ದೇವತೆಗೆ ಶಾಪ ಬಂದಿದ್ದಾಗ ಶಂಬಾಸುರ ಅಥವಾ ಪಂಚಜನ ಎಂದು ಹೆಸರುಳ್ಳ ದೈತ್ಯನಲ್ಲಿ ಆವಿಷ್ಟನಾಗಿದ್ದನು. ದೇವರು ''ಇತ್ಯುಕ್ತೋಂತರ್ಜಲಂ ಗತ್ವಾ ಹತ್ವಾ ಪಂಚಜನಂ ಚ ತಂ| ಕೃಷ್ಣೋ ಜಗ್ರಾಹ ತಸ್ಯಾಸ್ಥಿಪ್ರಭವಂ

ಶಂಖಮುತ್ತಮಂ।'' ವಿಷ್ಣುಪುರಾಣ. ಆ ಪಂಚಜನದೈತ್ಯನನ್ನು ಕೊಂದು ತನ್ನ ಭಕ್ತನಾದ ಆ ಶಂಖಾಭಿಮಾನಿ ಅನಿರುದ್ಧನು ಅವನಲ್ಲಿದ್ದ ನಿಮಿತ್ತ ಆ ಮೂಳೆಗಳನ್ನು ಉಪಯೋಗಿಸಿಕೊಂಡು ಪಾವನಮಾಡಿದ ಅಂಥಾ ಪಾವನ ಅಸ್ಥಿಗಳಿಂದ ರಚಿತವು ಪಾಂಚಜನ್ಯವು.

ಹೃಷಿಕೇಶ 1)'' ಹರ್ಷಾತ್ಸುಖಾತ್ಸುಖೈಶ್ವರ್ಯಾದ್ಧೃಷೀಕೇಶ ಉಚ್ಯತೇ'' ಉದ್ಯೋಗಪರ್ವ = ಹರ್ಷವೂ ಸುಖವೂ ಸುಖವಾದ ಐಶ್ವರ್ಯವೂ ಇದ್ದ ಪ್ರಯುಕ್ತ ಹರಿಯು ಹೃಷಿಕೇಶನು. 2) ''ಅವಿಕಾರಿತಯಾ ಜುಷ್ಟೋ ಹೃಷೀಕೋ ವೀರ್ಯರೂಪಯಾ। ಈಶಃ ಸ್ವಾತಂತ್ರ್ಯಯೋಗೇನ ನಿತ್ಯ ಸೃಷ್ಟ್ಯಾದಿ ಕರ್ಮಣಿ॥ ಐಶ್ವರ್ಯ ವೀರ್ಯರೂಪತ್ವಂ ಹೃಷಿಕೇಶತ್ವಮುಚ್ಯತೇ।'' (ಅಹಿರ್ಬುಧ್ನಸಂಹಿತಾ) ಹೃಷೀಕ =ವೀರ್ಯವುಳ್ಳತನದಿಂದ ವಿಕಾರಶೂನ್ಯವಾಗಿರುವುದು. ಈಶ= ಸ್ವಾತಂತ್ರ್ಯಾದಿ ಐಶ್ವರ್ಯವುಳ್ಳತನವು। 3) ಹೃಷೀಕಾಣಾಮಿಂದ್ರಿಯಾಣಾಂ ಈಶತ್ವಾಚ್ಚ ಹೃಷಿಕೇಶಃ॥

ಧನಂಜಯಃ= ದಿಗ್ವಿಜಯದಲ್ಲಿ ಸರ್ವರಾಜರುಗಳನ್ನೂ ಗೆದ್ದು ಧನವನ್ನು ತಂದವನೆಂದು ಅರ್ಥ। ಈ ಪದವನ್ನು ಈ ಅರ್ಜುನನು ಅಜೇಯನೆಂದು ಹೇಳಲು ಹಾಕಿದ್ದಾರೆ.

ದೇವದತ್ತಂ= ದೇವೈರ್ದತ್ತಂ॥ ಪ್ರದೀಯಮಾನಂ ದೇವೈಸ್ತಂ ದೇವದತ್ತಂ ಬಲೋದ್ಭವಂ। ಪ್ರತ್ಯಗೃಹ್ಣಂ ಜಯಾಯೈನಂ ಸ್ತೂಯಮಾನಸ್ತದಾಮರೈಃ॥ (ವನಪರ್ವ)

ವೃಕೋದರ:-1) ಭಕ್ತಿರ್ಜ್ಞಾನಂ ಸವೈರಾಗ್ಯಂ ಪ್ರಜ್ಞಾಮೇಧಾ ಧೃತಿಃ ಸ್ಥಿತಿಃ। ಯೋಗಃ ಪ್ರಾಣೋಬಲಂ ಚೈವ ವೃಕೋದರ ಇತಿ ಸ್ಮೃತಃ॥ ಸ್ಮೃತಿಃ ಭಕ್ತಿಜ್ಞಾನಾದಿ ಬಹು ಉತ್ತಮಗುಣಗಳಿಗೆ ಪ್ರಧಾನ ಬಲದೇವತೆಯ ಅವತಾರವಾದ್ದರಿಂದ ಭೀಮನ ವ್ಯಾಪಾರವೆಲ್ಲವೂ ದುರ್ಜನರಿಗೆ ಭಯಂಕರವು.

2) ''ತೀಕ್ಷ್ಣಶ್ಚೈವ ಪ್ರಚಂಡಶ್ಚ ವೃಕೋನಾಮಾನಲೋ ಮತಃ। ಸ ಪಾಂಡವಸ್ಯ ಜಠರೇ ತೇನ ಭೀಮೋ ವೃಕೋದರಃ॥'' ಬಹುದಾಹಕ ಶಕ್ತಿಸಂಪನ್ನವಾದ ತೀಕ್ಷ್ಣವಾದ ಬಹು ಆಹಾರಪರಿಣಾಮಹೇತುವಾದ ವೃಕವೆಂದು ಖ್ಯಾತವಾದ ಜಠರಾಗ್ನಿಯನ್ನು ಉದರದಲ್ಲಿ ಧರಿಸಿ ಬಹುವಾದ ಆಹಾರ ಪದಾರ್ಥವನ್ನು ಭೋಜನಮಾಡಿ ಜೀರ್ಣಿಸಿಕೊಂಡು ಅದ್ಭುತ ಬಲವಂತನಾದ್ದರಿಂದ ವೃಕೋದರನೆಂಬ ಹೆಸರನ್ನು ಪಡೆದಿರುವನು. (ಯೋಗಿಕಾರ್ಥ) ಆದ್ದರಿಂದಲೇ ಭೀಮಕರ್ಮಾ= ಭಯಂಕರವಾದ ಯುದ್ಧವ್ಯಾಪಾರವುಳ್ಳವನು ಎಂಬ ವಿಶೇಷಣವು.॥ 15 ॥

ಶ್ಲೋ॥ ಅನಂತವಿಜಯಂ ರಾಜಾ ಕುಂತೀಪುತ್ರೋ ಯುಧಿಷ್ಠಿರಃ।

ನಕುಲಃ ಸಹದೇವಶ್ಚ ಸುಘೋಷಮಣಿಪುಷ್ಪಕೌ॥ 16 ॥

ಗೀ.ಪ್ರ) ಅನಂತವಿಜಯಂ, ರಾಜಾ, ಕುಂತೀಪುತ್ರಃ, ಯುಧಿಷ್ಠಿರಃ, ನಕುಲಃ, ಸಹದೇವಃ, ಚ, ಸುಘೋಷ ಮಣಿಪುಷ್ಪಕೌ॥

ಕುಂತೀಪುತ್ರಃ= ಕುಂತೀದೇವಿಯಮಗನಾದ, ರಾಜಾ =ರಾಜನಾದ, ಯುಧಿಷ್ಠಿರಃ = ಧರ್ಮರಾಜನು, ಅನಂತವಿಜಯಂ =ಅನಂತವಿಜಯವೆಂಬ ಶಂಖವನ್ನು, ನಕುಲಃ=ನಕುಲನು, ಚ=ಮತ್ತು, ಸಹದೇವಃ =ಸಹದೇವನು, ಸುಘೋಷಮಣಿ ಪುಷ್ಪಕೌ=ಸುಘೋಷ, ಮಣಿಪುಷ್ಪಕಗಳೆಂಬ ಶಂಖಗಳನ್ನುಊದಿದರು

ಗೀತಾವಿವೃತ್ತಿಃ ಅನಂತವಿಜಯಂ ಅನಂತವಿಜಯಾಖ್ಯಮ್। ನಕುಲಃ ಸುಘೋಷಾಖ್ಯಂ ಶಂಖಂ ಸಹದೇವೋ ಮಣಿಪುಷ್ಪಕಾಖ್ಯಂ ದಧ್ಮುರಿತಿ ಅನ್ವಯಃ॥ 16 ॥

ಶ್ರೀ ಹೆಚ್.ಎಸ್.ಕುಂತೀಪುತ್ರನಾದ ಯುಧಿಷ್ಠಿರನು ಅನಂತವಿಜಯವೆಂಬ ಶಂಖವನ್ನೂ, ನಕುಲಸಹದೇವರು ಸುಘೋಷ, ಮಣಿಪುಷ್ಪಕಗಳೆಂಬ ಶಂಖಗಳನ್ನು ವಾದನಮಾಡಿದರು.

ವಿಶೇಷ:- ''ಕುಂತೀಪುತ್ರ'' ಎಂದು ಹೇಳಿದ್ದರಿಂದ ಯುದ್ಧಕ್ಕೆ ಪೂರ್ವದಲ್ಲಿ ಕುಂತಿಯು ''ದಾರಿದ್ರ್ಯಮಿತಿ ಯಚ್ಚೋಕ್ತಂ ಪರ್ಯಾಯ ಮರಣಂ ಹಿ ತತ್।'' '' ಭೈಕ್ಷ್ಯಂ ವಿಪ್ರತಿಷಿದ್ಧಂತೇ ಕೃಷಿರ್ನೈವೋಪಪದ್ಯತೇ। ಕ್ಷತ್ರಿಯೋಸಿ ಕ್ಷತಾ ತ್ರಾತಾ ಬಾಹುವೀರ್ಯೋಪಜೀವಿತಾ''॥ (ಉದ್ಯೋಗಪರ್ವ)

ಭಿಕ್ಷಮಾಡುವುದು ನಿಷಿದ್ಧವು. ಯುದ್ಧವನ್ನೇ ಮಾಡೆಂದು ಕೃಷ್ಣನ ಕೈಲಿ ಸಂದೇಶ ಹೇಳಿ ಕಳುಹಿಸಿದ್ದಳು. ಅಂಥವಳ ಮಗನಾದ್ದರಿಂದಲೇ ಪರಾಕ್ರಮ ಸೂಚಕವಾದ ಶಂಖಧ್ವನಿ ಮಾಡಿದನು.

ಶ್ಲೋ।। ಕಾಶ್ಯಶ್ಚ ಪರಮೇಷ್ವಾಸಃ ಶಿಖಂಡೀಚ ಮಹಾರಥಃ।

ಧೃಷ್ಟದ್ಯುಮ್ನೋ ವಿರಾಟಶ್ಚ ಸಾತ್ಯಕಿಶ್ಚಾಪರಾಜಿತಃ।। 17/1।।

ಗೀ.ಪ್ರ) ಕಾಶ್ಯಃ, ಚ, ಪರಮೇಶ್ವಾಸಃ, ಶಿಖಂಡೀ, ಚ, ಮಹಾರಥಃ, ಧೃಷ್ಟದ್ಯುಮ್ನಃ, ವಿರಾಟಃ, ಚ, ಸಾತ್ಯಕಿಃ, ಚ, ಅಪರಾಜಿತಃ।।

ಪರಮೇಶ್ವಾಸಃ= ಶ್ರೇಷ್ಠವಾದ ಧನುಸ್ಸುಳ್ಳ , ಕಾಶ್ಯಃ= ಕಾಶೀರಾಜನು, ಚ= ಮತ್ತು, ಮಹಾರಥಃ= ಮಹಾ- ರಥಿಕನಾದ, ಶಿಖಂಡೀ= ಶಿಖಂಡಿಯು, ಚ= ಮತ್ತು, ಧೃಷ್ಟದ್ಯುಮ್ನನು ಚ= ಮತ್ತು, ವಿರಾಟಃ= ವಿರಾಟ ಮಹಾರಾಜನು, ಚ= ಮತ್ತು, ಅಪರಾಜಿತಃ= ಇತತರಿಂದ ಜಯಗಳಿಸಲು ಸಾಧ್ಯನಾಗದ, ಸಾತ್ಯಕಿಃ= ಸಾತ್ಯಕಿಯು (ಶಂಖಗಳನ್ನು ಊದಿದರು)

ಗೀತಾವಿವೃತ್ತಿಃ ಪರಮೇಷ್ವಾಸೋ ಮಹಾಧಾನುಷ್ಕಃ ಕಾಶ್ಯಃ। ಮಹಾರಥಃ ಶಿಖಂಡೀ ಚ ಅಪರಾಜಿತಃ ಸಾತ್ಯಕಿಶ್ಚ।। 17 ।।

ಶ್ಲೋ।। ದ್ರುಪದೋದ್ರೌಪದೇಯಾಶ್ಚ ಸರ್ವಶಃ ಪೃಥಿವೀಪತೇ।

ಸೌಭದ್ರಶ್ಚ ಮಹಾಬಾಹುಃ ಶಂಖಂ ದಧ್ಮುಃ ಪೃಥಕ್ ಪೃಥಕ್।।18/1।।

ಗೀ.ಪ್ರ) ದ್ರುಪದಃ, ದ್ರೌಪದೇಯಾಃ, ಚ, ಸರ್ವಶಃ, ಪೃಥಿವೀಪತೇ, ಸೌಭದ್ರಃ, ಚ ಮಹಾಬಾಹುಃ, ಶಂಖಂ, ದಧ್ಮುಃ, ಪೃಥಕ್, ಪೃಥಕ್।। ಪೃಥಿವೀಪತೇ= ಹೇ ಧೃತರಾಷ್ಟ್ರರಾಜನೇ, ದ್ರುಪದಃ= ದ್ರುಪದ ಮಹಾರಾಜನು, ಸರ್ವಶಃ= ಸಮಸ್ತರಾದ, ದ್ರೌಪದೇತಯಾಃ= ದ್ರೌಪದಿಯ ಮಕ್ಕಳು, ಚ= ಮತ್ತು, ಮಹಾಬಾಹುಃ= ಮಹಾಬಾಹುಶಾಲಿಯಾದ, ಸೌಭದ್ರಃ= ಸುಭದ್ರಾಪುತ್ರನಾದ ಅಭಿಮನ್ಯುವು, ಪೃಥಕ್ ಪೃಥಕ್= ಬೇರೆ ಬೇರೆ, ಶಂಖಾನ್= ಶಂಖಗಳನ್ನು, ದಧ್ಮುಃ = ಊದಿದರು.

ಗೀತಾವಿವೃತ್ತಿಃ ಪೃಥಿವೀಪತೇ ಹೇ ಧೃತರಾಷ್ಟ್ರ ಮಹಾಬಾಹುಃ ಸೌಭದ್ರೋಽಭಿಮನ್ಯುಶ್ಚ। ಶಂಖಮಿತಿ ಸಮುದಾಯಾಭಿಪ್ರಾಯಃ। ಸ್ವಸ್ವಶಂಖಾಂದಧ್ಮುರಿತಿ।। 18 ।।

ಶ್ರೀಹೆಚ್.ಎಸ್. ಹೇ ಧೃತರಾಷ್ಟ್ರರಾಜಾ! ಶ್ರೇಷ್ಠವಾದ ಕೋದಂಡವುಳ್ಳ ಕಾಶೀರಾಜನು, ಮಹಾರಥಿಕನಾದ ಶಿಖಂಡಿಯೂ, ಧೃಷ್ಟದ್ಯುಮ್ನ -ವಿರಾಟ ಮತ್ತು ಅಜೇಯನಾದ ಸಾತ್ಯಕಿಯು, ದ್ರುಪದ, ದ್ರೌಪದಿಯ 5 ಜನಮಕ್ಕಳು, ಮಹಾಬಾಹುಶಾಲಿಯಾದ ಅಭಿಮನ್ಯು ಇವರೇ ಮೊದಲಾದವರು ಪ್ರತ್ಯೇಕ ಪ್ರತ್ಯೇಕವಾಗಿ ತಮ್ಮ ತಮ್ಮ ಶಂಖಗಳನ್ನು ಊದಿದರು.

ಶ್ಲೋ।। ಸ ಘೋಷೋ ಧಾರ್ತರಾಷ್ಟ್ರಾಣಾಂ ಹೃದಯಾನಿ ವ್ಯದಾರಯನ್।।

ನಭಶ್ಚ ಪೃಥಿವೀಮ್ ಚೈವ ತುಮುಲೋವ್ಯನುನಾದಯನ್।। 19/1।।

ಗೀ.ಪ್ರ.ಚಂ.) ಸಃ, ಘೋಷಃ, ಧಾತ್ರರಾಷ್ಟ್ರಾಣಾಂ, ಹೃದಯಾನಿ, ವ್ಯದಾರಯತ್, ನಭಃ, ಚ, ಪೃಥಿವೀಂ, ಚ ಏವ, ತುಮುಲಃ, ವ್ಯನುನಾದಯನ್।।

ಚ= ಮತ್ತು , ಸಃ= ಆ, ತುಮುಲಃ= ವ್ಯಾಪ್ತವಾದ, ಘೋಷಃ= ಶಬ್ದವು, ನಭಃ= ಆಕಾಶವನ್ನು , ಚ= ಮತ್ತು ಪೃಥಿವೀಂ= ಭೂಮಿಯನ್ನು, ವ್ಯನುನಾದಯನ್ ಏವ= ಪ್ರತಿಧ್ವನಿಯುಕ್ತಗಳನ್ನಾಗಿ ಮಾಡುವುದಕ್ಕಾಗಿಯೇ, ಧಾರ್ತರಾಷ್ಟ್ರಾಣಾಂ= ಧೃತರಾಷ್ಟ್ರನ ಪುತ್ರರಾದ ದುರ್ಯೋಧನಾದಿಗಳ, ಹೃದಯಾನಿ= ಮನಸ್ಸುಗಳನ್ನು (ಎದೆಗಳನ್ನು), ವ್ಯದಾರಯತ್= ಸೀಳಿತು. (ನಾವು ನಾಶಹೊಂದುತ್ತೇವೆಂದು ಭಯವನ್ನು ಹುಟ್ಟಿಸಿತು)

ಗೀತಾವಿವೃತ್ತಿಃ ಸಘೋಷಸ್ತುಮುಲೋ ವ್ಯಾಪ್ತೋ ಭೂತ್ವಾ ನಭಶ್ಚಪೃಥಿವೀಂ ಚ ವ್ಯನುನಾದಯಂಸ್ತತ್ರ ತತ್ರ ಪ್ರತಿಧ್ವನಿಂ ಜನಯನ್ನೇವ ಧಾರ್ತರಾಷ್ಟ್ರಾಣಾಂ ಹೃದಯಾನಿ ವ್ಯದಾರಯತ್। ಅದ್ಯೈವ ನಷ್ಟಂ ಕುರುಕುಲಮಿತಿ ತ್ವತ್ಪುತ್ರಾ ಮೇನಿರ ಇತ್ಯರ್ಥಃ।। 19 ।।

ಶ್ರೀಹೆಚ್.ಎಸ್. ಆ ಶಂಖಗಳ ನಾದವು ವ್ಯಾಪಿಸಿ ಪೃಥಿವಿ ಅಂತರಿಕ್ಷಗಳಲ್ಲಿ ಪ್ರತಿಧ್ವನಿಯನ್ನುತ್ಪಾದನೆ ಮಾಡಿ ಧೃತರಾಷ್ಟ್ರ (ನಿನ್ನ) ಪುತ್ರರ ಹೃದಯಗಳನ್ನು ಸೀಳಿತು. ಎಂದರೆ ಕುರುಕುಲವು ಈಗಲೇ ನಷ್ಟವಾಯಿತೆಂದು ನಿನ್ನ ಪುತ್ರರು ತಿಳಿದರು.

ವಿಶೇಷ:- ''ಹೃದಯಾನಿ'' ಎಂದರೆ ಮನಸ್ಸೂ ಮತ್ತು ವಕ್ಷಸ್ಥಳ- ಇವೆರಡನ್ನು ಒಡೆಯಿತು. ಮನಸ್ಸನ್ನು ಒಡೆಯಿತೆಂದರೆ ಜಯನಿಶ್ಚಯ, ಉತ್ಸಾಹ, ಧೈರ್ಯಾದಿ ಗುಣಗಳನ್ನು ನಾಶಮಾಡಿತು. ವಕ್ಷಸ್ಸನ್ನೊಡೆಯಿ ತೆಂದರೆ ಗರ್ಭನಿರ್ಭೇದಾದಿ ದುಃಖವಾಯ್ತು. ಹೃದಯಂ ಚಿತ್ತವಕ್ಷಸೋಃ ಇತಿ ಕೋಶಃ। ಏವ ಶಬ್ದವನ್ನು ಧಾರ್ತರಾಷ್ಟ್ರಾಣಾಂ ಎನ್ನುವುದರಲ್ಲಿ ಅನ್ವಯಿಸಿದರೆ ಪ್ರಧಾನರಿಂದ ದುರ್ಯೋಧನಾದಿಗಳಿಗೆ ಈ ಅವಸ್ಥೆಯಾಯ್ತು ಇನ್ನು ಅಪ್ರಧಾನರಾದ ಸೈನಿಕರ ಅವಸ್ಥೆಯನ್ನು ಹೇಳತಕ್ಕದ್ದೇನಿದೆ ಎಂದು ಸೂಚಿತ ವಾಗುತ್ತೆ.

ಗೀ.ಪ್ರ) ಈಪ್ರಕಾರವಾಗಿ ಉಭಯ ಸೈನ್ಯಗಳ ವ್ಯಾಪಾರವನ್ನು ಹೇಳಿ ನಾಲ್ಕು ಶ್ಲೋಕಗಳಿಂದ ತತ್ವೋಪದೇಶಕ್ಕೆ ಕಾರಣವಾದ ಅರ್ಜುನನ ವ್ಯಾಪಾರಗಳನ್ನು ಹೇಳುತ್ತಾರೆ।

ಶ್ಲೋ॥ ಅಥ ವ್ಯವಸ್ಥಿತಾನ್ ದೃಷ್ಟ್ವಾ ಧಾರ್ತರಾಷ್ಟ್ರಾನ್ ಕಪಿಧ್ವಜಃ।

ಪ್ರವೃತ್ತೇ ಶಸ್ತ್ರಸಂಪಾತೇ ಧನುರುದ್ಯಮ್ಯ ಪಾಂಡವಃ॥20/1॥

ಹೃಷಿಕೇಶಂ ತದಾ ವಾಕ್ಯಮಿದಮಾಹ ಮಹೀಪತೇ।

ಗೀ.ಪ್ರ) ಅಥ, ವ್ಯವಸ್ಥಿತಾನ್, ದೃಷ್ಟ್ವಾ ,ಧಾರ್ತರಾಷ್ಟ್ರಾನ್, ಕಪಿಧ್ವಜಃ, ಪ್ರವೃತ್ತೇ ,ಶಸ್ತ್ರ ಸಂಪಾತೇ,ಧನುಃ, ಉದ್ಯಮ್ಯ ಪಾಂಡವಃ, ಹೃಷಿಕೇಶಂ, ತದಾ, ವಾಕ್ಯಂ, ಇದಂ, ಆಹ, ಮಹೀಪತೇ॥

ಮಹೀಪತೇ= ಧೃತರಾಷ್ಟ್ರನೇ!, ಅಥ= ಅನಂತರದಲ್ಲಿ, ಕಪಿಧ್ವಜಃ= ಧ್ವಜದಲ್ಲಿಕಪಿಯುಳ್ಳ, ಪಾಂಡವಃ = ಅರ್ಜುನನು, ವ್ಯವಸ್ಥಿತಾನ್= ಯುದ್ಧಮಾಡುವುದಕ್ಕೋಸ್ಕರ ಸನ್ನದ್ಧರಾಗಿ ನಿಂತಿರುವ, ಧಾರ್ತರಾಷ್ಟ್ರಾನ್= ಧೃತರಾಷ್ಟ್ರರಾಜನ ಮಕ್ಕಳನ್ನು ದೃಷ್ಟ್ವಾ= ನೋಡಿ, ತದಾ= ಆ ಕಾಲದಲ್ಲಿ, ಶಸ್ತ್ರಸಂಪಾತೇ = ಬಾಣಗಳನ್ನು ಬಿಡುವಕಾಲವು ಸಮೀಪಿಸುತ್ತಿರಲಾಗಿ , ಧನುಃ= ಧನುಸ್ಸನ್ನು, ಉದ್ಯಮ್ಯ= ಎತ್ತಿ, ಹೃಷಿಕೇಶಂ= ಶ್ರೀಕೃಷ್ಣನನ್ನು ಉದ್ದೇಶಿಸಿ, ಇದಂ= ಈ ಮುಂದೆ ಹೇಳುವ ವಾಕ್ಯವನ್ನು, ಆಹ= ಹೇಳಿದನು.

ಗೀತಾವಿವೃತ್ತಿಃ -- ತತ್ವೋಪದೇಶಪ್ರಸಂಜಕಂ ಅರ್ಜುನವಿಷಾದಂ ವಕ್ತುಂ ಏತಾವಾನುಪೋದ್ಘಾತಃ ಪ್ರವೃತ್ತಃ। ಏವಂ ದುರ್ಯೋಧವ್ಯಾಪಾರಂ ದಲದ್ವಯಗತವ್ಯಾಪಾರಂ ಚ ಉಕ್ತ್ವಾ ಅಧುನಾ ಅರ್ಜುನವ್ಯಾಪಾರಮಾಹ। ''ಅಥ ಇತ್ಯಾದಿ ಚತುರ್ಭಿಃಶ್ಲೋಕೈಃ।'' ಅಥಾನಂತರಂ ಕಪಿಧ್ವಜೋರ್ಜುನಃ ವ್ಯವಸ್ಥಿತಾನ್ ಯುದ್ಧೇ ಕೃತನಿಶ್ಚಯಾನ್ ದೃಷ್ಟ್ವಾ ಶಸ್ತ್ರಸಂಪಾತೇ ಶಸ್ತ್ರಪ್ರಹರಣೇ ಪ್ರವೃತ್ತೇ। ''ವರ್ತಮಾನ ಸಾಮೀಪ್ಯೇ ವರ್ತಮಾನವದ್ವಾ''। ಪ್ರವರ್ತಿತಮುದ್ಯುಕ್ತೇ ಸತಿ ತದಾ ಶಸ್ತ್ರಸಂಪಾತಕಾಲೇ ಇದಂ ವಕ್ಷ್ಯಮಾಣಂ ವಾಕ್ಯಂ ಆಹೇತ್ಯನ್ವಯಃ॥ 20 ॥

ಶ್ರೀಹೆಚ್.ಎಸ್.ಅವತಾರಿಕೆ: ಶ್ರೀ ಕೃಷ್ಣನ ತತ್ವೋಪದೇಶ ಪ್ರಸಕ್ತಿಗೆ ನಿಮಿತ್ತವಾದ ಪಾರ್ಥನ ವಿಷಾದವನ್ನು ಹೇಳುವುದಕ್ಕೋಸ್ಕರ ಈ ಪೀಠಿಕೆಯು ಪ್ರವೃತ್ತವಾಯ್ತು। ಈ ರೀತಿ ದುರ್ಯೋಧನನ ವ್ಯಾಪಾರವನ್ನು ಉಭಯಸೇನೆಯ ವ್ಯಾಪಾರವನ್ನು ಸಹ ಹೇಳಿ ಈಗ ಅರ್ಜುನನ ವ್ಯಾಪಾರವನ್ನು ಸಂಜಯರು ಹೇಳುತ್ತಾರೆ:- ಅನಂತರ ಕಪಿಧ್ವಜನಾದ ಅರ್ಜುನನು ಯುದ್ಧಮಾಡುವುದರಲ್ಲಿನಿರತರಾದ ಧೃತರಾಷ್ಟ್ರನ ಮಕ್ಕಳನ್ನುನೋಡಿ, ಬಾಣ ಪ್ರಯೋಗಕಾಲ ಸಮೀಪಿಸುತ್ತಿರಲು ಧನುಸ್ಸನ್ನು ಎತ್ತಿಕೊಂಡು (ಕೃಷ್ಣನ ಕೂಡ ಮಾತನಾಡುತ್ತಾನೆ)

ವಿಶೇಷ :- 1) ''ಕಪಿಧ್ವಜಃ, ಧನುರುದ್ಯಮ್ಯ '' ಎಂದು ಹೇಳಿರುವುದರಿಂದ ವೀರಾವೇಶದಿಂದ ಯುದ್ಧಾರ್ಥ ವಾಗಿಯೇ ನಿಂತಿದ್ದನೆಂಬುವುದು ಸೂಚಿತವಾಗುತ್ತೆ. ಗಾಂಡೀವ ಧನುಸ್ಸನ್ನು ಕೈಲಿ ಎತ್ತಿ ಹಿಡಿದಿದ್ದನು. ರಥಾಗ್ರದಲ್ಲಿ ''ಕಂ(ಸುಖಂ) + ಪಾಯತೀತಿ ಕಪಿಃ'' ಎಂಬ ವ್ಯುತ್ಪತ್ತಿಯಿಂದ ತನ್ನ ಧ್ವನಿಯಿಂದಲೇ ಅರ್ಜುನನಿಗೆ ಬಲಪುಷ್ಟಿ ಮಾಡುವುದಕ್ಕೆ ಹನುಮಂತನಿದ್ದಾನೆ. (2) ಇಲ್ಲಿ ಅಥ ಶಬ್ದ ಹೇಳಿರುವುದರಿಂದ ಇದುವರೆಗೆ ಆಗಿರುವುದು ಉಪೋದ್ಘಾತವು. ಇನ್ನು ಮುಂದೆ ತತ್ವೋಪದೇಶಕ್ಕೆ ಅವಕಾಶವಾಗುವ ಸನ್ನಿವೇಶವು ಮಾಡಲ್ಪಡುತ್ತಾಗ್ಗಿ ಪ್ರಕರಣ ಭೇದ ಸೂಚಕವಾದ ಅಥ ಶಬ್ದವು ಇದೆ. ಅದೇ ಅಥ ಶಬ್ದವು ಅರ್ಜುನನಿಗೂ ಕೂಡ ಅವಸ್ಥಾವ್ಯತ್ಯಾಸವು ಬರುತ್ತೆಂಬುದನ್ನು ಸೂಚಿಸುತ್ತೆ।

ಅಥ ಶಬ್ದವು ಶ್ರೋತೃವಿನ ಅಧಿಕಾರವನ್ನು ಸೂಚಿಸುತ್ತೆ. ಮುಖ್ಯಪ್ರಾಣಾವಲಂಬಿಯಾದ ಶಿಷ್ಯನೇ ಅಧಿಕಾರಿ. ''ಪ್ರವೃತ್ತೇ ಶಸ್ತ್ರಸಂಪಾತೇ'' ಎಂಬ ಶಬ್ದವು ಪ್ರಸಂಗಾನುಕೂಲ್ಯವುಂಟೆಂದು ಸೂಚಿಸುತ್ತೆ। ಮುಂದಿನ ಶ್ಲೋಕದಲ್ಲಿರುವ ಹೃಷಿಕೇಶಂ ಎಂಬ ಪದವು

ಸರ್ವೇಂದ್ರಿಯಪ್ರವರ್ತಕನಾದ ದೇವರೇ ಗುರುವೆಂದು ವಕ್ತ್ರಾನುಕೂಲ್ಯವುಂಟೆಂದೂ ಸೂಚಿಸುತ್ತೆ।

ಶ್ಲೋ॥ ಸೇನಯೋರುಭಯೋರ್ಮಧ್ಯೇ ರಥಂ ಸ್ಥಾಪಯಮೇಚ್ಯುತ॥21/1॥

ಯಾವದೇತಾನ್ನಿರೀಕ್ಷೇಹಂ ಯೋದ್ಧುಕಾಮಾನವಸ್ಥಿತಾನ್।

ಕೈ ರ್ಮಯಾ ಸಹಯೋದ್ಧವ್ಯಮಸ್ಮಿನ್ ರಣಸಮುದ್ಯಮೇ॥22/1॥

ಯೋತ್ಸ್ಯಮಾನಾನವೇಕ್ಷೇಹಂ ಯ ಏತೇತ್ರ ಸಮಾಗತಾಃ।

ಧಾರ್ತರಾಷ್ಟ್ರಸ್ಯ ದುರ್ಬುದ್ಧೇರ್ಯುದ್ಧೇ ಪ್ರಿಯಚಿಕೀರ್ಷವಃ॥23/1॥

ಗೀ. ಪ್ರ) ಸೇನಯೋಃ, ಉಭಯೋಃ, ಮಧ್ಯೇ, ರಥಂ, ಸ್ಥಾಪಯ, ಮೇ, ಅಚ್ಯುತ, ಯಾವತ್,ಏತಾನ್, ನಿರೀಕ್ಷೇ , ಅಹಂ, ಯೋದ್ಧುಕಾಮಾನ್, ಅವಸ್ಥಿತಾನ್, ಕೈಃ, ಮಯಾ, ಸಹ, ಯೋದ್ಧವ್ಯಂ, ಅಸ್ಮಿನ್, ರಣಸಮು ದ್ಯಮೇ॥ ಯೋತ್ಸ್ಯಮಾನಾನ್,ಅವೇಕ್ಷೇ , ಅಹಂ, ಯೇ, ಏತೇ, ಅತ್ರ. ಸಮಾಗತಾಃ, ಧಾರ್ತರಾಷ್ಟ್ರಸ್ಯ, ದುರ್ಬುದ್ಧೇಃ, ಯುದ್ಧೇ, ಪ್ರಿಯಚಿಕೀರ್ಷವಃ॥

ಗೀತಾವಿವೃತ್ತಿಃ ಸಾರ್ಧಶ್ಲೋಕದ್ವಯೇನ ತದ್ವಾಕ್ಯಮಾಹ। ಸೇನಯೋರಿತಿ। ಅಸ್ಮಿನ್ ರಣೋದ್ಯೋಗೇ ಕೈಃ ಸಹ ಮಯಾ ಯೋದ್ಧವ್ಯಮ್। ದುರ್ಬುದ್ಧೇರ್ಧಾರ್ತರಾಷ್ಟ್ರಸ್ಯ ಪ್ರಿಯಂ ಕರ್ತುಮಿಚ್ಛಂತೋ ಯೇಽತ್ರ ಸಮಾಗತಾಃ ತಾನ್ ಯೋದ್ಧುಕಾಮಾನವಸ್ಥಿತಾನ್ಯೋತ್ಸ್ಯಮಾನಾನ್ಯಾವದ್ ದ್ರಕ್ಷ್ಯಾಮಿ ತಾವದುಭಯೋಃ ಸೇನಯೋರ್ಮಧ್ಯೇ ರಥಂ ಸ್ಥಾಪಯೇತ್ಯಾಹ ಇತ್ಯರ್ಥಃ॥ 21॥ 22 ॥ 23 ॥

ಶ್ರೀಹೆಚ್.ಎಸ್.ಅರ್ಜುನನು ಹೇಳಿದನು: ಅಚ್ಯುತ= ಎಲೈ ಕೃಷ್ಣನೇ! ಅಹಂ=ನಾನು, ಯೋದ್ಧುಕಾಮಾನ್=ಯುದ್ಧವನ್ನು ಮಾಡುವುದಕ್ಕೋಸ್ಕರ ಅಪೇಕ್ಷೆಯುಳ್ಳ ,ಅವಸ್ಥಿತಾನ್= ಯುದ್ಧಮಾಡುವುದಕ್ಕೆ ಸಿದ್ಧರಾಗಿ ನಿಂತಿರುವ, ಏತಾನ್= ಇವರುಗಳನ್ನು,ಯಾವತ್=ಎಷ್ಟುಕಾಲದವರೆಗೂ, ನಿರೀಕ್ಷೇ= ನೋಡುವೆನೋ., ತಾವತ್= ಅಲ್ಲಿಯವರೆಗೂ, ಉಭಯ ಸೇನಯೋಃ= ಎರಡೂ ಸೈನ್ಯಗಳ, ಮಧ್ಯೇ= ಮಧ್ಯದಲ್ಲಿ , ಮೇ=ನನ್ನ , ರಥಂ=ರಥವನ್ನು, ಸ್ಥಾಪಯ=ನಿಲ್ಲಿಸು, ಯುದ್ಧೇ=ಯುದ್ಧದಲ್ಲಿ, ದುರ್ಬುದ್ಧೇಃ=ದುಷ್ಟಬುದ್ಧಿಯುಳ್ಳ ಧಾರ್ತರಾಷ್ಟ್ರಸ್ಯ= ದುರ್ಯೋಧನನಿಗೆ, ಪ್ರಿಯ ಚಿಕೀರ್ಷವಃ= ಪ್ರಿಯವನ್ನು ಉಂಟು ಮಾಡುವುದಕ್ಕೆ ಇಚ್ಛೆಯುಳ್ಳವರಾಗಿ, ಏತೇ ಯೇ= ಯಾರು ಯಾರು, ಅತ್ರ= ಈ ಸೈನ್ಯದಲ್ಲಿ ಸಮಾ ಗತಾಃ=ಬಂದಿದ್ದಾರೆಯೋ, ಅಸ್ಮಿನ್=ಈ , ರಣಸಮುದ್ಯಮೇ=ಯುದ್ಧವ್ಯಾಪಾರವು ನಡೆಯುತ್ತಿರಲು, ಮಯಾ=ನನ್ನಿಂದ, ಕೈಃ ಸಹ=ಯಾರಾರಿಂದ ಕೂಡಿಕೊಂಡು, ಯೋದ್ಧವ್ಯಂ=ಯುದ್ಧಮಾಡತಕ್ಕದುದೋ, ಯೋತ್ಸ್ಯಮಾನಾನ್= ಯುದ್ಧಮಾಡತಕ್ಕ , ತಾನ್=ಅವರನ್ನು ,ಅಹಂ=ನಾನು, ಅವೇಕ್ಷೇ=ನೋಡುತ್ತೇನೆ।

ಅರ್ಜುನನು ಹೃಷಿಕೇಶನನ್ನು ಕುರಿತು ಹೀಗೆ ಹೇಳಿದನು- ಅಚ್ಯುತನೇ! ಉಭಯಸೇನೆಗಳ ಮಧ್ಯದಲ್ಲಿ ರಥವನ್ನು ನಿಲ್ಲಿಸು.

ವಿಶೇಷ:- ಹೃಷಿಕೇಶಂ ತದಾವಾಕ್ಯಂ ಎಂದು ಹೇಳಿರುವುದರಿಂದ ಹೃಷಿಕೇಶನೇ ಗೀತೋಪದೇಶಕ್ಕೆ ಕಾರಣವನ್ನು ಉತ್ಪತ್ತಿಮಾಡಿದನೆಂದು ಗೊತ್ತಾಗುತ್ತೆ. ಅಚ್ಯುತ ಶಬ್ದವು ಯುದ್ಧಸಮಾರಂಭದಿಂದ ನಾನು ಚ್ಯುತನಾಗುವೆನಾದರೂ ನಿನ್ನಸಂಕಲ್ಪಕ್ಕೆ ಚ್ಯುತಿಯಿಲ್ಲವೆಂದು ಅರ್ಥವನ್ನು ಸೂಚಿಸುತ್ತೆ। ಈ ರಣೋದ್ಯೋಗದಲ್ಲಿನಾನು ಯಾರೊಡನೆ ಯುದ್ಧಮಾಡಬೇಕು? ದುರ್ಬುದ್ಧಿಯುಳ್ಳ ಧೃತರಾಷ್ಟ್ರ ಸುತನಿಗೆ ಪ್ರಿಯವನ್ನು ಉಂಟುಮಾಡಬೇಕೆಂದು ಯಾರು ಇಲ್ಲಿ ಸೇರಿರುತ್ತಾರೆಯೋ ಆ ಯುದ್ಧಾರ್ಥಿ ಗಳಾದ ಜನರನ್ನು ನಾನು ನೋಡುವವರೆಗೂ ನನ್ನ ರಥವನ್ನು ಉಭಯ ಸೇನೆಗಳ ಮಧ್ಯೆ ನಿಲ್ಲಿಸು.

ವಿಶೇಷಾರ್ಥ:- ಅರ್ಜುನನ ವಾಕ್ಯಗಳಲ್ಲಿಸ್ವಲ್ಪಸ್ವಾರಸ್ಯವಿದೆ. ಅದೇನೆಂದರೆ:- ಅರ್ಜುನನು ಯುದ್ಧಾರಂಭವನ್ನು ನಿರೀಕ್ಷಿಸದೇ ಅಥವಾ ಭಗವಂತನ ಇಚ್ಛೆಯಂತೆ ಮುಂದೇನಾಗುತ್ತೋ ಅದಕ್ಕನುಗುಣವಾಗಿ ಅವನೇ ಆಜ್ಞೆಮಾಡುವವನು ಎಂದು ತಿಳಿದು ಜಗದ್ಗುರುವಾದ ತನ್ನ ಸಾರಥಿಯ ಮುಖನೋಡಿ ಸುಮ್ಮನೇ ಇರದೇ ತಾನೇನೋ ಕಡಿದು ಕಟ್ಟೆಹಾಕುವವನಂತೆ ಅಭಿಮಾನವನ್ನು ವಹಿಸಿ ಸುಮ್ಮನಿರುವ ತನ್ನ ಸಾರಥಿಗೆ ಆಜ್ಞೆಮಾಡುತ್ತಾನೆ। ''ರಥಂ ಸ್ಥಾಪಯ'' ಎಂದು. ಈ ಅವನ ವಾಕ್ಯವು ಇನ್ಯಾರಾದರೂ ಸೂತರಿಗೆ ಹೇಳುವರೀತಿಯಲ್ಲಿ

ಪ್ರಭುವಿಗೆ ಹೇಳಿದ್ದಾನೆ. ನಿನ್ನನುಗ್ರಹದಿಂದ ನಾನು ಯುದ್ಧವನ್ನು ಮಾಡತಕ್ಕವನೆಂಬ ಅಂಶವನ್ನೇ ಆ ವಾಕ್ಯದಲ್ಲಿ ಹೇಳಲಿಲ್ಲ. '' ಅಹಂ ನಿರೀಕ್ಷೇ , ಮಯಾ ಯೋದ್ಧವ್ಯಂ, ಅವೇಕ್ಷೇಹಂ'' ಎಂದು ಒಂದೊಂದು ಪಂಕ್ತಿಯಲ್ಲೂ ಅಹಂಕಾರವು ಉಕ್ಕುತ್ತಿದೆ। ಇದರಿಂದ ಪರಮಾತ್ಮನ ಸ್ವಾತಂತ್ರ್ಯವನ್ನು ಮರೆತು ಪೂರ್ಣವಾದ ಸ್ವಕತೃತ್ವಾಭಿಮಾನದಿಂದ ಯುದ್ಧಕ್ಕೆ ಹೊರಟಿದ್ದಾನೆಂಬುದು ವ್ಯಕ್ತವಾಗುತ್ತೆ. ಕೃಷ್ಣದರ್ಶನಕ್ಕೆ ಬರುವ ಘಂಟಾಕರ್ಣರ ಸ್ಥಿತಿಯನ್ನು ಹೋಲಿಸಿ ದರೆ ಕರ್ತೃಗಳ ವೈಸಾದೃಶ್ಯ (ವ್ಯತ್ಯಾಸ) ವ್ಯಕ್ತವಾಗುತ್ತೆ. ಹೆಜ್ಜೆ ಹೆಜ್ಜೆಗೆ ಕೃಷ್ಣನನ್ನು ಸ್ಮರಿಸುತ್ತಾ ಆತನ ಕಟಾಕ್ಷ ದರ್ಶನಾನಂತರ ಭೀಮಸೇನನು ಸೂಚನೆಕೊಟ್ಟನಂತರ ಕೃಷ್ಣನ ಮುಖವನ್ನು ನೋಡುತ್ತಾ ಮತ್ಸ್ಯಯಂತರಭೇದಿಸಿದ ಅರ್ಜುನನೆಲ್ಲಿ, ಸರ್ವಜ್ಞನಾದ ಸಾರಥಿಗೆ ನಿಷ್ಪ್ರಯೋಜಕ ವ್ಯಾಪಾರಾರ್ಥವಾಗಿ ಹೀನಾಜ್ಞೆ ಮಾಡಿದ ಅರ್ಜುನನೆಲ್ಲಿ, ಶತ್ರು ಸೈನ್ಯ ನೋಡದಿದ್ದಲ್ಲಿ ಅರ್ಜುನನಿಗೆ ಹೋಗುತ್ತಿದ್ದ ಗಂಟೇನು? ಹಿಂದಿನ ಯುದ್ಧಗಳಲ್ಲಿ ಹೀಗೆ ನೋಡಿ ಯುದ್ಧಮಾಡು ತ್ತಿದ್ದನೇ? ಕೃಷ್ಣನು ರಥವನ್ನು ತಿರುಗಿಸಿದ ಕೂಡಲೇ ಕೈಲಾದ ಯುದ್ಧಮಾಡುವುದು ತನ್ನ ಕೆಲಸವೆಂದು ಅರ್ಜುನನಿಗೆ ತಿಳಿಯದೇ ಹೋಯಿತು।

ಶ್ಲೋ।। ಏವಮುಕ್ತೋ ಹೃಷಿಕೇಶೋ ಗುಡಾಕೇಶೇನ ಭಾರತ।

ಸೇನಯೋರುಭಯೋರ್ಮಧ್ಯೇ ಸ್ಥಾಪಯಿತ್ವಾ ರಥೋತ್ತಮಂ।। 24/1।।

ಭೀಷ್ಮದ್ರೋಣಪ್ರಮುಖತಃ ಸರ್ವೇಷಾಂ ಚ ಮಹೀಕ್ಷಿತಾಂ।

ಉವಾಚ ಪಾರ್ಥ ಪಶ್ಯೈತಾನ್ ಸಮವೇತಾನ್ ಕುರೂನಿತಿ।।25/1।।

ಗೀ. ಪ್ರ) ಏವಂ, ಉಕ್ತಃ, ಹೃಷಿಕೇಶಃ, ಗುಡಾಕೇಶೇನ, ಭಾರತ, ಸೇನಯೋಃ, ಉಭಯೋಃ, ಮಧ್ಯೇ, ಸ್ಥಾಪಯಿತ್ವಾ, ರಥೋತ್ತಮಂ।। ಭೀಷ್ಮದ್ರೋಣಪ್ರಮುಖತಃ, ಸರ್ವೇಷಾಂ, ಚ, ಮಹೀಕ್ಷಿತಾಂ, ಉವಾಚ, ಪಾರ್ಥ, ಪಶ್ಯ, ಏತಾನ್, ಸಮವೇತಾನ್, ಕುರೂನ್, ಇತಿ।।

ಸಂಜಯನು ಹೇಳಿದನು:- ಹೇ ಭಾರತ!= ಎಲೈ ಧೃತರಾಷ್ಟ್ರನೇ, ಗುಡಾಕೇಶೇನ= ಅರ್ಜುನನಿಂದ, ಏವಂ= ಹೀಗೆ, ಉಕ್ತಃ= ಹೇಳಿಸಿಕೊಳ್ಳಲ್ಪಟ್ಟ, ಹೃಷಿಕೇಶಃ= ಸಮಸ್ತ ಇಂದ್ರಿಯಗಳಿಗೆ ಪ್ರೇರಕನಾದ ಶ್ರೀಕೃಷ್ಣನು, ಉಭಯೋಃ= ಎರಡೂ, ಉಭಯೋಃ= ಸೈನ್ಯಗಳ, ಮಧ್ಯೇ= ಮಧ್ಯದಲ್ಲಿ, ಭೀಷ್ಮದ್ರೋಣಪ್ರಮುಖತಃ= ಭೀಷ್ಮಾಚಾರ್ಯರು ಮತ್ತು ದ್ರೋಣಾಚಾರ್ಯರು ಇವರುಗಳ ಅಭಿಮುಖದಲ್ಲಿ , ಚ= ಮತ್ತು, ಸರ್ವೇಷಾಂ= ಸಮಸ್ತರಾದ, ಮಹೀಕ್ಷಿತಾಂ= ರಾಜರ, ಪ್ರಮುಖತಃ= ಸಮ್ಮುಖವಾಗಿ, ರಥೋತ್ತಮಂ= ಶ್ರೇಷ್ಠವಾದ ರಥವನ್ನು , ಸ್ಥಾಪಯಿತ್ವಾ= ನಿಲ್ಲಿಸಿ , ಪಾರ್ಥ= ಅರ್ಜುನನೇ, ಸಮವೇತಾನ್= ಸೇರಿದ, ಏತಾನ್ ಕುರೂನ್= ಈ ಕೌರವರನ್ನು , ಪಶ್ಯ= ನೋಡು! ಇತಿ= ಈ ಪ್ರಕಾರವಾಗಿ , ಉವಾಚ= ಮಾತನಾಡಿದನು.

ಗೀತಾವಿವೃತ್ತಿಃ ಏವಂ ಗುಡಾಕೇಶೇನ ಗುಡಾಕಾಯಾ ನಿದ್ರಾಯಾಃ ಈಶೇನ ಜಿತನಿದ್ರೇಣಾರ್ಜುನೇನ ಉಕ್ತೋ ಹೃಷಿಕೇಶಃ ಸರ್ವೇಂದ್ರಿಯಪ್ರೇರಕಃ ಶ್ರೀಕೃಷ್ಣಃ ಬಲದ್ವಯಮಧ್ಯೇ ಭೀಷ್ಮದ್ರೋಣ ಪ್ರಮುಖತ ಇತಿ ಬುದ್ಧ್ಯಾ ವಿವಿಕ್ತೇನಾನ್ವಯಃ। ರಥಂ ಸ್ಥಾಪಯಿತ್ವಾ ಹೇ ಪಾರ್ಥ ಸಮವೇತಾನ್ ಯುದ್ಧಾರ್ಥಂ ಮಿಲಿತಾನೇತಾನ್ ಕುರೂನ್ ಪಶ್ಯೇತ್ಯುವಾಚೇತಿ।। 24 ।।25।।

ಶ್ರೀಹೆಚ್.ಎಸ್. ರಾಜಾ ಕೇಳು (ನಿದ್ರಾ ಗುಡಾಕಾ ಸಂಪ್ರೋಕ್ತಾ ಎಂಬ ವಚನಾನುಸಾರ ಗುಡಾಕಾ ಎಂದರೆ ನಿದ್ರೆಗೆ ಹೆಸರು. ಅರ್ಜುನನು ಪಾಶುಪತಾದಿ ಅಸ್ತ್ರಗಳನ್ನು ಸಂಪಾದಿಸಲು ಇಂದ್ರಕೀಲಕವೆಂಬ ಪರ್ವತದಲ್ಲಿ ಆಹಾರನಿದ್ರೆಗಳನ್ನು ತ್ಯಾಗಮಾಡಿ ಆರು ತಿಂಗಳು ತಪಸ್ಸುಮಾಡಿದನು. ಈ ರೀತಿ ಗುಡಾಕಾಯಾಃ ಈಶೇನ ನಿದ್ರೆಯನ್ನು ಜಯಿಸಿದವನಾದ್ದರಿಂದ ಗುಡಾಕೇಶ ಎಂದು ದೇವತೆಗಳು ಹೆಸರಿಟ್ಟರು.) ಈ ಪ್ರಕಾರ ಜಿತನಿದ್ರನಾದ ಅರ್ಜುನನಿಂದ ಸರ್ವೇಂದ್ರಿಯ ಪ್ರೇರಕನಾದ ಶ್ರೀಕೃಷ್ಣನು ಹೇಳಿಸಿಕೊಳ್ಳಲ್ಪಟ್ಟವನಾಗಿ ಭೀಷ್ಮದ್ರೋಣಾದಿಗಳೆದುರಿಗೂ, ಸರ್ವರಾಜರ ಸಮಕ್ಷಮವಾಗಿಯೂ, ಪಾರ್ಥನ ದಿವ್ಯ ರಥವನ್ನು ಸ್ಥಾಪಿ ಸಿ, ಎಲೈ ಪಾರ್ಥನೇ! ಯುದ್ಧಾರ್ಥವಾಗಿ ಮಿಳಿತರಾದ ಕೌರವರನ್ನು ನೋಡೆಂದು ಮಾತನಾಡಿದನು.

ವಿಶೇಷ:- ಕೃಷ್ಣನು ಹೆಚ್ಚುಮಾತನಾಡದೆ ಅರ್ಜುನನು ಹೇಳಿದಂತೆ ಯುಕ್ತಸ್ಥಳಕ್ಕೆ ಒಯ್ದನು. ಇದರಿಂದ ತನ್ನ ನಿರ್ಭಯತೆಯನ್ನು ಪ್ರಕಟನ ಮಾಡಿದನು. ಭೀಷ್ಮರು ಸುತ್ತಿಸಿರುವಂತೆ ಪರಸೈನಿಕರ ಆಯುರ್ಹ ರಣಾರ್ಥವಾಗಿ ಅವಕಾಶ ಕಲ್ಪಿಸಿಕೊಂಡನು. ಇದಕ್ಕೆ ಭಾಗವತ

ಪ್ರಮಾಣ. ಭಾಗವತ ಪ್ರ. ಸ್ಕಂಧ ಭೀಷ್ಮಸ್ತುತೌ:- ಶ್ಲೋ ''ಸಪದಿ ಸಖಿವಚೋ ನಿಶಮ್ಯ ಮಧ್ಯೇ ನಿಜಪರಯೋರ್ಬಲಯೋ ರಥಂ ನಿವೇಶ್ಯ। ಸ್ಥಿತವತಿ ಪರಸೈನಿಕಾಯುರಕ್ಷ್ಣಾ ಹೃತವತಿ ಪಾರ್ಥಸಖೇ ರತಿ ರ್ಮಮಾಸ್ತು॥''

ಗೀತೋಪದೇಶಕ್ಕೆ ಪ್ರಸಂಗವನ್ನು ಕಲ್ಪಿಸಿಕೊಂಡು ರಥದ ಅಚ್ಚನ್ನು ಅವಲಂಬಿಸಿದ್ದ ಭೀಮನಿಗೂ ಧ್ವಜಸ್ಥ ಹನುಮಂತನಿಗೂ ರಥಸ್ಥನಾಗಿ ಶೋಕಮೋಹಗ್ರಸ್ತನಾದ ಅರ್ಜುನನಿಗೂ ಉಪದೇಶದಿಂದ ಅನುಗ್ರಹಿ ಸುವುದಕ್ಕಾಗಿಯೇ. ಅರ್ಜುನನು ಹೇಳಿದ ರೀತಿಯಲ್ಲೇ ಕೃಷ್ಣನು ರಥವನ್ನು ತಂದು ನಿಲ್ಲಿಸಿದನು. ಹಾಗಿಲ್ಲದೆ ಇದ್ದರೆ ಮೂರಾವರ್ತಿ ಅಹಂ ಎಂದು ಅರ್ಜುನನು ಹೇಳಿದಾಗಲೇ ವೀರನಾದವನು ಶತ್ರುಗಳನ್ನು ನೋಡುವುದೇನೆಂದು ತಡೆದು ಬುದ್ಧಿಹೇಳಿ ಬಿಡುತ್ತಿದ್ದನು.

''ಕುರೂನ್ ಪಶ್ಯ ''ಎಂದು ಹೇಳಿದನು ಎಂದರೆ ಕ್ರೀಕರಣೇ ಎಂಬ ಧಾತುವಿನಿಂದ ಕುರು ಎಂದರೆ ಕೂಲಿ ಮಾಡುವ ಜನರಂತೆ ಕಾರ್ಯಾರ್ಥವಾಗಿ ಬಂದಿರುವ ದುರ್ಬುದ್ಧಿ ಆಳುಗಳನ್ನು ನೋಡೆಂದು ಕೃಷ್ಣನ ಅಭಿಪ್ರಾಯ. ಅರ್ಜುನನು ಹಾಗೆ ಮಾಡಲಿಲ್ಲ, ಮತ್ತೆ ಯಾರನ್ನು ನೋಡಿದನೆಂದರೆ:-

ಶ್ಲೋ॥ ತತ್ರಾಪಶ್ಯತ್ ಸ್ಥಿತಾನ್ ಪಾರ್ಥಃ ಪಿತೄನಥ ಪಿತಾಮಹಾನ್।

ಆಚಾರ್ಯಾನ್ ಮಾತುಲಾನ್ ಭ್ರಾತೄನ್ ಪುತ್ರಾನ್ ಪೌತ್ರಾನ್ ಸಖೀಂ ಸ್ತಥಾ॥26/1॥

ಶ್ವಶುರಾನ್ ಸುಹೃದಶ್ಚೈವ ಸೇನಯೋರುಭಯೋರಪಿ।

ತಾನ್ ಸಮೀಕ್ಷ್ಯ ಸ ಕೌಂತೇಯ ಸ್ಸರ್ವಾನ್ ಬಂಧೂನವಸ್ಥಿತಾನ್॥27/1॥

ಗೀ .ಪ್ರ) ತತ್ರ. ಅಪಶ್ಯತ್, ಸ್ಥಿತಾನ್, ಪಾರ್ಥಃ, ಅಥ, ಪಿತಾಮಹಾನ್, ಆಚಾರ್ಯಾನ್, ಮಾತುಲಾನ್, ಭ್ರಾತೄನ್,ಪುತ್ರಾನ್, ಪೌತ್ರಾನ್,ಸಖೀನ್,ತಥಾ, ಶ್ವಶುರಾನ್, ಸುಹೃದಃ, ಚ ಏವ, ಸೇನಯೋಃ, ಉಭಯೋಃ, ಅಪಿ।

ಅಥ= ಅನಂತರದಲ್ಲಿ, ಪಾರ್ಥಃ= ಅರ್ಜುನನು, ತತ್ರ= ಆ, ಉಭಯೋಃ ಸೇನೆಯೋಃ ಅಪಿ= ಎರಡು ಸೇನೆಗಳಲ್ಲಿಯೂ, ಸ್ಥಿತಾನ್= ಇದ್ದ, ಪಿತೄನ್= ಪಿತೃಸಮಾನರಾದ ಭೂರಿಶ್ರವ ಮೊದಲಾದವರನ್ನು ,ಪಿತಾಮಹಾನ್= ಭೀಷ್ಮಾದಿಗಳನ್ನು, ಆಚಾರ್ಯಾನ್= ಗುರುಗಳಾದ ದ್ರೋಣಾಚಾರ್ಯ ಮೊದಲಾದವರನ್ನು, ಮಾತುಲಾನ್= ಶಲ್ಯ ಮೊದಲಾದ ಮಾವಂದ ರನ್ನು, ಭ್ರಾತೄನ್= ಭೀಮ ದುರ್ಯೋಧನಾದಿ ಅಣ್ಣ ತಮ್ಮಂದಿರನ್ನು, ಪುತ್ರಾನ್= ಅಭಿಮನ್ಯುಲಕ್ಷಣಾದಿಪುತ್ರರುಗಳನ್ನು , ಪೌತ್ರಾನ್= ಲಕ್ಷಣಪುತ್ರರನ್ನು ,ತಥಾ= ಹಾಗೂ, ಸಖೀನ್= ಅಶ್ವತ್ಥಾಮಾದಿ ಸ್ನೇಹಿತರನ್ನೂ,ಶ್ವಶುರಾನ್= ದ್ರುಪದಾದಿ ಮಾವಂದರನ್ನು, ಚ= ಮತ್ತು, ಸುಹೃದಃ= ಕೃತವರ್ಮಾದಿಗಳನ್ನು ,ಅಪಶ್ಯತ್= ನೋಡಿದನು.

ಗೀತಾವಿವೃತ್ತಿಃ ತತ್ರೇತ್ಯಸ್ಯ ವಿವರಣಂ ಸೇನಯೋರುಭಯೋರಪೀತಿ। ತಥೇತಿ ಸಮುಚ್ಚಯೇ॥ 26 ॥ ತಾನವಸ್ಥಿತಾನ್ ಸರ್ವಾನ್ ಬಂಧೂನ್ ಸಮೀಕ್ಷ್ಯೈವೇತ್ಯೇವಕಾರೇಣಾನ್ವಯಃ । ವಿಷೀದನ್ವಿಷಾದಂ ಕುರ್ವನ್। ವಿಷಾದೋ ನಾಮ ಮೋಹನಿಮಿತ್ತಕಾತ್ ಶೋಕಾದ್ಯನ್ಮನೋದೌರ್ಬಲ್ಯಂ ಯಸ್ಮಿನ್ನಿತಿ ಸರ್ವವ್ಯಾಪಾರೋಪರಮೋ ಭವತಿ ಸ ಇತಿ ಜ್ಞೇಯಂ॥27॥

ಶ್ರೀಹೆಚ್.ಎಸ್.ಅರ್ಜುನನು ಆ ಉಭಯಸೈನ್ಯದಲ್ಲಿರುವ ಭೂರಿಶ್ರವಾದಿ ಪಿತೃಗಳು, ಭೀಷ್ಮ ,ಸೋಮದತ್ತಾದಿ ಪಿತಾಮಹರು, ದ್ರೋಣಾದಿ ಆಚಾರ್ಯರುಗಳು, ಶಲ್ಯಶಕುನಿ ಮೊದಲಾದ ಸೋದರಮಾವಂದಿರುಗಳು, ದುರ್ಯೋಧನಾದಿ ಭ್ರಾತೃಗಳು, ಲಕ್ಷಣನೇ ಮೊದಲಾದ ಪುತ್ರರುಗಳು, ಲಕ್ಷಣನ ಮಕ್ಕಳೇ ಮೊದಲಾದ ಮೊಮ್ಮಕ್ಕಳು, ಅಶ್ವತ್ಥಾಮ, ಜಯದ್ರಥಾದಿ ಸ್ನೇಹಿತರುಗಳು, ಹೆಣ್ಣುಕೊಟ್ಟ ಮಾವಂದಿರು, ಕೃತವರ್ಮ ಭಗದತ್ತಾದಿ ಸುಹೃತ್ತುಗಳು (ಕೃತೋಪ ಕಾರಿಗಳು) ಇತ್ಯಾದ್ಯನೇಕ ಬಂಧುಗಳನ್ನು ನೋಡಿದನು.

ವಿಶೇಷ:- ಕೃಷ್ಣನು ಶತ್ರುವಾದ ಕುರುಸೇನೆಯನ್ನು ನೋಡೆಂದನು. ಅರ್ಜುನನು ಉಭಯ ಸೈನ್ಯಗಳನ್ನೂ ನೋಡಿದನು. ಕೃಷ್ಣನು ಕುರುಗಳನ್ನು(ಆಳುಗಳನ್ನು) ನೋಡೆಂದರೆ ಪಾರ್ಥನು ಬಂಧುಗಳನ್ನು ನೋಡಿದನು. ಈ ಅಧಿಕ ಪ್ರಸಂಗತನವು, ಅರ್ಜುನನ ಮನಸ್ಸಿನಲ್ಲಿ ಕರ್ತೃತ್ವಾಭಿಮಾನ ಉಂಟಾಗಿದೆಯೆಂಬುದನ್ನು ಸೂಚಿಸುತ್ತೆ.

ಶ್ಲೋ॥ ಕೃಪಯಾ ಪರಯಾಽಽವಿಷ್ಟೋ ವೀಷದನ್ನಿದಮಬ್ರವೀತ್॥ 27 ॥

ಅರ್ಜುನ ಉವಾಚ।।

ದೃಷ್ಟ್ವೇಮ ಸ್ವಜನಂ ಕೃಷ್ಣ ಯುಯುತ್ಸುಂ ಸಮುಪಸ್ಥಿತಂ।

ಸೀದಂತಿ ಮಮ ಗಾತ್ರಾಣಿ ಮುಖಂ ಚ ಪರಿಶುಷ್ಯತಿ।।28/1।।

ವೇಪಥುಶ್ಚ ಶರೀರೇ ಮೇ ರೋಮಹರ್ಷಶ್ಚ ಜಾಯತೇ ।। 29 ।।

ಗೀ.ಪ್ರ।। ದೃಷ್ಟ್ವಾ, ಇಮಂ, ಸ್ವಜನಂ, ಕೃಷ್ಣ, ಯುಯುತ್ಸುಂ, ಸಮುಪಸ್ಥಿತಂ, ಸೀದಂತಿ, ಮಮ, ಗಾತ್ರಾಣಿ, ಮುಖಂ, ಚ, ಪರಿಶುಷ್ಯತಿ, ವೇಪಥುಃ, ಚ, ಶರೀರೇ, ಮೇ, ರೋಮಹರ್ಷಃ, ಚ ಜಾಯತೇ।।

ಕೃಷ್ಣ= ಎಲೈ ಕೃಷ್ಣನೇ! , ಯುಯುತ್ಸುಂ= ಯುದ್ಧ ಮಾಡಬೇಕೆಂದು ಇಚ್ಛೆಯುಳ್ಳ, ಸಮುಪಸ್ಥಿತಂ= ಯುದ್ಧ ಸನ್ನಾಹದಿಂದ ಬಂದ, ಇಮಂ= ಈ, ಸ್ವಜನಂ= ಬಾಂಧವರನ್ನು, ದೃಷ್ಟ್ವಾ=ನೋಡಿ, ಮಮ= ನನ್ನ, ಗಾತ್ರಾಣಿ= ಅವಯವಗಳು, ಸೀದಂತಿ= ಶಿಥಿಲವಾಗುತ್ತಿವೆ, ಚ= ಮತ್ತು, ಮುಖಂ= ಮುಖವು, ಪರಿಶುಷ್ಯತಿ = ಬಾಡುತ್ತದೆ, ಚ= ಮತ್ತು, ಮೇ= ನನ್ನ, ಶರೀರೇ= ದೇಹದಲ್ಲಿ, ವೇಪಥುಃ= ಕಂಪವು(ನಡುಕವು) ಜಾಯತೇ= ಹುಟ್ಟುತ್ತದೆ, ಚ= ಮತ್ತು, ರೋಮಹರ್ಷಃ= ರೋಮಾಂಚವು, ಜಾಯತೇ= ಹುಟ್ಟುತ್ತದೆ.

ಗೀತಾವಿವೃತ್ತಿಃ ಇದಮಬ್ರವೀತ್ ಇತ್ಯುಕ್ತಮರ್ಜುನವಾಕ್ಯಮಾಹ।। ದೃಷ್ಟ್ವೇತ್ಯಾದಿನಾಽಽಧ್ಯಾಯಸಮಾಪ್ತಿ।। ಹೇಕೃಷ್ಣ , ಸಕಲಲೋಕಕರ್ಷಕ। ತದುಕ್ತಂ ಗೀತಾಭಾಷ್ಯೇ ಪಂಚಮೇಽಧ್ಯಾಯೇ। ನಿಯಮನಾದಿನಾ ಸಕಲಲೋಕಕರ್ಷಣಾತ್ ಕೃಷ್ಣಃ। ತಚ್ಚೋಕ್ತಂ। ''ಯತಃ ಕರ್ಷಸಿ ದೇವೇಶ ನಿಯಮ್ಯ ಸಕಲಂ ಜಗತ್। ಅತೋ ವದಂತಿ ಮುನಯಃ ಕೃಷ್ಣಂ ತ್ವಾಂ ಬ್ರಹ್ಮವಾದಿನ'' ಇತಿ ಮಹಾಕೌರ್ಮೇ ಇತ್ಯುಕ್ತೇಃ। ಯುಯುತ್ಸುಂ ಯೋದ್ಧುಮಿಚ್ಛಂತಂ ಸಮ್ಯಗವಸ್ಥಿತಮಿಮಂ ಬಂಧುಜನಂ ದೃಷ್ಟ್ವಾ ಮಮ ಗಾತ್ರಾಣಿ ಹಸ್ತಾದ್ಯವಯವಾಃ ಸೀದಂತಿ ವಿಶೀರ್ಯಂತೇ। ಷಡ್ಲೃ ವಿಶರಣಗತ್ಯವಸಾದನೇ- ಷು ಇತಿ ಧಾತೋಃ। ಮುಖೇ ಮ್ಲಾನತಾ ಚ ಜಾಯತೇ।। 28 ।। ಶರೀರೇ ಕಂಪೋ ರೋಮಾಂಚಶ್ಚ ಜಾಯತೇ। ಧನುಃ ಹಸ್ತಾತ್ ಪತತಿ। ತ್ವಕ್ಚ ಪರಿತಸ್ಯಪ್ಯತ ಏವ ।।29।।

ಶ್ರೀಹೆಚ್.ಎಸ್. ಅರ್ಜುನನು ಯುದ್ಧದಲ್ಲಿ ನಿಂತ ಸಕಲಬಂಧುಗಳನ್ನೂ ನೋಡಿ, ಅಧಿಕವಾದ ದಯೆಯಿಂದ ಕೂಡಿದವನಾಗಿ ವಿಷಾದವನ್ನು ಹೊಂದಿ ಮಾತನಾಡುತ್ತಾನೆ. (ವಿಷಾದವೆಂದರೆ ಮೋಹನಿಮಿತ್ತಕವಾದ ಶೋಕದಿಂದ ಆಗುವ ಮನೋದೌರ್ಬಲ್ಯ. ಇದು ಸಕಲ ವ್ಯಾಪಾರ ವಿರಾಮಕರವಾದುದು.)

ಅರ್ಜುನನು ಮಾತನಾಡುತ್ತಾನೆ:- ಕೃಷ್ಣಾ! (''ಯತಃ ಕರ್ಷಸಿ ದೇವೇಶ ನಿಯಮ್ಯ ಸಕಲಂ ಜಗತ್। ಅತೋ ವದಂತಿ ಮುನಯಃ ಕೃಷ್ಣಂ ತ್ವಾಂ ಬ್ರಹ್ಮವಾದಿನಃ।''(ಮಹಾಕೂರ್ಮೇ) ಈ ವಚನಾನುಸಾರ ''ಕರ್ಷಯತೀತಿ ಕೃಷ್ಣಃ'' ನಿಯಮನಾದಿಗಳಿಂದ (ಆಯಾ ಕಾರ್ಯಗಳಲ್ಲಿ ಪ್ರೇರಣೆಯಿಂದ ಸಕಲಲೋಕ ಕರ್ಷಕನಾದ್ದರಿಂದ ಕೃಷ್ಣನಾಮಕನಾದ ಎಲೈ ಸ್ವಾಮಿಯೇ) ಯುದ್ಧಮಾಡಬೇಕೆಂಬ ಇಚ್ಛೆಯುಳ್ಳ ಈ ಬಂಧುಜನಗಳನ್ನು ನೋಡಿ ನನ್ನ ಅವಯವಗಳು ಶಿಥಿಲವಾಗುತ್ತಿವೆ. ಮುಖವು ಬಾಡುತ್ತಿದೆ.

ವಿಶೇಷ:- ಕರ್ತೃತ್ವಾಭಿಮಾನವು ಯಾವಾಗಲೂ ಅಧರ್ಮವನ್ನೇ ಮಾಡಿಸುತ್ತದೆ. ಕಂಸನಂಥಾ ದೈತ್ಯನಿಗೆ ಅದು ಬಂದರೆ ಸ್ವಾರ್ಥಸುಖಕ್ಕಾಗಿ ಶತ್ರುಹನನದಲ್ಲಿ ಪ್ರವೃತ್ತಿಯನ್ನು ಹುಟ್ಟಿಸುತ್ತದೆ. ಕಂಸನು ಗೋ ಬ್ರಾಹ್ಮಣರ ಹನನ, ಯಜ್ಞನಾಶ, ಶಿಶುನಾಶ, ಮುಂತಾದುವುಗಳನ್ನು ಆಜ್ಞಾಪಿಸಿ ಸ್ವಕೀಯ ದೈತ್ಯರಿಗೆ ಬೇಕಾದ ಸುಖಸಾಮಗ್ರಿಗಳನ್ನು ಒದಗಿಸಿದನು. ದುರ್ಯೋಧನನು ಪಾಂಡವರನ್ನು ಹಿಂಸಿಸಿ ತನ್ನ ಬಂಧುವರ್ಗವನ್ನು ರೋಷಪಡಿಸಿದನು. ತಾನೇ ಪರದೇವತೆಯು ತನ್ನ ನಂಬಿದವರು ಸುಖಿಸಬೇಕು. ತನ್ನ ವಿರೋಧಿಗಳು ನಾಶವಾಗಬೇಕು. ಹೀಗೆ ಸ್ವಾತ್ಮ ದೃಷ್ಟಿಯಿಂದ ಧರ್ಮಾಧರ್ಮಗಳನ್ನು ನಿರ್ಣಯಿಸುವುದು ಕೆಟ್ಟದ್ದು. ಜ್ಞಾನಿಗಳಾದೋ ಪ್ರಭುವಾದ ಶ್ರೀಹರಿಯ ದೃಷ್ಟಿಯಿಂದ ತಮ್ಮತಮ್ಮ ಬಂಧುಗಳನ್ನು ನೋಡುತ್ತಾರೆ. ಅದರಿಂದ ದೇವರಿಗೆ ಪ್ರಿಯವಾದ ಧರ್ಮವೇ ನಡೆಯುತ್ತದೆ. ಈಗಲಾದರೋ ಅರ್ಜುನನು ಕೃಷ್ಣನ ದೃಷ್ಟಿಯಿಂದ ಕುರುಸೇನೆಯನ್ನು ನೋಡದೆ ತನ್ನ ಸುಖದ ದೃಷ್ಟಿಯಿಂದ ಆ ಜನರನ್ನು ನೋಡಿದನು. ಇದಕ್ಕೆ ಫಲವಾಗಿ ನನ್ನ ಬಂಧುಗಳು ಸಾಯುವರಲ್ಲಾ ಎಂದು, ಅಪರಯಾ= ನೀಚವಾದ ಕೃಪೆ ಹುಟ್ಟಿತು. ಸಜ್ಜನನಾದ್ದರಿಂದ ಪಾರ್ಥನ ಕರ್ತೃತ್ವಾಭಿಮಾನವು ಕಂಸನಷ್ಟು ಪರೋಪದ್ರವಕಾರವಾಗಲಿಲ್ಲ. ಸಜ್ಜನನಿಗೆ ಬುದ್ಧಿಕೆಟ್ಟರೆ ಅಕಾಲದಲ್ಲಿ ಸನ್ಯಾಸಿಯಾಗುವನು ಅಥವಾ

ಆತ್ಮಹತ್ಯೆಮಾಡಿಕೊಳ್ಳುವನು. ದದುರ್ಜನರಿಗೆ ಬುದ್ಧಿಕೆಟ್ಟರೆ ಊರಿಗೆ ಬೆಂಕಿಹಚ್ಚಿ ಆ ನೋಟವನ್ನು ಮೋಜಿನಿಂದ ನೋಡುವರು.'ಕೃಪಯಾ ಪರಯಾವಿಷ್ಟ:'' ಎಂಬಲ್ಲಿ ಪರಯಾ ಕೃಪಯಾ= ಅಧಿಕವಾದ ದಯೆಯಿಂದ ಎಂದು ಒಂದು ಯೋಜನ. ಕೃಪಯಾ-ಅಪರಯಾ= ನೀಚವಾದ ಕೃಪೆಯಿಂದ ಎಂದು ಇನ್ನೊಂದು ಯೋಜನ. ಇಲ್ಲಿ ವಿಶೇಷವೇನೆಂದರೆ ಮಿತಿಮೀರಿದ ಸದ್ಗುಣವು ಯಾವಾಗಲೂ ಒಂದು ದುರ್ಗುಣವು. (ಅರಿಸ್ಟೋಟಲ್ ಎಂಬ ಗ್ರೀಕ್ ಪಂಡಿತನ ಮಾತು) ಕೃಪೆಯಲ್ಲಿ ಮಿತಿಯಿರಬೇಕು. ಉದಾ:- ಯುದ್ಧದಲ್ಲಿ ಶರಣಾಗತನಾಗುವವನಲ್ಲಿ ಕೃಪೆ ತೋರಿಸಬೇಕು. ಮಕ್ಕಳಲ್ಲಿ ಕೃಪೆಮಾಡಬೇಕು. ಅದೇ ಹುಡುಗ ಕದ್ದರೆ ದಂಡಿಸಬೇಕು. ಮಿತಿಯಿಲ್ಲದ ಕೃಪೆಯು ದುರ್ಮೋಹವಾಗಿ ಪಿಶಾಚಿಯಂತೆ ಆವರಿಸಿತೆಂದು ಆವಿಷ್ಟ: ಎಂಬ ಪದ ಸೂಚಿಸುತ್ತೆ.

ವಿಷೀದನ್= ಗ್ಲಾನಿಯನ್ನು ಚಿತ್ತದಲ್ಲಿ ಹೊಂದಿದವನಾಗಿ ಎಂಬುವುದರಿಂದ ಧರ್ಮವು ಹಾಳಾಯಿತು. ಅಧರ್ಮವು ಬಂತು. ತನಗೂ ಸುಖವಿಲ್ಲವೆಂಬುದು ಸೂಚಿತವಾಗುತ್ತೆ. ಅದಕ್ಕೇ ತಪಸ್ಸಾದರೂ ಸಂತೋಷಮನಸ್ಕನಾಗಿಯೇ ಮಾಡಬೇಕು. ತಪಸ್ಸು ಮಾಡಬೇಕಲ್ಲಾ ಎಂಬ ವ್ಯಥೆ ಮನಸ್ಸಿನಲ್ಲಿರಬಾರದು. ಮದುವೆಯೊಳಗೆ ಊಟಕ್ಕೆ ಹೊತ್ತಾಗಿ ಕ್ಲೇಶವಾದರೂ ಮನಸ್ಸಿಗೆ ಖುಷಿಯಾಗೇ ಇರುತ್ತೆ. ಕ್ಷತ್ರಿಯರಿಗೆ ಉಕ್ತವಾದ ವೈದಿಕ ಹಿಂಸೆಯನ್ನು ಅಧರ್ಮವನ್ನಾಗಿ ತಿಳಿದನು. ಎಲ್ಲಾ ಧರ್ಮವನ್ನೂ ಅಧರ್ಮವಾಗಿ ತಿಳಿಯಬಾರದೆಂದು ಅರ್ಜುನನೇ ಶಾಂತಿ ಪರ್ವದಲ್ಲಿ ಹೇಳಿದ್ದಾನೆ. *ಶ್ಲೋಕ* ॥''ನ ಹಿ ಪಶ್ಯಾಮಿ ಜೀವಂತಂ ಲೋಕೇ ಕಿಂಚಿದಹಿಂಸಯಾ। ಸತ್ವೈ: ಸತ್ವಾಹಿ ಜೀವಂತಿ ದುರ್ಬಲೈರ್ಬಲವತ್ತರಾ'' ಊಟಮಾಡುವುದರಲ್ಲೇ ಪಂಚಸೂನಾದೋಷಗಳು ಬರುತ್ತವೆ. ಅಂಥಾ ಹಿಂಸೆಯನ್ನು ಪ್ರಾಯಶ್ಚಿತ್ತದಿಂದಲೂ, ವಿಷ್ಣು ಧ್ಯಾನದಿಂದಲೂ, ಪುಣ್ಯರೂಪವನ್ನಾಗಿ ತಿರುಗಿಸಿಕೊಳ್ಳಬೇಕೇ ಹೊರತು ಅಂಥಾ ಹಿಂಸೆಯನ್ನು ಮಾಡಲೇಬಾರದೆಂದು ಬಿಟ್ಟುಬಿಟ್ಟರೆ ಮರಣವೇ ಬರುತ್ತೆ. ಊಟ ಮಾಡಿದರೆ ಪಾಪ ಬರುತ್ತಲ್ಲಾ ಎಂದು ಊಟವನ್ನೇಬಿಟ್ಟು ದೇವರಸೇವೆ ಮಾಡುತ್ತೇನೆಂದು ಹೇಳ್ವನು ಮಂದ. ದೇವರಸೇವೆಯನ್ನು ಶ್ರಮಪಟ್ಟು ಮಾಡಬೇಕು. ಅಂಥಾ ದೇವರಸೇವೆಗೆ ಅನುಕೂಲವಾಗುವ ಭೋಜನವಮುಂತಾದುವುಗಳನ್ನು ಹಿಂಸೆಯಾದರೂ ಮಾಡಬೇಕು. ಬಂದ ಹಿಂಸಾದೋಷವನ್ನು ಪ್ರಾಯಶ್ಚಿತ್ತದಿಂದ ಕಳೆದುಕೊಳ್ಳಬೇಕು. ಭೋಜನವನ್ನು, ಹಿಂಸಾದೋಷಬರುತ್ತದೆಂದು ಬಿಟ್ಟುಬಿಟ್ಟರೆ ಸ್ವಾಮಿಸೇವೆಬಿಟ್ಟಂತಾಗಿ ಸ್ವಾಮಿದ್ರೋಹವು ಬರುತ್ತೆ. ಸ್ವಾಮಿದ್ರೋಹಕ್ಕಿಂತ ವ್ರೀಹಿದ್ರೋಹವು ದೊಡ್ಡದಲ್ಲ. ಅದಕ್ಕಾಗಿ ಅಲ್ಪವಾದ ವ್ರೀಹಿದ್ರೋಹವನ್ನಾದರೂ ಮಾಡಿ ಸ್ವಾಮಿಪ್ರೀತಿಯನ್ನು ಸಂಪಾದಿಸಿಕೊಂಡು ಕ್ರಿಮಿಹನನ ಪಾಪವನ್ನು ಕಳೆದುಕೊಳ್ಳಬೇಕು. ಉದಾ: ಯುದ್ಧಮಾಡುತ್ತಿರುವಾಗ ರಾಜಭಟನು ರಾಜನ ಅನ್ನವನ್ನು ತಿನ್ನುತ್ತಿರುವಾಗ ರಾಜನಿಗೆ ಖರ್ಚುಮಾಡಿಸುತ್ತಿರುವನೆಂದು ಎಂದೂ ಅಪವಾದಕ್ಕೆ ಗುರಿಯಾಗುವುದಿಲ್ಲ. ಶತ್ರುಜಯ ಮುಖ್ಯ.

ಇನ್ನೊಂದು ವಿಧವಾದ ಹಿಂಸೆಯೂ ಧರ್ಮಕ್ಕೆ ಕಾರಣವಾಗುತ್ತೆ. ಆದ್ದರಿಂದ ತ್ಯಾಜ್ಯವಲ್ಲವೆಂದು ಅರ್ಜುನನೇ ಹೇಳಿರುತ್ತಾನೆ. ''ರಾಜದಂಡಭಯಾದೇಕೇ ಪಾಪ: ಪಾಪಂ ನ ಕುರ್ವತೇ।'' ರಾಜನು ದಂಡ ಮಾಡುತ್ತಿದ್ದರೆ, ಪಾಪಿಗಳು ಪಾಪವನ್ನು ಮಾಡುವುದಿಲ್ಲ. ಇಂಥಾ ದಂಡದಾನವು ಪುಣ್ಯಕರವೇ.

ಹೀಗೆ ಕೆಲವು ಹಿಂಸೆಯು ಶಾಸ್ತ್ರೀಯವೇ ಪುಣ್ಯಕರವೇ. ಜ್ಞಾನದೌರ್ಬಲ್ಯದಿಂದ ಅರ್ಜುನನು ಅದನ್ನು ಮರೆತುಬಿಟ್ಟನು. ಮೋಹದಿಂದ ತನ್ನ ಶತ್ರುಗಳಿಗಿಂತ ತನ್ನ ಸ್ವಾಮಿಯಶತ್ರುಗಳು ತನಗೆ ಅಧಿಕಶತ್ರುಗಳೆಂದು ತೋರದೇ ಹೋಯಿತು. ಇದಕ್ಕೂ ಮೋಹದಿಂದ ತಾನು ಭಗವಂತನ ದಾಸನೆಂಬುದನ್ನು ಮರೆತು ಕರ್ತೃತ್ವವನ್ನು ವಹಿಸಿದ್ದೇ ಕಾರಣವು.

ಶ್ಲೋಕ: ಗಾಂಡೀವಂ ಸ್ರಂಸತೇ ಹಸ್ತಾತ್ ತ್ವಕ್ಚೈವ ಪರಿದಹ್ಯತೇ।

ನ ಚ ಶಕ್ನೋಮ್ಯವಸ್ಥಾತುಂ ಭ್ರಮತೀವ ಚ ಮೇ ಮನ: ॥30 ॥

ಗೀ. ಪ್ರ. ಚಂ. ಗಾಂಡೀವಂ, ಸ್ರಂಸತೇ, ಹಸ್ತಾತ್, ತ್ವಕ್, ಚ, ಏವ, ಪರಿದಹ್ಯತೇ, ನ, ಚ, ಶಕ್ನೋಮಿ, ಅವಸ್ಥಾತುಂ, ಭ್ರಮತಿ, ಇವ, ಚ, ಮೇ, ಮನ: ॥30॥

ಗಾಂಡೀವಂ= ಗಾಂಡೀವ ಧನಸ್ಸು, ಹಸ್ತಾತ್= ಕೈಯಿಂದ, ಸ್ರಂಸತೇ= ಜಾರುತ್ತಿದೆ, ತ್ವಕ್ ಚ= ಚರ್ಮವಾದರೂ, ಪರಿದಹ್ಯತೇ ಏವ= ತಪ್ತವಾಗುತ್ತಿದೆ, ಮೇ= ನನ್ನ, ಮನಶ್ಚ= ಮನಸ್ಸಾದರೂ, ಭ್ರಮತಿ= ಇವ=ಏವ, ಮೋಹವನ್ನು ಹೊಂದುತ್ತದೆ, ಅತ:= ಆದಕಾರಣ,

ಅವಸ್ಥಾತುಂ= ನಿಲ್ಲುವುದಕ್ಕೆ, ನ ಶಕ್ನೋಮಿ= ಸಮರ್ಥನಾಗುವುದಿಲ್ಲ.

ಶ್ರೀಹೆಚ್. ಎಸ್. ದೇಹದಲ್ಲಿ ನಡುಕವೂ, ರೋಮಾಂಚವೂ ಹುಟ್ಟುತ್ತಿದೆ. ಗಾಂಡೀವಧನುಸ್ಸು ಕೈಯಿಂದ ಜಾರುತ್ತಿದೆ. ಚರ್ಮವು ಸರ್ವತ್ರ ತಪ್ತವಾಗುತ್ತಿದೆ.

ವಿಶೇಷಃ= ಮೈಮೇಲೆ ರೋಮಾಂಚವು ಸಂತೋಷಕ್ಕೂ ದುಃಖಕ್ಕೂ ಉಂಟಾಗುತ್ತೆ. ಇಲ್ಲಿಸಂತಾಪವುಂಟಾಗಿದೆ. ಗಾಂಡೀವದ ವಿಷಯ ಅಧ್ಯಾತ್ಮದರ್ಥ. ಗಾಂಡೀವವೆಂದರೆ, ಪ್ರಣವಧ್ಯಾನಕ್ಕೂ ಕಾಮಾದಿ ನಿಗ್ರಹಕ್ಕೂ ಕಾರಣೀಭೂತವಾದ ಚಿತ್ತ(will power) ಗಾಂಡೀವದ ಮಹಿಮೆಯನ್ನು ಜಮದಗ್ನಿಋಷಿಗಳು ದುರ್ಯೋಧನನಿಗೆ ಉದ್ಯೋಗಪರ್ವದಲ್ಲಿ ಹೇಳಿದ್ದಾರೆ. ''ತಸ್ಮಾದ್ಯಾವದ್ಧನುಃ ಶ್ರೇಷ್ಠೇ ಗಾಂಡೀವೇಽಸ್ತ್ರಂ ನ ಯುಜ್ಯತೇ। ತಾವತ್ತ್ವಂ ಮಾನಮುತ್ಸೃಜ್ಯ ಗಚ್ಛನ್ ರಾಜನ್ ಧನಂಜಯಂ॥''

ಅಂದ ಮೇಲೆ ಶತ್ರು ನಿಗ್ರಹಮಾಡುವುದರಲ್ಲಿ ಅದಕ್ಕಿಂತ ಉತ್ತಮವಾದ ಬಿಲ್ಲಿಲ್ಲ. ಆಧ್ಯಾತ್ಮವಾಗಿ ಹರಿಧ್ಯಾನ ಪರನಾದ ವೀರನ ಚಿತ್ತವು ಕಾಮ,ಕ್ರೋಧ, ಲೋಭ,ಮೋಹ, ಮದ,ಮಾನ, ಮಾತ್ಸರ್ಯ ಅಹಂಕಾರಗಳೆಂಬ ಎಂಟು ದೋಷಗಳನ್ನು ನಾಶಮಾಡುವುದು. ಅಶಾಸ್ತ್ರೀಯವಾದ ಸ್ನೇಹವನ್ನು ಮಾಡಿದ ಅರ್ಜುನನ ಚಿತ್ತವು ಆತ್ಮಗತವಾದ ಈ ಎಂಟು ದೋಷಗಳನ್ನು ಕೊಲ್ಲದೇ ಅಸಮರ್ಥವಾಯಿತು. ಆದ್ದರಿಂದಲೇ ಅವನ ಧನಸ್ಸು ಅವನ ಕೈಯಿಂದ ಜಾರಿಬಿತ್ತು. ಅಷ್ಟೇ ಅಲ್ಲ ಇನ್ನೂ ಅನರ್ಥವಾಯ್ತು ಅದೇನೆಂದರೆ,

ಶ್ಲೋಕ॥ ನಿಮಿತ್ತಾನಿ ಚ ಪಶ್ಯಾಮಿ ವಿಪರೀತಾನಿ ಕೇಶವ।

ನ ಚ ಶ್ರೇಯೋನುಪಶ್ಯಾಮಿ ಹತ್ವಾ ಸ್ವಜನಮಾಹವೇ॥ 31॥

ಗೀ.ಪ್ರ. ನಿಮಿತ್ತಾನಿ, ಚ, ಪಶ್ಯಾಮಿ, ವಿಪರೀತಾನಿ, ಕೇಶವ, ನ, ಚ, ಶ್ರೇಯಃ, ಅನುಪಶ್ಯಾಮಿ, ಹತ್ವಾ , ಸ್ವಜನಂ, ಆಹವೇ।

ಕೇಶವ= ಎಲೈಕೃಷ್ಣನೇ, ವಿಪರೀತಾನಿ= ಅನಿಷ್ಠಸೂಚಕಗಳಾದ, ನಿಮಿತ್ತಾನಿ= ಶಕುನಗಳನ್ನು, ಚ= ಕೂಡ, ಪಶ್ಯಾಮಿ= ನೋಡುತ್ತೇನೆ. ಆಹವೇ= ಯುದ್ಧದಲ್ಲಿ, ಸ್ವಜನಂ= ಬಾಂಧವರನ್ನು , ಹತ್ವಾ=ಕೊಂದು, ಶ್ರೇಯಃ ಚ= ಶ್ರೇಯಸ್ಸನ್ನಾದರೂ, ಅನುಪಶ್ಯಾಮಿ= ನೋಡುವುದಿಲ್ಲ.

ಗೀತಾ ವಿವೃತ್ತಿಃ ಅವಸ್ಥಾತುಂ ಚ ನ ಶಕ್ನೋಮಿ। ಮನಶ್ಚ ಮೇ ಭ್ರಮತೀವ ಚ ವಿಪರೀತಾನಿ ನಿಮಿತ್ತಾನಿ ದುರ್ನಿಮಿತ್ತಾನಿ ಚ ಪಶ್ಯಾಮಿ। ಕೇಶವ ಬ್ರಹ್ಮರುದ್ರಪ್ರವರ್ತಕ। ಕಶ್ಚ ಈಶಶ್ಚ ಕೇಶೌ ತೌ ಸೃಷ್ಟ್ಯಾದಿನಾ ವರ್ತಯತೀತಿ ವ್ಯುತ್ಪತ್ತೇಃ। ಕೇಶ ಪದೋಪಪದಾದ್‌ವೃತುವರ್ತನ ಇತ್ಯತೋಽತರ್ಣೀತಣ್ಯರ್ಥಾಡ್ಡಪ್ರತ್ಯಯೇ ರೂಪಸಿದ್ಧಿಃ। ಉಕ್ತಂ ಹಿ ಸ್ಥಿತಪ್ರಜ್ಞಸ್ಯ ಕಾ ಭಾಷೇತ್ಯೇತದ್ಭಾಷ್ಯೇ। ''ಹಿರಣ್ಯಗರ್ಭಃ ಕಃ ಪ್ರೋಕ್ತ ಈಶಃ ಶಂಕರ ಏವ ಚ। ಸೃಷ್ಟ್ಯಾದಿನಾ ವರ್ತಯತಿ ತೌ ಯತಃ ಕೇಶವೋ ಭವಾನ್'' ಇತಿ॥ 30॥ ಯುದ್ಧೇನ ಶ್ರೇಯೋ ಲಭ್ಯತ ಇತ್ಯತ ಆಹ॥ ನಚೇತಿ। ಶ್ರೇಯಶ್ಚ ನ ಪಶ್ಯಾಮಿ। ಆಹವೇ ಯುದ್ಧೇ ವಿಜಯಾದಿಕಂ ಫಲಂ ನೇಚ್ಛಾಮಿ॥ 31 ॥

ಶ್ರೀಹೆಚ್. ಎಸ್.ಕೇಶವಾ! (ಹಿರಣ್ಯಗರ್ಭಃ ಕಃ ಪ್ರೋಕ್ತಃ ಈಶಃ ಶಂಕರ ಏವ ಚ। ಸೃಷ್ಟ್ಯಾದಿನಾ ವರ್ತಯತಿ ತೌ ಯತಃ ಕೇಶವೋ ಭವಾನ್-ಹರಿವಂಶ.)ಕಶ್ಚ ಈಶಶ್ಚ ಕೇಶೌ ತೌ ಸೃಷ್ಟ್ಯಾದಿನಾ ವರ್ತಯತೀತಿ ಕೇಶವಃ॥ ಬ್ರಹ್ಮರುದ್ರ ಪ್ರವರ್ತಕನೇ ಕೂತುಕೊಳ್ಳುವುದಕ್ಕೆ ನನ್ನ ಕೈಲಾಗುತ್ತಿಲ್ಲ ಆಸನಹಾಕಿ ಶರೀರಧಾರಣಮಾಡುವುದಕ್ಕೂ ಆಗುವುದಿಲ್ಲ. ಏಕೆಂದರೆ ಮನಸ್ಸು ಇನ್ನೇನು ಮೂರ್ಛೆ ಹೊಂದುತ್ತೋ ಎಂಬಂತೆ ಭ್ರಮಣವನ್ನು ಹೊಂದಿದೆ. ದುಃಖ ಸೂಚಕವಾದ ದುರ್ನಿಮಿತ್ತಗಳೂ ಕೂಡ ನನ್ನ ಕಣ್ಣಿಗೆ ಕಾಣುತ್ತಿವೆ.

ವಿಶೇಷ: ಅರ್ಜುನನು ದುರ್ನಿಮಿತ್ತಗಳನ್ನು ಕಂಡದ್ದೇನೋ ನಿಜ. ಆದರೆ ರಾಮರಾವಣರ ಯುದ್ಧವಾಗುತ್ತಿದ್ದಾಗ ಆದ ಅನಿಷ್ಟಗಳು ಹೇಗೆ ರಾಕ್ಷಸರಿಗೆ ಅಮಂಗಳ ಸೂಚಕವಾದವೋ ಹಾಗೆಯೇ ಈಗ ಕಂಡ ಅರಿಷ್ಟಗಳು ಕೌರವರಿಗೆ ನಾಶ ಸೂಚಕವು. ಆದರೆ ಅರ್ಜುನನು ಮನೋವಿಕಾರವುಳ್ಳವನಾದ್ದರಿಂದ ಅರಿಷ್ಟಗಳ ಉತ್ಪತ್ತಿಪ್ರಕಾರವನ್ನು ವಿಚಾರಮಾಡದೇ ತನ್ನಕಡೆಯವರಿಗೆ ಅವು ಅಶುಭ ಸೂಚಕವೆಂದು ಭ್ರಾಂತನಾಗಿದ್ದಾನೆ.

ಇಂಥಾ ಕಾಲದಲ್ಲಿ ನನ್ನನ್ನು ಯುದ್ಧಕ್ಕೆ ತಳ್ಳಿ ನಗುತ್ತಾ ನಿಲ್ಲುವುದು ನ್ಯಾಯವಲ್ಲ. ನಿನ್ನ ಪ್ರೇರಣೆಯಿಲ್ಲದೆ ಯುದ್ಧಮಾಡುವವನೇ ಅಲ್ಲ ಎಂಬುದನ್ನು ಸೂಚಿಸುವುದಕ್ಕಾಗಿಯೇ ಕೇಶವಾ! ಎಂದು ಕರೆದಿದ್ದಾನೆ. ( ಉದಾ:- ಹೇಗೆ ಹುಡುಗನನ್ನು ಮಠಕ್ಕೆ ಹೋಗೆಂದು

ತಳ್ಳುತ್ತಿರುವ ತಂದೆಯನ್ನು ಕುರಿತು ''ಅಪ್ಪಾ, ಉಪಾಧ್ಯರು ನಿನ್ನ ಮಾತು ಮೀರುವವರಲ್ಲ. ಅಲ್ಲಿಗೆ ನಾನು ಹೋದರೆ ಖಂಡಿತಾ ಅವರು ಹೊಡೆಯುತ್ತಾರೆ. ನೀನೇನೊ ಬಾಯಲ್ಲಿಹೋದರೆ ಹೋಗಲಿ ಬಿಟ್ಟುಬಿಡೆಂದು ಹೇಳುತ್ತಿ. ಉಪಾಧ್ಯರಿಗೆ ಹೊಡಿಯಿರಿ ಎಂದು ಒಳಗೇ ಹೇಳುತ್ತಿ. ನಿನ್ನ ಮಾತು ಮೀರದ ಅವರು ಹೊಡೆದರೆ ನೀನಾಗಿ ಹೊಡೆಸಿದಂತಾಗುತ್ತೆ'' ಎಂದು ಹೇಳುವಂತೆ ಅರ್ಜುನನು ಕೇಶವಾ ಎಂದು ಮಾತಿನಿಂದಈ ಅಭಿಪ್ರಾಯ ವ್ಯಕ್ತವಾಗುತ್ತೆ)

ಅವತಾರಿಕೆ: ಯುದ್ಧದಿಂದ ಪುಣ್ಯಬರುತ್ತೆ. ಬೇಕಾದ ಅರಿಷ್ಟಫಲ ಬರಲಿ. ಪುಣ್ಯಬರುತ್ತೆ ಎಂದ ಮೇಲೆ ಯುದ್ಧಕ್ಕೆ ಹೊರಟೇ ತೀರಬೇಕು. ಯುದ್ಧಮಾಡಲೇ ಬೇಕು ಎನ್ನುವಿಯಾದರೆ ಹೇಳುವೆನು ಕೇಳು:-

ಶ್ಲೋಕ।। ನ ಕಾಂಕ್ಷೇ ವಿಜಯಂ ಕೃಷ್ಣ ನ ಚ ರಾಜ್ಯಂ ಸುಖಾನಿಚ।

ಕಿಂನೋ ರಾಜ್ಯೇನ ಗೋವಿಂದ ಕಿಂ ಭೋಗೈರ್ಜೀವಿತೇನ ವಾ।।32।।

ಗೀತಾ ಪ್ರ ಪ।। ನ ಕಾಂಕ್ಷೇ, ವಿಜಯಂ , ಕೃಷ್ಣ ನ, ಚ, ರಾಜ್ಯಂ, ಸುಖಾನಿ, ಚ, ಕಿಂ, ನಃ, ರಾಜ್ಯೇನ, ಗೋವಿಂದ, ಕಿಂ, ಭೋಗೈಃ, ಜೀವೇನ, ವಾ।। 32 ।।

ಕೃಷ್ಣ= ಎಲೈ ಕೃಷ್ಣನೇ! ,ವಿಜಯಂ= ಜಯವನ್ನು, ನ ಕಾಂಕ್ಷೇ= ಇಚ್ಛಿಸುವುದಿಲ್ಲ , ರಾಜ್ಯಂ= ರಾಜ್ಯವನ್ನು ,ಸುಖಾನಿ ಚ= ಸುಖಗಳನ್ನು, ನ ಕಾಂಕ್ಷೇ= ಇಚ್ಛಿಸುವುದಿಲ್ಲ, ಗೋವಿಂದ= ಎಲೈ ಕೃಷ್ಣನೇ! , ನಃ= ನಮ್ಮಗಳಿಗೆ, ರಾಜ್ಯೇನ= ಕಿಂ= ಏನು ಪ್ರಯೋಜನವು? ಭೋಗೈಃ= ಭೋಗಗಳಿಂದ, ಜೀವಿತೇನ ವಾ= ಬದುಕುವುದರಿಂದ ಕೂಡ, ಕಿಂ= ಏನು ಪ್ರಯೋಜನವು

ಗೀತಾವಿವೃತ್ತಿಃ ಯೇಷಾಮರ್ಥೇ ಪ್ರಯೋಜನನಿಮಿತ್ತಂ ರಾಜ್ಯಾದ್ಯಪೇಕ್ಷಿತಂ ನಃ ಅಸ್ಮಾಕಂ ।। 32 ।।

ಶ್ಲೋಕ।। ಯೇಷಾಮರ್ಥೇ ಕಾಂಕ್ಷಿತಂ ನೋ ರಾಜ್ಯಂ ಭೋಗಾಸ್ಸುಖಾನಿ ಚ।

ತ ಇಮೇವಸ್ಥಿತಾಯುದ್ಧೇ ಪ್ರಾಣಾಂಸ್ತ್ಯಕ್ತ್ವಾ ಧನಾನಿ ಚ।।33।।

ಗೀತಾ. ಪ್ರ. ಚಂ ಯೇಷಾಂ, ಅರ್ಥೇ, ಕಾಂಕ್ಷಿತಂ, ನಃ, ರಾಜ್ಯಂ, ಭೋಗಾಃ, ಸುಖಾನಿ, ಚ, ತೇ, ಇಮೇ, ಅವಸ್ಥಿತಾಃ, ಯುದ್ಧೇ, ಪ್ರಾಣಾನ್, ತ್ಯಕ್ತ್ವಾ , ಧನಾನಿ, ಚ।।

ನಃ= ನಮ್ಮಗಳಿಗೆ, ರಾಜ್ಯಂ= ರಾಜ್ಯವು, ಭೋಗಾಃ= ಭೋಗಗಳು, ಸುಖಾನಿ ಚ= ಸುಖಗಳೂ ಕೂಡ , ಯೇಷಾಂ ಅರ್ಥೇ= ಯಾರಿಗೋಸ್ಕರ, ಕಾಂಕ್ಷಿತಂ= ಅಪೇಕ್ಷಿತವದವುಗಳೋ, ತೇ ಇಮೇ= ಆ ಈ ಬಂಧುಗಳು, ಪ್ರಾಣಾನ್= ಜೀವದಾಶೆ ಯನ್ನು ಧನಾನಿ, ಚ= ದ್ರವ್ಯವನ್ನೂ ಕೂಡ, ತ್ಯಕ್ತ್ವಾ= ಬಿಟ್ಟು, ಯುದ್ಧೇ= ಯುದ್ಧದಲ್ಲಿ, ಅವಸ್ಥಿತಾಃ= ನಿಂತಿದ್ದಾರೆ.

ಶ್ರೀಹೆಚ್.ಎಸ್.ಹೇ ಕೃಷ್ಣಾ! ಈ ಯುದ್ಧದಿಂದ ಪುಣ್ಯವು ಬರುವುದಿಲ್ಲ. ಏಕೆಂದರೆ, ಇದರಲ್ಲಿ ಸ್ವಜನರನ್ನು ಕೊಲ್ಲಬೇಕಾಗುತ್ತೆ. ಎಂದರೆ ಸ್ವಜ್ಞಾತಿ ಜನರನ್ನು ಕೊಲ್ಲುವ ಯುದ್ಧದಲ್ಲಿ ಪುಣ್ಯವಿಲ್ಲ. ಉದಾ:- ಬೇಟೆ ಆಡಿದರೆ ಪುಣ್ಯವೆಂದಿದೆ. ಆದರೆ ಸಿಂಹ ಹುಲಿ ಮುಂತಾದ ವನ್ಯಕ್ರೂರಜಂತುಗಳನ್ನು ಬೇಟೆಯಾಡಿದರೆ ಪುಣ್ಯವೇ ಹೊರತು ಋಷಿಕುಮಾರರು, ಕಾಡಿನಲ್ಲಿನ ಭಿಲ್ಲರು, ಬೇಟೆನಾಯಿ ಪಕ್ಷಿಗಳನ್ನು ಬೇಟೆಯಾಡಿದರೆ ಪುಣ್ಯ ಬರಲ್ಲ. ಪಾಪವೇ ಬರುತ್ತೆ. ಯುದ್ಧಮಾಡಿ ಜಯ ಸಂಪಾದಿಸಿ ದರೆ ರಾಜ್ಯ ಬರುತ್ತಲ್ಲಾ ಎಂದರೆ ನನಗೆ ಜಯವೂ ಬೇಡ. ಜಯಶಾಲಿ ಎಂಬ ಕೀರ್ತಿಯೂ ಬೇಡ. ಹಾಗೇ ರಾಜ್ಯವಾಗಲೀ ರಾಜ್ಯಭೋಗದಿಂದ ಆಗತಕ್ಕ ಸುಖವಾಗಲೀ ಬೇಡ. ಏಕೆಂದರೆ, ನೀನು ಕೃಷ್ಣ ಎಂದರೆ ಆನಂದ ಪೂರ್ಣ. ಇಂಥಾ ನಿನ್ನ ಜೊತೆಯಲ್ಲೇ ಇದ್ದಮೇಲೆ ಕಂಬಳಿ ಕುಡಗೋಲು ಕಟ್ಟಿಕೊಂಡು ಏನು ಮಾಡುವುದು ಎಂದರೆ ತುಚ್ಛವಾದ ಈ ರಾಜ್ಯವನ್ನು ಕಟ್ಟಿಕೊಂಡೇನು?

ವಿಶೇಷ:= ರಣದಲ್ಲಿ ಯುದ್ಧಮಾಡಿ ಸತ್ತರೆ ಸ್ವರ್ಗವಾಗುವುದು ಎಂದು ಪ್ರಮಾಣವಿದೆ. ಆದರೆ ರಣದಲ್ಲಿ ಯುದ್ಧಮಾಡಿ ಜ್ಞಾತಿಗಳನ್ನು ಕೊಂದರೆ ಸ್ವರ್ಗವೆಲ್ಲಿ ಆಗುತ್ತೆ. ನಿನ್ನ ಅನುಗ್ರಹಕ್ಕೆ ಪಾತ್ರನಾದ ನಾನು ಯುದ್ಧದಲ್ಲಿ ಸಾಯೋದು ಎಲ್ಲಿ ಬಂತು. ಎಂಬ ಅಭಿಪ್ರಾಯದಿಂದ ಬಹತ್ವಾ ಸ್ವಜನಮಾಹವೇ= ಸ್ವಜನಗಳನ್ನು ಕೊಂದರೆ ಪುಣ್ಯವಿಲ್ಲವೆಂದು ಹೇಳಿದನೇ ಹೊರತು ಯುದ್ಧದಲ್ಲಿ ತಾನು ಸತ್ತರೆ ತನಗೆ ಪುಣ್ಯವಿಲ್ಲವೆಂದು ಹೇಳಲಿಲ್ಲ.

ಹೇ ಗೋವಿಂದಾ! (ಇದರ ಮೇಲೆ ಈ ಎದುರಿಗಿರುವ ಜನರನ್ನು ಕೊಂದರೆ ನಮ್ಮ ಸುಖಕ್ಕೇ ಮುಳಿ - ಹಾನಿ ಹೇಗೆಂದರೆ) ಮನುಷ್ಯನು ರಾಜ್ಯವನ್ನಾಗಲೀ, ವಿಷಯಭೋಗಗಳನ್ನಾಗಲೀ ಅಥವಾ ಇತರ ಸುಖಸಾಧನಗಳನ್ನಾಗಲೀ ಕೋರುವುದೆಲ್ಲಾ ಬಂಧುಗಳ ಜೊತೆಯಲ್ಲಿ ಅವುಗಳಿಂದ ಸುಖವನ್ನು ಅನುಭವಿಸುವುದಕ್ಕಾಗಿ ಮತ್ತು ರಾಜ್ಯಾದಿಗಳನ್ನು ಆ ಬಂಧುಗಳಿಗೆ ಕೊಟ್ಟು ಅವರಿಗೆ ಉಂಟಾದ ಸುಖವನ್ನು ನೋಡುವುದಕ್ಕಾಗಿ ( ಉದಾ:- ಸನ್ಯಾಸ ತೆಗೆದುಕೊಳ್ಳಲು ನನಗೇನು ಹೆಂಡ್ರೇ ಮಕ್ಕಳೇ ಎನ್ನುವ ಹಾಗೆ) ಹೀಗಿರುವಾಗ ಈ ಬಂಧುಗಳನ್ನೆಲ್ಲಾ ಕೊಂದರೆ ಬರತಕ್ಕ ರಾಜ್ಯದಿಂದ ಭೋಗಸಾಮಗ್ರಿಗಳಿಂದ ಅಥವಾ ನಮ್ಮ ಬದುಕೋಣದರಿಂದ ಏನುತಾನೇ ಸುಖ?

ವಿಶೇಷ:- ಗೋವಿಂದಾ! ಎಂದು ಕರೆದದ್ದೇಕೆಂದರೆ:- ಗೋವಿಂದನೆಂದರೆ ವೇದ ಪ್ರತಿಪಾದ್ಯ. ವೇದಾರ್ಥ ಬಲ್ಲ ವೇದವ್ಯಾಸ ಎಂದರ್ಥ. ಆದ್ದರಿಂದಲೇ ''ಇಷ್ಟೈಃ ಸಹ ಭುಕ್ತಂ ಭುಕ್ತಂ'' ಅಪ್ಯ ಕಾರ್ಯಶತಂ ಕೃತ್ವಾ ಭರ್ತವ್ಯಾ ಮನುರಬ್ರವೀತ್।''

ನೂರಾರು ಅಲ್ಪಕಾರ್ಯಗಳನ್ನಾದರೂ ಮಾಡಿ ಎಂದರೆ ದುರ್ದಾನಾದಿಗಳನ್ನಾದರೂ ತೆಗೆದುಕೊಂಡು ಕ್ಷತ್ರಿಯ ವೈಶ್ಯ ವೃತ್ತಿಯನ್ನಾದರೂ ಮಾಡಿ ದ್ರವ್ಯ ಸಂಪಾದಿಸಿ ವಿಪ್ರನು ವೃದ್ಧರಾದ ಮಾತಾಪಿತೃಗಳನ್ನು, ಅನುಕೂಲಳಾದ ಹೆಂಡತಿಯನ್ನು,_ಅಶಕ್ತರಾದ ಮಕ್ಕಳನ್ನೂ, ಸಂರಕ್ಷಿಸಬೇಕು. ಹೀಗೆ ವೇದವು ಹೇಳುತ್ತೆ. ಅದೆಲ್ಲವನ್ನೂ ನೀನು ತಿಳಿದವನು. ಯಾರನ್ನು ಸುಖಪಡಿಸುವುದಕ್ಕೋಸ್ಕರ ಅಕಾರ್ಯವನ್ನಾದರೂ ಮಾಡಬೇಕೆಂದು ವೇದ ಹೇಳುತ್ತೋ ಅಂಥವರನ್ನೇ ಕೊಲ್ಲುವುದು ಎಂಥಾ ಪಾಪ ಮತ್ತು ಎಂಥಾ ದುಃಖಮಯವಾದ ವ್ಯಾಪಾರ ಎಂಬುದನ್ನು ಗೋವಿಂದನಾದ್ದರಿಂದ ನೀನು ತಿಳಿದಿಲ್ಲವೇ ಎಂಬ ಭಾವ.।। 32 ।। 33 ।।

_ಅವತಾರಿಕೆ: ನಾನು ಸ್ವಜನರನ್ನು ಕೊಲ್ಲಿಸುವುದಿಲ್ಲ. ನಾನು ಹೇಳಿದ ಹಾಗೆ ನೀನೂ ಮತ್ತು ಭೀಮನೂ ಪಟಾಟೋಪ ವನ್ನು ತೋರಿಸಿಬಿಡಿ. ಇವರೆಲ್ಲ ಭೀತರಾಗಿ ಓಡಿಹೋಗಿ ಬಿಡುತ್ತಾರೆ. ಆಗ ಹಸ್ತಿನಾವತಿಗೆ ಹೋಗಿ ರಾಜ್ಯವನ್ನಾಕ್ರಮಿಸಿ ಕೊಂಡುಬಿಡಿ. ಮತ್ತೆ ಇವರನ್ನೆಲ್ಲಾ ಕರೆಸಿ ತಲಾಗಿ ಒಂದೊಂದು ದೇಶ ಕೊಟ್ಟು ಸುಖ ಪಡಿಸು ಎಂದು ನೀನು ಹೇಳುವುದಾದರೆ ಅದಕ್ಕೆ ಹೇಳುವೆನು ಕೇಳು:-

ಶ್ಲೋಕ।। ಆಚಾರ್ಯಾಃ ಪಿತರಃ ಪುತ್ರಾಸ್ತಥೈವ ಚ ಪಿತಾಮಹಾಃ।

ಮಾತುಲಾಃ ಶ್ವಶುರಾಃ ಪೌತ್ರಾಃ ಶ್ಯಾಲಾಃ ಸಂಬಂಧಿನಸ್ತಥಾ।।34।।

ಏತಾನ್ನ ಹಂತುಮಿಚ್ಛಾಮಿ ಘ್ನತೋಽಪಿ ಮಧುಸೂಧನ।

ಅಪಿ ತ್ರೈಲೋಕ್ಯರಾಜ್ಯಸ್ಯ ಹೇತೋಃ ಕಿಂ ನು ಮಹೀಕೃತೇ।।35।।

ಗೀತಾ ಪ್ರ. ಪ।। ಆಚಾರ್ಯಾಃ, ಪಿತರಃ, ಪುತ್ರಾಃ, ತಥಾ, ಏವ, ಚ, ಪಿತಾಮಹಾಃ, ಮಾತುಲಾಃ, ಶ್ವಶುರಾಃ, ಪೌತ್ರಾಃ, ಶ್ಯಾಲಾಃ , ಸಂಬಂಧಿನಃ, ತಥಾ।।

ಏತಾನ್, ನ, ಹಂತುಂ, ಇಚ್ಛಾಮಿ, ಘ್ನತಃ, ಅಪಿ, ಮಧುಸೂಧನ, ಅಪಿ, ತ್ರೈಲೋಕ್ಯರಾಜ್ಯಸ್ಯ , ಹೇತೋಃ, ಕಿಂ, ನು, ಮಹೀಕೃತೇ।।

(ನಿಂತಿರುವವರು ಯಾರೆಂದರೆ) ಆಚಾರ್ಯಾಃ=ಗುರುಗಳು, ಪಿತರಃ=ತಂದೆಗಳು, ಪುತ್ರಾಃ=ಮಕ್ಕಳು, ತಥೈವ= ಅದರಂತಯೇ, ಪಿತಾಮಹಾಃ=ಮುತ್ಯಂದರು, ಮಾತುಲಾಃ=ಸೋದರಮಾವಂದರು, ಶ್ವಶುರಾಃ= ಹೆಣ್ಣುಕೊಟ್ಟ ಮಾವಂದರು, ಪೌತ್ರಾಃ= ಮೊಮ್ಮಕ್ಕಳು, ಶ್ಯಾಲಾಃ= ಭಾವಮೈದಂದರು, ತಥಾ= ಹಾಗೂ, ಸಂಬಂಧಿನಃ= ಬಂಧುಗಳು।।

ಮಧುಸೂಧನ=ಎಲೈ ಕೃಷ್ಣನೇ! ತ್ರೈಲೋಕ್ಯರಾಜ್ಯಸ್ಯ=ಮೂರುಲೋಕಾಧಿಪತ್ಯದ, ಹೇತೋರಪಿ= ನಿಮಿತ್ತದ ದೆಸೆಯಿಂದ, ಅಸ್ಮಾನ್=ನಮ್ಮಗಳನ್ನು, ಘ್ನತೋಪಿ=ಸಂಹಾರಮಾಡುವವರಾದರೂ ಕೂಡ, ಏತಾನ್=ಈ ಬಾಂಧವರನ್ನು, ಹಂತುಂ=ಸಂಹಾರಮಾಡುವುದಕ್ಕೆ , ಇಚ್ಛಾಮಿ=ಇಚ್ಛಿಸುವುದಿಲ್ಲ ; ಮಹೀಕೃತೇ=ಕೇವಲ ಭೂಮಿಗಾಗಿ, (ನಹನ್ಯಾಮೀತಿ =ಸಂಹಾರಮಾಡುವುದಿಲ್ಲವೆಂದು, ಕಿಂ=ಏನು ಹೇಳತಕ್ಕದ್ದು.

ಗೀತಾವಿವೃತ್ತಿಃ ತ ಇಮೇ ಬಾಂಧವಾಃ ಪ್ರಾಣಾನ್ ಧನಾನಿ ಚ ತ್ಯಕ್ತ್ವಾ ಯುದ್ಧೇ ವ್ಯವಸ್ಥಿತಾಃ। ತೇ ಕ ಇತ್ಯತ ಆಹ। ಆಚಾರ್ಯಾ ಇತಿ। ನೈವೇಚ್ಛಾಮೀತ್ಯೇವಕಾರಾನ್ವಯಃ। ಯದಿ ಮಾಂ ಯುದ್ಧಾನ್ನಿವೃತ್ತಂ ಏತೇ ಹನ್ಯುಸ್ತರ್ಹಿ ಘ್ನತೋಽಪಿ ನೈವ ಹಂತುಮಿಚ್ಛಾಮೀತ್ಯರ್ಥಃ। ಹೇ ಮಧುನಾಮಕ ದೈತ್ಯಮರ್ದನ ।। 33 ।। 34 ।। ಕೈಮುತ್ಯನ್ಯಾಯೇನಾಃ ।। ಅಪೀತಿ। ತ್ರೈಲೋಕ್ಯರಾಜ್ಯಸ್ಯಾಪಿ ಹೇತೋರೇತಾನ್

ಹಂತುಂ ನೇಚ್ಛಾಮಿ। ಕಿಮುತ ಮಹೀಮಾತ್ರನಿಮಿತ್ತಮಿತಿ। ಕಿಂಚ ಧಾರ್ತರಾಷ್ಟ್ರಾನ್ ನಿಹತ್ಯ ನೋಽಸ್ಮಾಕಂ ಕಾ ಪ್ರೀತಿಃ ಕಿಮೈಹಿಕಸುಖಮ್। ನ ಕಿಮಪಿ। ನಾಪಿ ಪಾರತ್ರಿಕಂ ಪ್ರತ್ಯುತ ಪಾರತ್ರಿಕದುಃಖಹೇತುಪಾಪಮೇವಾಸ್ಮಾನಾಶ್ರಯೇತ್। ನ ಜಾಯತ ಇತಿ ಜನಃ, ಅರ್ದಯತಿ ಸಂಸಾರಮಿತಿ ಅರ್ದನಃ ಜನಶ್ಚಾಸಾವರ್ದನಶ್ಚೇತಿ ಜನಾರ್ದನಃ ತಸ್ಯ ಸಂಬುದ್ಧಿಃ। ಉಕ್ತಂ ಹ್ಯೇವಂ ಗೀತಾಭಾಷ್ಯೇ ದಶಮೇ।। 35 ।।

ಶ್ರೀಹೆಚ್.ಎಸ್. ಯದ್ಯಪಿ ಗುರುತಿಲ್ಲದ ಎಷ್ಟೋ ಜನರು ಓಡಿಹೋಗಬಹುದು. ಆದರೆ ಆಚಾರ್ಯರೂ (ಆಚಿನೋತಿಹ ಶಾಸ್ತ್ರಾರ್ಥಂ ಆಚಾರಾನ್ ಗ್ರಾಹಯತ್ಯುತ, ಸ್ವಯಮಾಚರತೇ ಯಸ್ತು ತಮಾಚಾರ್ಯಂ ಪ್ರಚಕ್ಷತೇ।। ಶಾಸ್ತ್ರಾರ್ಥವನ್ನು ತಾನು ತಿಳಿದು ಇತರರಿಗೆ ಸದಾಚಾರವನ್ನು ಬೋಧಿಸುವವನಾಗಿ ತಾನೂ ಸದಾಚಾರವನ್ನಾಚರಿಸುವವನು ಆಚಾರ್ಯನೆಂದು ಕರೆಸು ತ್ತಾನೆ.), ತಂದೆಗಳು, ಪುತ್ರರೂ, ಪಿತಾಮಹರೂ, ಇನ್ನೂ ಇತರ ಬಂಧುಗಕೋಟಿಗೆ ಸೇರಿದ ಇಲ್ಲಿನ ಅನೇಕ ಯೋಧರು ನಮ್ಮ ಗುರುತು ಬಲ್ಲವರಾದ್ದರಿಂದ ತಮ್ಮ ಪ್ರಾಣ ಮತ್ತು ಧನಗಳನ್ನೆಲ್ಲಾ ತೊರೆದು ಯುದ್ಧಮಾಡಬೇಕೆಂದು ನಿರ್ಣಯಿಸಿ ನಿಶ್ಚಲರಾಗಿ ಯುದ್ಧಭೂಮಿಯಲ್ಲಿ ಎದುರಿಗೆ ನಿಂತಿದ್ದಾರೆ. ಇದರ ಮೇಲೆ ಮಧುನಾಮಕ ದೈತ್ಯಸಂಹಾರಿಯೇ ಇನ್ನೂ ಕೆಲವರು ಶಲ್ಯಾದಿ ಮಾತುಳರು ದ್ರುಪದಾದಿ ಮಾವಂದಿರು, ಮೊಮ್ಮಕ್ಕಳು ಧೃಷ್ಟದ್ಯುಮ್ನಾದಿ ಭಾಮೈದುನರು ಇನ್ನೂ ಅನೇಕವಿಧವಾದ ಸಂಬಂಧಿ ಜನಗಳು ಇವರನ್ನು ಕೊಲ್ಲದೇ ಓಡಿಸಲಾಗುವುದಿಲ್ಲ. ನಾನಾದರೋ ಅವರೇ ನನ್ನನ್ನು ಇರಿದು ಕೊಂದರೂ ಕೂಡ ಅಂಥಾ ನನ್ನ ಪ್ರಿಯನೆಂಟರನ್ನು ನಾನು ಮುಯ್ಯಕ್ಕೆ ಮುಯ್ಯಿ ಮಾಡಲು ಎಂದರೆ ಕೊಲ್ಲಬೇಕೆಂದು ಇಚ್ಛೆಯನ್ನು ಕೂಡಾ ಮಾಡುವುದಿಲ್ಲ.

ವಿಶೇಷ:- 1) ನೀನು ಮಧುಸೂದನ ಎಂದರೆ ಮಾತೃಸೂದನನಲ್ಲ ಪಿತೃಸೂದನನಲ್ಲ ಎಂದು ಧ್ವನಿ.

2) ಗುರುಗಳಿಗೆ ದ್ರೋಹಮಾಡಬೇಕೆಂದು ಇಚ್ಛೆಮಾಡೋದೇ ಕೆಟ್ಟದ್ದು. ಇದಕ್ಕೆ ಪ್ರಮಾಣ ''ಗುರುತ್ವಂ ಕೃತ್ಯ ಹುಂಕೃತ್ಯ ವಿಪ್ರಂ ನಿರ್ಜಿತ್ಯ ವಾದತಃ। ಶ್ಮಶಾನೇ ಜಾಯತೇ ವೃಕ್ಷಃ ಕಂಕ ಗೃಧ್ರೋಪಸೇವಿತೇ।।'' ಹೀಗೆ ಶಬ್ದಮಾತ್ರದಿಂದಲೇ ಇಷ್ಟು ಪಾಪವೆಂದಮೇಲೆ ಕೊಂದರೆ ಎಷ್ಟು ಪಾಪ. ಶಾಸ್ತ್ರರೀತಿಯಿಂದ ಪ್ರಮಾಣಗಳನ್ನುದಾಹರಿಸಿ ವಾದ ಮಾಡದೆ ವ್ಯರ್ಥ ಕಲಹವನ್ನು ಮಾಡುತ್ತಾ ನೀನು ತಾನು ಎಂದು ಸಂಬೋಧಿಸಿ ಹುಂಕಾರದಿಂದ ಗರ್ಜನೆಮಾಡಿ ಗುರುವನ್ನು ಅವಮಾನ ಮಾಡಿದರೆ ಬ್ರಹ್ಮರಾಕ್ಷಸನಾಗಿ ಹುಟ್ಟಿ ಅನಂತರ ಶ್ಮಶಾನದಲ್ಲಿ ಕಂಕ ಮತ್ತು ಹದ್ದುಗಳಿಗಾಶ್ರಯವಾದ ವೃಕ್ಷವಾಗಿ ಹುಟ್ಟುತ್ತಾನೆ. ಆದ್ದರಿಂದ ಅವರು ನನ್ನ ಹೊಡೆದರೂ ಕೂಡ ಅವರನ್ನು ಹೊಡೆಯುವುದು ಹಾಗಿರಲಿ ನೋಯಿಸ ಬೇಕೆಂದು ಪಟಾಟೋಪ ಮಾಡಲು ಮನಸ್ಸಿನಲ್ಲಿ ಇಚ್ಛೆಯನ್ನು ಕೂಡ ಮಾಡುವುವನಲ್ಲವೆಂದು ಭಾವ.

ಅವತಾರಿಕೆ: ಮಹಾಸುಖಪ್ರಾಪ್ತಿಯಾಗುವಾಗ ಅಥವಾ ದೊಡ್ಡರಾಜ್ಯವನ್ನು ಪಡೆಯಬೇಕಾದಾಗ ನಾಲ್ಕು ಜನ ನೆಂಟರನ್ನು ಕೊಲ್ಲಲೇ ಬೇಕು ಎಂದರೆ ಹೇಳುತ್ತಾನೆ. ಹೇ ಜನಾರ್ದನಾ! (ನ ಜಾಯತ ಇತಿ ಜನಃ ಅರ್ದಯತಿ ಸಂಸಾರ ಮಿತ್ಯರ್ದನಃ ಜನಶ್ಚಾಸೌ ಅರ್ದನಶ್ಚ ಜನಾರ್ದನಃ= ಜನನಾದಿ ದೋಷರಹಿತನಾಗಿ ಭಕ್ತರ ಬಂಧಪಾಶ ಪರಿಹಾರಕ ನಾದ್ದರಿಂದ ಜನಾರ್ದನನಾಮಕನಾದ ಕೃಷ್ಣನೇ!) 14 ಲೋಕವೂ ಕೂಡ ಒಟ್ಟಾಗಿ ನಮಗೆ ದೊರಕುವುದಾದರೂ ಕೂಡ ನಾನು ನಮ್ಮ ದೊಡ್ಡಪ್ಪನ ಮಕ್ಕಳನ್ನು ಕೊಲ್ಲಲಾರೆ. ಹೀಗಿರುವಲ್ಲಿ ಒಂದು ಸಣ್ಣ ರಾಜ್ಯಕ್ಕೋಸ್ಕರ ಅಂಥಾ ಅನ್ಯಾಯದ ಕೆಲಸವನ್ನು ಮಾಡತಕ್ಕವನೇ? ನಾನು ಎಂಥಾ ಲಾಭದ ಆಶೆಯಿಂದಲಾಗಲೀ ಅನ್ಯಾಯ ಮಾಡುವವನಲ್ಲ. ಇನ್ನು ಮಹಾ ಸುಖ ಬರುತ್ತೆ ಎಂದರೆ ಹೇಳುವೆನು:-

ಶ್ಲೋಕ।। ನಿಹತ್ಯ ಧಾರ್ತರಾಷ್ಟ್ರಾನ್ನಃ ಕಾ ಪ್ರೀತಿಸ್ಸ್ಯಾಜ್ಜನಾರ್ದನ।

ಪಾಪಮೇವಾಶ್ರಯೇದಸ್ಮಾನ್ ಹತ್ವೈತಾನಾತತಾಯಿನಃ।। 36।।

ಗೀ. ಪ್ರ.ಪ.।। ನಿಹತ್ಯ, ಧಾರ್ತರಾಷ್ಟ್ರಾನ್, ನಃ, ಕಾ, ಪ್ರೀತಿಃ, ಸ್ಯಾತ್, ಜನಾರ್ದನ, ಪಾಪಂ, ಏವ, ಆಶ್ರಯೇತ್, ಅಸ್ಮಾನ್, ಹತ್ವಾ, ಏತಾನ್, ಆತತಾಯಿನಃ।।

ಜನಾರ್ದನ= ಎಲೈ ಕೃಷ್ಣನೇ! ಧಾರ್ತರಾಷ್ಟ್ರಾನ್= ಧೃತರಾಷ್ಟ್ರನ ಮಕ್ಕಳನ್ನು, ನಿಹತ್ಯ=ಸಂಹಾರಮಾಡಿ, ನಃ= ನಮ್ಮಗಳಿಗೆ, ಕಾ ಪ್ರೀತಿಃ= ಏನು ಸಂತೋಷವು , ಸ್ಯಾತ್=ಆದೀತು?(ಸಂತೋಷವಾಗುವುದಿಲ್ಲ), ಏತಾನ್=ಈ, ಆತತಾ ಯಿನಃ= ದ್ರೋಹಿಗಳಾದ

ಜನರನ್ನು (ವಿಷವನ್ನು ಕೊಡತಕ್ಕವರು, ಮನೆಗಳಿಗೆ ಬೆಂಕಿಹಚ್ಚುವವರು, ಹೊಲಗ ಳನ್ನು,ಪರಹೆಂಡರನ್ನು ಅಪಹಾರಮಾಡುವವರು ಇವರೇ ಮೊದಲಾದವರು ಆತತಾಯಿಗಳೆಂದು ಕರೆಸಿಕೊಳ್ಳುತ್ತಾರೆ), ಹತ್ವಾ=ಕೊಂದು, (ಸ್ಥಿತಾನ್=ಇದ್ದ) ಅಸ್ಮಾನ್=ನಮ್ಮನ್ನು, ಪಾಪಮೇವ=ಪಾಪವೇ, ಆಶ್ರಯೇತ್= ಆಶ್ರಯಿಸೀತು!

ಗೀತಾವಿವೃತ್ತಿಃ ಆತತಾಯಿನಃ ''ಅಗ್ನಿದೋ ಗರದಶ್ಚೈವ ಶಸ್ತ್ರಪಾಣಿರ್ಧನಾಪಹಃ। ಕ್ಷೇತ್ರದಾರಾಪಹಾರೀ ಚ ಷಡೇತೇ ಹ್ಯಾತತಾಯಿನಃ'' (ಭೀ.ಪ 107/110) ಇತ್ಯುಕ್ತ ಲಕ್ಷಣಾತ್। ತಸ್ಮಾತ್ ಸೀದಂತಿ ಮಮ ಗಾತ್ರಾಣೀತ್ಯಾದಿನೋಕ್ತ ಉಪಪತ್ತಿಬಲಾತ್ ಸಬಾಂಧವಾನ್ ಧಾರ್ತರಾಷ್ಟ್ರಾನ್ ಹಂತುಂ ವಯಂ ನಾರ್ಹಾಃ। ''ಆತತಾಯಿನಮಾಯಾಂತಂ ಹನ್ಯಾದೇವಾವಿಚಾರಯನ್। ನಾತತಾಯಿವಧೇ ದೋಷೋ ಹಂತುರ್ಭವತಿ ಕಶ್ಚನ।'( ಶಾಂ. ಪ. 15/15) ಇತ್ಯುಕ್ತೇಸ್ತೇಷಾಂ ಆತತಾಯಿತ್ವೇನ ಹಂತವ್ಯತಯಾ ಪ್ರಾಪ್ತತ್ವೇಽಪಿ ತದ್ಧನನಪ್ರಸಕ್ತ್ಯಾಬಂಧೂನಾಮಪಿ ಹನನಪ್ರಾಪ್ತೇರ್ನ ಹಂತುಂ ವಯಂ ಯೋಗ್ಯಾ ಇತಿ ಭಾವಃ॥ 36 ॥

ಶ್ರೀಹೆಚ್.ಎಸ್: ನಮ್ಮ ದೊಡ್ಡಪ್ಪನ ಮಕ್ಕಳನ್ನು ಕೊಂದು ನಮಗೆ ಇಹದಲ್ಲಾಗಲೀ ಪರದಲ್ಲಾಗಲೀ ಯಾವುದಾದರೂ ಸೌಖ್ಯ ವುಂಟೇ?

ವಿಶೇಷ:- ಜನಾರ್ದನಾ! ಎಂದು ಹೇತುಗರ್ಭ ಸಂಬೋಧನೆ. ಭಕ್ತರ ದುಃಖವನ್ನು ನಾಶಮಾಡುವ ನೀನು ಭಕ್ತರಿಗೆ ಮಹಾ ದುಃಖವನ್ನು ಮಾಡುವ ಯುದ-ವನ್ನು ಮಾಡೆನ್ನಬೇಡವೆಂದು ಭಾವ.

ಅರ್ಜುನಾ! ಶಾಸ್ತ್ರದ ಮಾತನ್ನು ಕೇಳು:- ''ಅಗ್ನಿ ದೋಗರದಶ್ಚೈವ ಶಸ್ತ್ರಪಾಣಿರ್ಧನಾಪಹಃ। ಕ್ಷೇತ್ರದಾರಾಪಹಾರೀಚ ಷಡೇತೇಹ್ಯಾತತಾಯಿನಃ॥ ಆತತಾಯಿನಮಾಯಾಂತಂ ಹನ್ಯಾ ದೇವಾಽವಿಚಾರಯನ್। ನಾತತಾಯಿವಧೇ ದೋಷೋ ಹಂತುರ್ಭವತಿ ಕಶ್ಚನ॥ ''ಈ ಪುರೋವರ್ತಿಯಾದ ಜನರು ಆತತಾಯಿಗಳಾದ್ದರಿಂದ ಇವರನ್ನು ಕೊಂದರೆ ಯಾವ ಪಾಪವೂ ಇಲ್ಲ ಎಂದು ಶಂಕಿಸಿದರೆ ಹೇಳುತ್ತಾನೆ.

ಈ ಧಾರ್ತರಾಷ್ಟ್ರರು ಆತತಾಯಿಗಳಾದರೂ ಇವರು ನಮ್ಮ ಬಂಧುಗಳಾದ್ದರಿಂದ ಇವರನ್ನು ಕೊಂದರೆ ಪಾಪವೇ ಬರುತ್ತೆ. ಆದ್ದರಿಂದ ನಾವು ಇವರನ್ನು ಕೊಲ್ಲಲೇ ಬಾರದು.

ವಿಶೇಷ:- 1) ಆತತಾಯಿಗಳು ಬಂಧುಗಳಲ್ಲದೇ ಇದ್ದರೆ ಅವರನ್ನು ಕೊಲ್ಲಬಹುದೆಂದು ಅರ್ಜುನನು ವಿಪರೀತವಾಗಿ ಹೇಳುತ್ತಿರುವನು.

2) ಇನ್ನೂ ಇತರ ಆತತಾಯಿಗಳ ಲಕ್ಷಣವೇನೆಂದರೆ:- ಶ್ಲೋಕಗಳು--- ''ಉದ್ಯತಾಂಸಿ ವಿಷಾಗ್ನಿಂಚ ಶಾಪೋದ್ಯತಕರಂ (ಶಾಪ ಕೊಡಲು ಕೈಯೆತ್ತಿ ನಿಲ್ಲುವವನು)ತಥಾ। ಆಥರ್ವಣ ಹಂತಾರಂ ಪಿಶುನಂ ಚೈವ ರಾಜಸು॥ ಭಾರ್ಯಾತಿ ಕ್ರಮಣಂ(ಸಾ—ಪತ್ನಿಯನ್ನು ಬಿಟ್ಟು ಪರಗಮತಾಸಕ್ತ) ಚೈವ ವಿದ್ಯಾ್ಯ ಸಪ್ತಾತತಾಯಿನಃ॥'' ವಿಷ್ಣೂಕ್ತಿ॥

''ಉದ್ಯಮ್ಯ ಶಸ್ತ್ರಮಾಯಾಂತಂ ಭ್ರೂಣಮಪ್ಯಾತತಾಯಿನಂ। ನಿಹತ್ಯ ಭ್ರೂಣಹಾ ನಸ್ಯಾದಹತ್ವಾ ಭ್ರೂಣಹಾ ಭವೇ್ಯ॥ ದೇವಲಃ) ಅನೂಚಾನೋ ಗುರ್ ಣಪೇತೋ ಯಜ್ಞಃ ಸ್ವಾಧ್ಯಾಯಯಂತ್ರಿತಃ। ಭ್ರೂಣ ಇತ್ಯುಚ್ಯತೇ ಶಿಷ್ಟೈಃ ಶೇಷ ಭೋಜೀ ಜಿತೇಂದ್ರಿಯಃ॥ ಗುರುಂ ವಾ ಬಾಲಂ ವೃದ್ಧೌವಾ ಬ್ರಾಹ್ಮಣಃ ವಾ ಬಹುಶ್ರುತಂ। ಆತತಾಯಿನ ಮಾಯಾಂತಂ ಹನ್ಯಾದೇವಾವಿಚಾರಯರ್ನ॥'' ಮನು ( ಶಸ್ತ್ರವನ್ನು ಹಿಡಿದು ಶತ್ರುವನ್ನು ರಹಸ್ಯದಲ್ಲಿ ಕೊಲ್ಲುವುದಕ್ಕೋಸ್ಕರ ಯತ್ನಿಸುವವನು, ಭ್ರೂಣನಾದರೂ ಕೂಡ ಥಅನೂಚಾನವಾದ ವೇದ ವೇದಾಂಗ ಪಾರಂಗತನಾದ ಸತ್ಕರ್ಮಾನುಷ್ಠಾನಶೀಲನಾದ ಮಹಾಪಂಡಿತನಾದ ತ್ರೈವರ್ಣಿಕನಿಗೆ ಭ್ರೂಣ ನೆಂದು ಹೆಸರುಳ್ಳ ಅವನು ಆತತಾಯಿಯೇ ಸರಿ. ಅವನನ್ನು ಕೊಂದರೆ ಬ್ರಹ್ಮಹತ್ಯ ವಿರುವುದಿಲ್ಲ. ಅಂಥಹವನನ್ನುಪೇಕ್ಷಿಸಿ ಸಂಹಾರಮಾಡದೇ ಇದ್ದರೆ *ಬ್ರಾಹ್ಮಣನಿಗೆ ಉಕ್ತವಾದ ಸಂಹಾರ ಮಾಡದೇ* ಇದ್ದರೆ ಬ್ರಹ್ಮಹತ್ಯ ಬರುತ್ತೆ. ಬಹುಶ್ರುತಂ =24 ಗಂಟೆಯೂ ಹರಿಕಥೆ ಕೇಳುತ್ತಾ ಒಳಗೇ ಮದ್ದು ಹಾಕಿ ಕೊಲ್ಲುವರು.)

3) ಆತತಾಯಿಗಳನ್ನು ಯದ್ಯಪಿ ಕೊಲ್ಲಬಹುದು. ಆದರೆ ಅವರು ಬಂಧುಗಳಾಗಿದ್ದ ಪಕ್ಷದಲ್ಲಿ ಅವರು ಎಂಥಾ ಆತತಾಯಿಗಳಾದರೂ ಕೊಲ್ಲಬಾರದು ಎಂಬುದು ಅರ್ಜುನನಿಂದ ಉಕ್ತವಾದ ಒಂದು ಕಾರಣ.

ಅವನು ಹೇಳುವ ಎರಡನೇ ಕಾರಣವೇನೆಂದರೆ:- ಆತತಾಯಿಗಳನ್ನು ಕೊಲ್ಲಬಾರದೆಂಬುವುದು ಸಾಮಾನ್ಯ ಧರ್ಮಶಾಸ್ತ್ರದ ಮಾತು.

ಮಾತೃ ದೇವೋ ಭವ- ಪಿತೃದೇವೋ ಭವ, ಆಚಾರ್ಯ ದೇವೋ ಭವ ಇತ್ಯಾದಿಗಳ ವಚನಾನುಸಾರ ಮಾತಾ ಪಿತೃಗಳನ್ನು ಪೂಜಿಸಿ ಅವರನ್ನು ಸ್ವಲ್ಪವೂ ನೋಯಿಸಬೇಡವೆಂದು ವೇದವಾಣಿ. ಆದ್ದರಿಂದ ವೇದದಂತೆ ನಡೆಯಬೇಕೇ ಹೊರತು ವೇದವಿರುದ್ಧವಾದರೆ ಇತರ ಶಾಸ್ತ್ರದಂತೆ ನಡೆಯಬಾರದು.

ಮೂರನೇ ಕಾರಣವೇನೆಂದರೆ:- ಆತತಾಯಿಗಳಲ್ಲಿ ಎರಡು ವಿಧ. ಉತ್ಕೃಷ್ಟ ಮತ್ತು ಸಾಮಾನ್ಯವೆಂದು. ಉತ್ಕೃಷ್ಟ ಆತತಾಯಿಗಳನ್ನು ಕೊಲ್ಲಬಾರದೆಂದು ಸ್ಮೃತಿಯಿದೆ. ಪ್ರಮಾಣ:- ''ಆತತಾಯಿನಮುತ್ಕೃಷ್ಟಂ ವೃತ್ತಸ್ವಾಧ್ಯಾಯ ಸಂಯುತಂ। ಯೋ ನ ಹನ್ಯಾದ್ವಧಪ್ರಾಪ್ತಂ ಸೋಽಶ್ವಮೇಧ ಫಲಂ ಲಭೇತ್॥'' ಕಾತ್ಯಾಯನಃ ಆದ್ದರಿಂದ ಪೌಂಡರೀಕಾದಿ ಯಜ್ಞಗಳನ್ನು ಮಾಡಿದ ತಂದೆತಾಯಿಸೇವೆ ಮಾಡಿದ ದುರ್ಯೋಧನ-ಭೀಷ್ಮದ್ರೋಣರು ಉತ್ಕೃಷ್ಟ ಆತತಾಯಿಗಳು ಆದ್ದರಿಂದ ವಧಾರ್ಹರಲ್ಲವೆಂದು ಅರ್ಜುನನ ಅಭಿಪ್ರಾಯ.

ಅವತಾರಿಕೆ:- ಆತತಾಯಿಗಳಾದರೂ ಬಂಧುಗಳನ್ನು ಕೊಲ್ಲಬಾರದೆಂಬುದಕ್ಕೆ ಮತ್ತೊಂದು ಕಾರಣವುಂಟು ಅದೇನೆಂದರೆ:- ಶ್ಲೋಕ॥

ತಸ್ಮಾನ್ನಾರ್ಹಾವಯಂ ಹಂತುಂ ಧಾರ್ತರಾಷ್ಟ್ರಾನ್ ಸ್ವಬಾಂಧವಾನ್॥
ಸ್ವಜನಂ ಹಿ ಕಥಂ ಹತ್ವಾ ಸುಖಿನಸ್ಸ್ಯಾಮ ಮಾಧವ॥37॥
ಯದ್ಯಪ್ಯೇತೇ ನ ಪಶ್ಯಂತಿ ಲೋಭೋಪಹತಚೇತಸಃ।
ಕುಲಕ್ಷಯಕೃತಂ ದೋಷಂ ಮಿತ್ರದ್ರೋಹೇ ಚ ಪಾತಕಂ॥38॥
ಕಥಂ ನ ಜ್ಞೇಯಮಸ್ಮಾಭಿಃ ಪಾಪಾದಸ್ಮಾನ್ನಿವರ್ತಿತುಂ।
ಕುಲಕ್ಷಯ ಕೃತಂ ದೋಷಂ ಪ್ರಪಶ್ಯದ್ಭಿರ್ಜನಾರ್ದನ॥39॥

ಗೀ ಪ್ರ. ಚಂ. ತಸ್ಮಾತ್, ನ ಅರ್ಹಾಃ, ವಯಂ, ಹಂತುಂ, ಧಾರ್ತರಾಷ್ಟ್ರಾನ್, ಸ್ವಬಾಂಧವಾನ್, ಸ್ವಜನಂ. ಹಿ, ಕಥಂ, ಹತ್ವಾ, ಸುಖಿನಃ, ಸ್ಯಾಮ, ಮಾಧವ॥ 37॥

ಯದ್ಯಪಿ, ಏತೇ, ನ, ಪಶ್ಯಂತಿ, ಲೋಭೋಪಹತಚೇತಸಃ, ಕುಲಕ್ಷಯಕೃತಂ, ದೋಷಂ, ಮಿತ್ರದ್ರೋಹೇ, ಚ ಪಾತಕಂ॥38॥

ಕಥಂ, ನ, ಜ್ಞೇಯಂ, ಅಸ್ಮಾಭಿಃ, ಪಾಪಾತ್, ಅಸ್ಮಾತ್, ನಿವರ್ತಿತುಂ, ಕುಲಕ್ಷಯಕೃತಂ, ದೋಷಂ, ಪ್ರಪಶ್ಯದ್ಭಿಃ, ಜನಾರ್ದನ॥ 39॥

ಮಾಧವ= ಎಲೈ ಕೃಷ್ಣನೇ! , ತಸ್ಮಾತ್= ಯಾವ ಕಾರಣದ ದೆಸೆಯಿಂದ ಬಂಧುಗಳನ್ನು ಕೊಲ್ಲುವುದರಿಂದ ಐಹಿಕಾಮುಷ್ಮಿಕಫಲಗಳು ಪ್ರಾಪ್ತವಾಗದೆ ಪಾಪವೇ ಬರುವುದೋ ಆ ಕಾರಣದ ದೆಸೆಯಿಂದ, ಸ್ವಬಾಂಧವಾನ್= ನಮಗೆ ಬಂಧುಗಳಾದ, ಧಾರ್ತರಾಷ್ಟ್ರಾನ್= ದುರ್ಯೋಧನಾದಿಗಳನ್ನು, ಹಂತುಂ= ಕೊಲ್ಲುವುದಕ್ಕೆ ,ವಯಂ= ನಾವು, ನ ಅರ್ಹಾಃ= ಯೋಗ್ಯರಲ್ಲ, ಸ್ವಜನಂ= ಬಂಧುಗಳನ್ನು, ಹತ್ವಾ= ಕೊಂದು, ಕಥಂ= ಹೇಗೆ, ಸುಖಿನಃ= ಸುಖವುಳ್ಳವರು, ಸ್ಯಾಮ= ಆದೇವು!, ಹಿ= ನಿಶ್ಚಯವು.॥

ಏತೇ= ಈ ದುರ್ಯೋಧನಾದಿಗಳು, ಲೋಭೋಪಹತಚೇತಸಃ= ರಾಜ್ಯಲೋಭದಿಂದನಷ್ಟವಾದ ಧರ್ಮಜ್ಞಾನ ವುಳ್ಳವರಾಗಿ, ಕುಲಕ್ಷಯಕೃತಂ= ವಂಶದ ನಾಶದಿಂದ ಉತ್ಪನ್ನವಾದ, ದೋಷಂ= ದೋಷವನ್ನು, ಮಿತ್ರದ್ರೋಹೇ= ಸ್ನೇಹಿತರ ದ್ರೋಹದಿಂದ, ಪಾತಕಂ ಚ= ಪಾಪವನ್ನೂ ಕೂಡ, ನ ಪಶ್ಯಂತಿ ಯದ್ಯಪಿ= ನೋಡದೇ ಇದ್ದರೂ, ಜನಾರ್ದನ= ಎಲೈ ಕೃಷ್ಣನೇ, ಕುಲಕ್ಷಯಕೃತಂ= ಕುಲನಾಶದಿಂದ ಉತ್ಪನ್ನವಾಗುವ, ದೋಷಂ= ದೋಷವನ್ನು ಪ್ರಪಶ್ಯದ್ಭಿಃ= ತಿಳಿಯು ವಂಥ, ಅಸ್ಮಾಭಿಃ= ನಮ್ಮಗಳಿಂದ, ಅಸ್ಮಾತ್= ಈ ಕುಲಕ್ಷಯದಿಂದ ಬರುವ, ಪಾಪಾತ್= ಪಾಪಾದಿಂದ, ನಿವರ್ತಿತುಂ= ನಿವೃತ್ತರಾಗುವದಕ್ಕೋಸ್ಕರ, ಕಥಂ= ವಿಚಾರಮಾಡಲ್ಪಡದೆ, ನ ಜ್ಞೇಯಂ= ಇರುವುದು ಹೇಗೆ ಯುಕ್ತವಾಗುವುದು. ॥

ಗೀತಾವಿವೃತ್ತಿಃ ಬಂಧುತ್ವೇಽಪಿ ಆತತಾಯಿಸಂಬಂಧಿತ್ವಾತ್ ತೇಽಪಿ ಬಂಧುಜನಾ ಹಂತವ್ಯಾ ಏವೇತ್ಯತ ಆಹ। ಸ್ವಜನಂ ಹೀತಿ। ಸ್ಯಾಮ ಭವೇಮ। ತದ್ದರ್ಶನಸ್ಪರ್ಶನಸಂಭಾಷಣಾದೇರಭಾವ ಪ್ರಾಪ್ತೇರಿತಿ ಭಾವಃ॥ 37 ॥

ಕುತ ಏವಂ ಬುದ್ಧ್ಯಾ ತೇ ನ ನಿವೃತ್ತಾ ಇತ್ಯತ ಆಹ। ಯದ್ಯಪೀತಿ। ಏತೇ ದುರ್ಯೋಧನಾದಯಃ ರಾಜ್ಯಲೋಭೇನೋಪಹತಚೇತಸಃ ನಷ್ಟಧರ್ಮಜ್ಞಾನಾಃ ದೋಷಂ ಪಾತಕಂ ನ ಚ ಪಶ್ಯಂತಿ। ಯದ್ಯಪಿ।। 38 ।। ತಥಾಽಪಿ ಹೇ ಜನಾರ್ದನ ಜನನರಹಿತ ಸಂಸಾರಾರ್ದನ, ಕುಲಕ್ಷಯಕೃತಂ ದೋಷಂ ಪ್ರಪಶ್ಯದ್ಭಿರಸ್ಮಾಭಿಃ ಅಸ್ಮಾದ್ದೋಷಾನ್ನಿವರ್ತಿತುಂ ಕಥಂ ನ ಜ್ಞೇಯಂ।। 39 ।।

ಶ್ರೀಹೆಚ್.ಎಸ್.ಮಾಧವಾ! (ಜ್ಞಾನಕ್ಕೆ ಒಡೆಯನೇ ಸರ್ವಜ್ಞಾ! ಈ ಧಾರ್ತರಾಷ್ಟ್ರರು ಎಂಥಾ ಆತತಾಯಿಗಳಾಗಲೀ ಅವರನ್ನು ಕೊಂದಮೇಲೆ ನಾವು ಹೇಗೆ ಸುಖದಿಂದ ಬದುಕುವುದಕ್ಕಾದೀತು? ಅವರ ದರ್ಶನ, ಸ್ಪರ್ಶನ, ಸಂಭಾಷಣ ಇತ್ಯಾದಿಗಳೊಂದೂ ಇಲ್ಲದೇ ನಮಗೆ ಹೇಗೆ ಸುಖವಾದೀತು? ಪ್ರಶ್ನೆ:- ಅವರಿಗೆ ಪ್ರೀತಿಯಿದ್ದರಷ್ಟೆ ಅವರ ದರ್ಶನಾದಿ ಗಳಿಂದ ನಿನಗೆ ಸುಖವಾಗುತ್ತೆ? ಉತ್ತರ:- ಅವರು ಲೋಭದಿಂದ ಬುದ್ಧಿಗೆಟ್ಟಿದ್ದಾರೆ. ಶಾಸ್ತ್ರಜ್ಞಾನವಿಲ್ಲದ್ದರಿಂದ ನಮ್ಮ ನ್ನು ಕೊಲ್ಲುವುದಕ್ಕೆ ಬರುವುದು ಪಾಪವೆಂದು ಅವರಿಗೆ ತಿಳಿಯದು. ಅಂದಮೇಲೆ ಬಂಧುಗಳು ದಡ್ಡರಾದರೆ ಏನು ಅವರ ಜೊತೆಯಲ್ಲಿ ಇದ್ದರೆ ಅವರೆಂಥಾ ಮೂಢರಾದರೂ ನಮಗೆ ಸುಖವಾಗುತ್ತೆ.

ವಿಶೇಷ:- ಲೋಭವೆಂದರೆ:- ಪರವಿತ್ತಾದಿಕಂ ದೃಷ್ಟ್ವಾ ನೇತುಂ ಯೋ ಹೃದಿಜಾಯತೇ। ಅಭಿಲಾಷೋ ದ್ವಿಜಶ್ರೇಷ್ಠಃ ಸಲೋಭಃ ಪರಿಕೀರ್ತಿತಃ।। ಪದ್ಮ. ಪು. ಕಂಡವರ ಸಂಪತ್ತನ್ನು ನೋಡಿ ನನಗಿಲ್ಲವಲ್ಲಾ ಎಂದು ಹೊಡೆದುಕೊಳ್ಳುವುದಕ್ಕೆ ಲೋಭವೆಂದು ಹೆಸರು. ಈ ಲೋಭವು ಸಕಲ ಪಾಪಗಳಿಗೂ ಮೂಲ ಕಾರಣವು.

ಅವತಾರಿಕೆ:- ತಿಳಿಯದೆ ಅಪರಾಧಮಾಡಿದವರಾದ ದುರ್ಯೋಧನಾದಿಗಳಿಗೆ ಪ್ರಾಯಶ್ಚಿತ್ತವುಂಟು ತಿಳಿದಂಥಾ ನಾವು ಅಪರಾಧಮಾಡಿದರೆ ನರಕವೇ ಆಗಿಬಿಡುತ್ತೆ. ಅದರಲ್ಲೂ ಎರಡು ವಿಧವಾದ ಪಾಪಗಳಿಂದ ನರಕ. ಅದಾವುದೆಂದರೆ:- ಹೇ ಜನನರಹಿತ ಸಂಸಾರಾರ್ದನಾ! (1) ಮಿತ್ರದ್ರೋಹ ಜನಿತವಾದ ''ಮಿತ್ರದ್ರೋಹೇ ನಿಷ್ಕೃತಿರ್ನಾಸ್ತಿ ಲೋಕೇ ಮಹತ್ಪಾಪಂ ಬ್ರಹ್ಮಹತ್ಯಾ ಸಮಂ ಭವೇತ್।। ''ಎಂದು ಪ್ರಮಾಣವಿದೆ. ತಿಳಿದೂ ಆ ಪಾಪವನ್ನು ಮಾಡಿದರೆ ಮಹಾಪಾತಕದ ಫಲವೇ ಆಗುವುದು. (2) ಕುಲಕ್ಷಯ ನಿಮಿತ್ತದಿಂದ ಉಂಟಾಗುವ ಘೋರಪಾಪವು ನರಕಕ್ಕೆ ಎರಡನೆಯಕಾರಣವು. ಈ ಎರಡು ವಿಧವಾದ ಪಾಪಗಳೂ ಎಷ್ಟು ಭಯಂಕರವೆಂದು ನಾವು ತಿಳಿದಿದ್ದೇವೆ. ಮತ್ತು ಈ ಎರಡು ವಿಧವಾದ ಪಾಪಗಳಿಂದ ನಮ್ಮನ್ನು ಬಿಡಿಸಿಕೊಂಡು ಮೂಢರಾದ ದುರ್ಯೋಧನಾದಿಗಳಿಗೂ ಇಂಥಾ ಪಾಪ ದ್ವಯಗಳು ಬರದಂತೆ ಕಾಪಾಡಲು ಸಮರ್ಥರಾಗಿದ್ದೇವೆ. (ನಾವು ಯುದ್ಧಕ್ಕೆ ಕರೆದರೆ ಅವರೂ ಯುದ್ಧಮಾಡಿ ಮಿತ್ರ ದ್ರೋಹ, ಕುಲಕ್ಷಯದ ಪಾಪಕ್ಕೆ ನಮ್ಮಿಂದಲೇ ಪ್ರಾಪ್ತರಾಗುತ್ತಾರೆ.) ಹೀಗಿರುವಲ್ಲಿ ನಾವೇ ದುಡುಕಿ ಆ 2 ಪಾಪಗಳನ್ನು ಮೇಲೆಬಿದ್ದು ಮಾಡಿದರೆ ನಮಗೆ ಉದ್ಧಾರವುಂಟೇ? ಅದರಲ್ಲೂ ಕುಲಕ್ಷಯ ಕೃತ ಮಹಾದೋಷವು ನನ್ನ ಕಣ್ಣೆದುರಿಗೆ ನಿಂತಂತೆ ಸ್ಫುಟವಾಗಿ ಕಾಣುತ್ತಿದೆ. ಅದೇನೆಂದರೆ:- ಯುದ್ಧದಿಂದ ಯೋಧರು ಮಡಿದರೆ ಅವರ ಮನೆಯ ಯಜವಮಾನರ ನಾಶವಾದಂತಾಯ್ತು. ಆಗ ಯಜಮಾನರಿಲ್ಲದೇ ಇರುವುದರಿಂದ ಆ ಅನೇಕ ಮನೆಗಳಲ್ಲಿ ಶಿಕ್ಷಕರಿಲ್ಲದೇ ಪರಂಪರೆಯಾಗಿ ಬಂದ ಕುಲಧರ್ಮ(ಕ್ಷತ್ರಿಯಾದಿ ಜಾತಿಧರ್ಮಗಳೆಲ್ಲಾ ನಷ್ಟವಾಗುವುದು.) ಪರಂಪರೆಯಾಗಿ ಬಂದ ಆ ಜಾತಿಧರ್ಮಗಳು ಹೋದರೆ ಸಕಲ ಸದಾಚಾರಗಳೂ ಶ್ರುತಿಸ್ಮೃತ್ಯುಕ್ತಧರ್ಮಗಳೂ ಅವರ ಮನೆಗಳಿಂದ ತೊಲಗುವವು.

ವಿಶೇಷ:- ಪ್ರಪಶ್ಯದ್ಭಿಃ ಎಂದು ಅರ್ಜುನನು ಹೇಳಿದ್ದಕ್ಕೆ ಸ್ವಾರಸ್ಯವಿದೆ. ಅದೇನೆಂದರೆ ಆಹೂತೋ ನ ನಿವರ್ತೇತ ದ್ಯೂತಾದಪಿ ರಣಾದಪಿ ಎಂದು ಶಾಸ್ತ್ರವಿದೆ. ಈಗ ದುರ್ಯೋಧನನು ಯುದ್ಧಕ್ಕೆ ಬಾರೆಂದು ಕರೆದುಬಿಟ್ಟಿ- ದ್ದಾನೆ. ಆದ್ದರಿಂದ ನೀನೇಕೆ ಯುದ್ಧ ಬಿಡಬೇಕು? ನಿನಗೆ ಅಧರ್ಮವೆಲ್ಲಿ ಬಂತೆಂದು ಶಂಕಿಸಿದರೆ ಙಪ್ರಪಶ್ಯದ್ಭಿಃಙ ಎಂಬ ವಾಕ್ಯದಿಂದ ಇದಕ್ಕೆ ಉತ್ತರ ಹೇಳುತ್ತಾನೆ. ಕರೆದರೆ ಯುದ್ಧಕ್ಕೆ ಹೋಗಲೇ ಬೇಕೆಂಬ ನಿಯಮವು ಎಲ್ಲರ ವಿಷಯದಲ್ಲಲ್ಲ. ದುರ್ಯೋಧನಾದಿಗಳು ಜ್ಞಾನಿಗಳಾಗಿ ಮಿತ್ರದ್ರೋಹಜನಿತ ದೋಷ ಇವುಗಳನ್ನೆಲ್ಲಾ ತಿಳಿದು ಯುದ್ಧಕ್ಕೆ ಕರೆದಿದ್ದರೆ ನಾವು ಆಗ ಯುದ್ಧವನ್ನು ಮಾಡಲೇ ಬೇಕಾಗಿತ್ತು. ಆದರೆ ಅವರೀಗ ಬುದ್ಧಿಗೆಟ್ಟು ಮೂಢರಾದ ಬಾಲಕರಂತೆ ಇದ್ದಾರೆ ಪಾಪ! ಉಭಯವಿಧದ ಪಾಪಗಳ ಫಲಗಳನ್ನು ತಿಳಿಯರು. ಅಂದಮೇಲೆ ಆರುವರ್ಷದ ಬಾಲಕನು ಕತ್ತಿಯನ್ನು ಹಿಡಿದು ಅಜ್ಜನನ್ನು ಯುದ್ಧಕ್ಕೆ ಕರೆದರೆ ಆ ಕ್ಷತ್ರಿಯ ಅಜ್ಜನು ಯುದ್ಧಕ್ಕೆ ಹೋದಾನೆಯೇ? ಮದ್ಯಪಾನಿ ಮಗನು ತಂದೆಯನ್ನು ಯುದ್ಧಕ್ಕೆ ಕರೆದು ಷಂಢನೆಂದು ಬಯ್ಯುತ್ತಾನೆ. ಅವನ ತಂದೆಯು ಯುದ್ಧ ಮಾಡಿಯಾನೇ? ಏಕೆಂದರೆ ಯುದ್ಧಮಾಡಿದರೆ ಮೊಮ್ಮಗನಿಗೆ

ಪಿತಾಮಹನ ಹತ್ಯ. ಅಜ್ಜನಿಗೆ ಪೌತ್ರಹತ್ಯ. ಮದ್ಯಪಾನಿ ಮಗನಿಗೆ ಪಿತೃಹತ್ಯ. ಪಿತೃವಿಗೆ ಪುತ್ರಹತ್ಯವುಂಟಾಗುತ್ತೆ. ಜೊತೆಗೆ ಕುಲನಾಶವಾಗುತ್ತೆ. ಮಿತ್ರದ್ರೋಹವೂ ಬಂತು. ಇದನ್ನು ತಿಳಿದಿದ್ದರಿಂದ 6 ವರ್ಷದ ಬಾಲಕನೂ, ಮದ್ಯಪಾನಿ ಯೂ ಯುದ್ಧಕ್ಕೆ ಕರೆದಾಗ್ಯೂ ಅಜ್ಜನೂ ತಂದೆಯೂ ಯುದ್ಧಕ್ಕೆ ಹೋಗಲಿಲ್ಲ. ಹೀಗೆ ಪ್ರಕೃತದಲ್ಲಿದುರ್ಯೋಧನಾದಿಗಳು ನಮ್ಮನ್ನು ಯುದ್ಧಕ್ಕೆ ಕರೆದರೂ ಯುದ್ಧದಿಂದ ಅವರಿಗೆ ಮತ್ತೂ ನಮಗೆ ಉಂಟಾಗುವ ಪಾಪವನ್ನು ನಾವು ತಿಳಿದಿರುವುದರಿಂದ ನಾವು ಯುದ್ಧಕ್ಕೆ ಹೋಗಬಾರದು. ಹಾಗೆ ಯುದ್ಧವನ್ನು ತಿರಸ್ಕರಿಸಿದ್ದರಿಂದ ನಮಗೆ ದೋಷವಿಲ್ಲ. ಏವಂಚ ಯುದ್ಧಮಾಡಿದರೇ ಸಕಲ ಕುಲಾಚಾರಗಳೂ ನಾಶವಾಗೋದು ನಿಶ್ಚಯ.

ಶ್ಲೋಕ॥ ಕುಲಕ್ಷಯೇ ಪ್ರಣಶ್ಯಂತಿ ಕುಲಧರ್ಮಾಃ ಸನಾತನಾಃ।

ಧರ್ಮೇ ನಷ್ಟೇ ಕುಲಂ ಕೃತ್ಸ್ನಮಧರ್ಮೋಽಭಿಭವತ್ಯುತ॥40॥

ಗೀ.ಪ್ರ. ಕುಲಕ್ಷಯೇ, ಪ್ರಣಶ್ಯಂತಿ, ಕುಲಧರ್ಮಾಃ, ಸನಾತನಾಃ, ಧರ್ಮೇ, ನಷ್ಟೇ, ಕುಲಂ, ಕೃತ್ಸ್ನಂ, ಅಧರ್ಮಃ, ಅಭಿಭವತಿ, ಉತ॥

ಕುಲಕ್ಷಯೇ= ವಂಶವು ನಾಶವಾಗುತ್ತಿರಲಾಗಿ, ಸನಾತನಾಃ= ಪರಂಪರೆಯಾಗಿ ಬಂದ, ಕುಲಧರ್ಮಾಃ= ಕ್ಷತ್ರಿಯಾದಿ ಕುಲಗಳಿಗೆ ಉಚಿತವಾದ ಧರ್ಮಗಳು, ಪ್ರಣಶ್ಯಂತಿ= ಸಂಪೂರ್ಣವಾಗಿ ನಾಶ ಹೊಂದುತ್ತವೆ, ಧರ್ಮೇ= ಕುಲಧರ್ಮವು ನಷ್ಟೇ(ಸತಿ)= ನಾಶವಾಗುತ್ತಿರಲಾಗಿ, ಅಧರ್ಮಃ= ಅಧರ್ಮವು, ಕೃತ್ಸ್ನಂ ಉತ= ಮಿಕ್ಕ ಯಾವತ್ತೂ, ಕುಲಂ= ಕುಲವನ್ನು ಅಭಿಭವತಿ= ವ್ಯಾಪಿಸುತ್ತದೆ.

ಶ್ಲೋಕ॥ ಅಧರ್ಮಾಭಿಭವಾತ್ಕೃಷ್ಣ ಪ್ರದುಷ್ಯಂತಿ ಕುಲಸ್ತ್ರಿಯಃ।

ಸ್ತ್ರೀಷು ದುಷ್ಟಾಸು ವಾರ್ಷ್ಣೇಯ ಜಾಯತೇ ವರ್ಣ ಸಂಕರಃ॥41॥

ಗೀ. ಪ್ರ.ಪ ಅಧರ್ಮಾಭಿಭವಾತ್, ಕೃಷ್ಣ, ಪ್ರದುಷ್ಯಂತಿ, ಕುಲಸ್ತ್ರಿಯಃ, ಸ್ತ್ರೀಷು, ದುಷ್ಟಾಸು, ವಾರ್ಷ್ಣೇಯ, ಜಾಯತೇ, ವರ್ಣಸಂಕರಃ॥

ಕೃಷ್ಣ= ಎಲೈ ಕೃಷ್ಣನೇ! ಅಧರ್ಮಾಭಿಭವಾತ್= ಅಧರ್ಮವು ವ್ಯಾಪಿಸುವುದರಿಂದ, ಕುಲಸ್ತ್ರಿಯಃ= ಕುಲಸ್ತ್ರೀಯರು, ಪ್ರದುಷ್ಯಂತಿ= ದೋಷಯುಕ್ತರಾಗುತ್ತಾರೆ. ವಾರ್ಷ್ಣೇಯ= ವೃಷ್ಣಿಕುಲದಲ್ಲಿ ಅವತರಿಸಿದ ಕೃಷ್ಣನೇ, ಸ್ತ್ರೀಷು= ಕುಲಸ್ತ್ರೀಯ ರು, ದುಷ್ಟಾಸು= ದೋಷಯುಕ್ತರಾಗುತ್ತಿರಲು, ವರ್ಣಸಂಕರಃ= ವರ್ಣಸಾಂಕರ್ಯವು, ಜಾಯತೇ= ಹುಟ್ಟುತ್ತದೆ.

ಶ್ರೀಹೆಚ್. ಎಸ್. ಅವತಾರಿಕೆ:- 18 ಅಕ್ಷೌಹಿಣೀ ಸೈನ್ಯ (ಜನರು) ಇದ್ದಾರೆ. ಅವರೆಲ್ಲರಿಗೂ ಸಂಸಾರವಿದೆಯೆಂದು ಹೇಳಲಾಗುವುದಿಲ್ಲ. ಹೋಗಲಿ 10,12 ಅಕ್ಷೌಹಿಣಿ ಜನರು ಕುಲಶಿಕ್ಷಕರೆಂದಿಟ್ಟುಕೊಳ್ಳೋಣ, ಅವರು ಸತ್ತರೆ ಅವರ ಗೃಹಗಳಲ್ಲಿಮಾತ್ರ ಧರ್ಮ ಹೋಗುತ್ತೆ. ಹಾಗಾದಾಗ ಸುತ್ತಮುತ್ತಲಿನ ಮನೆಗಳವರು ಅವರಿಗೆ ಕುಲಧರ್ಮ ಹೇಳಿಕೊಡುತ್ತಾರೆ. ಇದರಿಂದ ಕುಲಧರ್ಮನಷ್ಟಹೇಗಾಗುತ್ತೆಎಂದರೆ ಹೇಳುತ್ತಾರೆ।- ಈ ಮುಖಂಡರ ಮನೆಯಲ್ಲಿ ಕುಲಧರ್ಮಗಳು ನಷ್ಟವಾದರೆ ಶ್ರೇಷ್ಠರಾದಿವರ ಮೇಲ್ಪಂಕ್ತಿಯಿಂದ ಆ ನಿಖಿಲ ಕುಲಸ್ಥರ ಗೃಹಸ್ಥರ ಮನೆಗಳಲ್ಲೂ ಧರ್ಮವು ನಾಶವಾಗಿ ಅಧರ್ಮವೇ ವ್ಯಾಪಿಸಿಬಿಡುವುದು ( ಉದಾ:- ಕೊಳೆತ ಒಂದು ಬಾದಾಮಿ ಹಣ್ಣಿನಿಂದ 100 ಒಳ್ಳೆಯ ಹಣ್ಣುಗಳು ಕೆಡುವುವು. 100 ಒಳ್ಳೆ ಹಣ್ಣುಗಳು ಒಂದು ಕೊಳೆತ ಹಣ್ಣನ್ನು ಸರಿಮಾಡಲಾರವು.) ಈ ರೋಗ ಇಲ್ಲಿಗೇ ನಿಲ್ಲುವುದಿಲ್ಲ. ನಿಖಿಲ ಕುಲವೂ ಅಧರ್ಮದಿಂದ ಗ್ರಸ್ತವಾದರೆ ಆ ಕುಲಸ್ತ್ರೀಯರು ಪತಿಹೀನರಾಗಿ ಉಪಪತಿಗಳಸಂಗದಿಂದ ಕೆಟ್ಟು ಹೋಗುವರು.

ವಿಶೇಷ:- ಕುಲಸ್ತ್ರೀಯರು ಕೆಡುವುದಕ್ಕೆ 2 ನಿಮಿತ್ತಗಳು:- 1) ಆಳತಕ್ಕ ಯಜಮಾನ ಸತ್ತುಶಿಕ್ಷಕರಿಲ್ಲದೇ ಸುಖಾಭಿಲಾಷೆ ಯಿಂದ ಅನ್ಯಸಂಗ ಮಾಡಿ ಕೆಡುತ್ತಾರೆ. 2) ಕತ್ತಿಯಿದೆ ಎಂದು ನೆಂಟರನ್ನೆಲ್ಲಾ ಕೊಲ್ಲುವುದು ಯಾವ ನ್ಯಾಯವು. ಇಂಥಾ ಅನ್ಯಾಯ ಮಾಡಲು ನಮ್ಮ ಪತಿಗಳು ಹೋದ ಮೇಲೆ ದೇಹವಿದೆ ಎಂಬ ನಿಮಿತ್ತದಿಂದ ಮನಸ್ಸು ಬಂದಂತೆ ಸುಖ ಪಡುವುದಕ್ಕೆ ನಾವೂ ಏಕೆ ಹೋಗಬಾರದು ಎಂದು ಯೋಚಿಸಿ ಕೆಡುತ್ತಾರೆ. ಇದರ ಮೇಲೆ ಕುಲದವರೆಲ್ಲಾ ವ್ಯಭಿಚಾರಿ ಗಳಾದಾಗ ನಿಂದಾಮಾಡತಕ್ಕವರೇ ಇಲ್ಲವಾದ್ದರಿಂದ ತತ್ಪ್ರಯುಕ್ತ ಭೀತಿಯು ಹೆಂಗಸಿಗಿರುವುದಿಲ್ಲ. ಉಪದೇಶವಿಲ್ಲದ್ದ ರಿಂದ ಪಾಪಭೀತಿಯೂ ಇಲ್ಲ. ಇಷ್ಟೆಲ್ಲಾ ಆದರೆ ಕೆಡದೇ ಇರುತ್ತಾರೆಯೇ?

ಅವತಾರಿಕೆ:- ಸ್ತ್ರೀಯರು ಕೆಟ್ಟರೆ ಕೆಡಲಿ. ಕೆಟ್ಟವರು ನರಕದಲ್ಲಿ ಬೀಳುತ್ತಾರೆ. ಮುಂದಿನ ಸಂತತಿಯು ನಾವು ಯುದ್ಧಮಾಡಿ ಜಯಿಸಿ

ಸ್ಥಾಪಿಸುವ ಧರ್ಮವನ್ನೇ ಅವಲಂಬಿಸುತ್ತೆ. ಇದರಿಂದೇನು ಹಾನಿ ಎಂದರೆ:- ಹೇ ವೃಷ್ಣಿ ಕುಲೋದ್ಭವನಾದ ಕೃಷ್ಣನೇ! (ನೀನು ವ್ಯಭಿಚಾರಹೀನವಾದ ಕುಲದಲ್ಲಿ ನೈಜ ತಂದೆತಾಯಿಗಳಿಗೆ ಹುಟ್ಟಿದ್ದರಿಂದ ನನ್ನ ಅಭಿಪ್ರಾಯವನ್ನು ಸರಿಯಾದ ರೀತಿಯಲ್ಲಿ ತಿಳಿಯಲು ಸಮರ್ಥನೆಂದು ಭಾವ) ಸ್ತ್ರೀಯರು ವ್ಯಭಿಚಾರ ಶೀಲರಾಗಿ ಕೆಟ್ಟುಹೋದರೆ ಅವರು ಅನ್ಯಜಾತಿಯ ಪುರುಷರಿಂದ ಮಕ್ಕಳನ್ನು ಪಡೆಯುತ್ತಾರೆ. ಅದರಿಂದ ಅನುಲೋಮ ಪ್ರತಿಲೋಮಗಳಿಂದಲೂ ನಾನಾ ವಿಧವಾದ ಜಾತಿಯ ಮಕ್ಕಳು ಒಂದೇ ಕುಲದಲ್ಲಿ ಹುಟ್ಟಿ ವರ್ಣ ಸಾಂಕರ್ಯವು ಆಗುತ್ತೆ. ಹಾಗೆ ವರ್ಣ ಸಾಂಕರ್ಯವುಂಟಾಗಿ ಒಂದು ಕುಲದಲ್ಲಿ ಅನ್ಯ ಜಾತಿಯ ಮಕ್ಕಳು ಹುಟ್ಟಿದರೆ ಆ ಹುಟ್ಟಿದ ಮಕ್ಕಳು ನಮ್ಮ ಕುಲದ ಮಾತಾಪಿತ್ರಾದಿ 21 ತಲೆಮರೆಯವರನ್ನು ನರಕಕ್ಕೆ ಹಾಕುತ್ತಾರೆ. ಅದರ ಜೊತೆಗೆ ಕುಲಧರ್ಮ ನಾಶಕ್ಕೆ ಕಾರಣರಾದ ನಮಗೂ ನರಕವನ್ನು ತಂದುಕೊಡುತ್ತಾರೆ.

ವಿಶೇಷ:- ಒಂದು ಕುಲದಲ್ಲಿ ಅನೇಕ ಜಾತಿ ಹೇಗೆ ಹುಟ್ಟುತ್ತೆಂದರೆ,

ಅನುಲೋಮ:- ಬ್ರಾಹ್ಮಣ ತಂದೆಗೆ --ಕ್ಷತ್ರಿಯ, ವೈಶ್ಯ , ಶೂದ್ರ ಸ್ತ್ರೀಯಲ್ಲಿ ಹುಟ್ಟಿದವ -- ಅಪಸದ.

ಕ್ಷತ್ರಿಯ---------------- ವೈಶ್ಯ, ಶೂದ್ರ---------------- --ಅಪಸದ

ವೈಶ್ಯ ತಂದೆಗೆ-------ಶೂದ್ರಿಯಲ್ಲಿ----------------------------ಅಪಸದ.

ಬ್ರಾಹ್ಮಣನಿಗೆ---------------ವೈಶ್ಯಳಲ್ಲಿ-------------------------ಅಂಬಷ್ಟ.

ಬ್ರಾಹ್ಮಣನಿಗೆ---------------ಶೂದ್ರಿ ----------------------------ನಿಷಾದ

ಕ್ಷತ್ರಿಯನಿಗೆ-----------------ಶೂದ್ರಿ----------------------------ಉಗ್ರ.

ಪ್ರತಿಲೋಮ ಜಾತಿ ಃ-

ಕ್ಷತ್ರಿಯತಂದೆಗೆ-----------------ಬ್ರಾಹ್ಮಣಿಯಲ್ಲಿ-----------------ಸೂತ

ವೈಶ್ಯತಂದೆಗೆ--------------------ಕ್ಷತ್ತಿಯಳಲ್ಲಿ--------------------ಮಾಗಧ

ವೈಶ್ಯತಂದೆಗೆ-------------------ಬ್ರಾಹ್ಮಣಿಯಲ್ಲಿ----------------ವೈದೇಹ

ಶೂದ್ರತಂದೆಗೆ------------------ಬ್ರಾಹ್ಮಣಿಯಲ್ಲಿ---------------ಚಂಡಾಲ.

ಹೀಗೆ ಕ್ಷತ್ರಿಯಕುಲದಲ್ಲಿ ಅನ್ಯಜಾತಿಯವನು ಅಂದರೆ ಬ್ರಾಹ್ಮಣನಲ್ಲ, ಕ್ಷತ್ರಿಯ ವೈಶ್ಯ ಶೂದ್ರನಲ್ಲದವನು ಹುಟ್ಟುತ್ತಾನೆ. ಅವರಿಂದ 21 ತಲೆಮರೆಗಳವರೆಗೆ ನರಕ. ಕುಲಧರ್ಮವನ್ನು ನಾಶಮಾಡಿದವರು (ಕೆಟ್ಟ ವಿದ್ಯಾಭ್ಯಾಸ ಮಾಡಿಸುವುದರಿಂದ ಕುಲಪುರೋಹಿತ ಉಪದೇಶಕ ನಿಯಾಮಕರನ್ನು ಕೊಲ್ಲುವುದರಿಂದ ಕುಲಧರ್ಮನಾಶಮಾಡಿ ದಂತಾಗಿತ್ತೆ. ಹೀಗೆ ಮಾಡಿದವರು) ನರಕವನ್ನು ಹೊಂದುವರು.

ಅವತಾರಿಕೆಃ- ಸಂಕರ ಪುತ್ರರು ಹುಟ್ಟುವುದರಿಂದ ಆ ಕುಲದ ಪಿತೃಗಳಿಗೆಲ್ಲಾ ಹಾನಿ ಹೇಗೆಂದರೆ,

ಶ್ಲೋಕ।। ಸಂಕರೋ ನರಕಾಯೈವ ಕುಲಘ್ನಾನಾಂ ಕುಲಸ್ಯ ಚ।

ಪತಂತಿ ಪಿತರೋಹ್ಯೇಷಾಂ ಲುಪ್ತಪಿಂಡೋದಕ ಕ್ರಿಯಾ।।42।।

ಗೀತಾ .ಪ್ರ. ಸಂಕರಃ,ನರಕಾಯ, ಏವ, ಕುಲಘ್ನಾನಾಂ, ಕುಲಸ್ಯ, ಚ, ಪತಂತಿ, ಪಿತರಃ, ಹಿ ,ಏಷಾಂ, ಲುಪ್ತ- ಪಿಂಡೋದಕಕ್ರಿಯಾ।।

ಸಂಕರಃ= ಈ ವರ್ಣಸಾಂಕರ್ಯವು, ಕುಲಘ್ನಾನಾಂ= ಕುಲವನ್ನು ನಾಶಮಾಡುವವರಿಗೆ, ಚ= ಮತ್ತು, ಕುಲಸ್ಯ= ಆಕುಲ ದಲ್ಲಿ ಹುಟ್ಟಿದ ಪುತ್ರಪೌತ್ರಾದಿಗಳಿಗೆ, ನರಕಾಯ ಏವ (ಭವತಿ)=ನರಕಕ್ಕೋಸ್ಕರವೇ ಕಾರಣವಾಗುತ್ತದೆ, ಏಷಾಂ= ಕುಲವನ್ನು ನಾಶಮಾಡತಕ್ಕ ಜನರ, ಪಿತರಃ= ಪಿತೃಗಳು, ಲುಪ್ತಪಿಂಡೋದಕಕ್ರಿಯಾ= ಲೋಪವನ್ನು ಹೊಂದಿದ ಪಿಂಡ, ಉದಕ, ಕ್ರಿಯೆಯುಳ್ಳವರಾಗಿ, (ನರಕೇ=ನರಕದಲ್ಲಿ) ಹಿ,ಪತಂತಿ= ನಿಶ್ಚಯವಾಗಿ ಬೀಳುತ್ತಾರೆ.

ಗೀತಾವಿವೃತ್ತಿಃ ಕಃ ಕುಲಕ್ಷಯಕೃತೋ ದೋಷ ಇತ್ಯತ ಆಹ। ಕುಲಕ್ಷಯ ಇತಿ। ಸನಾತನಾಃ ಪರಂಪರಾಪ್ರಾಪ್ತಾಃ ಕುಲಧರ್ಮಾಃ ಕ್ಷತ್ರಿಯಾದಿ

ಕುಲಧರ್ಮಾಃ। ಉತ ಶಬ್ದೋಽಪ್ಯರ್ಥೇ। ಅವಶಿಷ್ಟಂ ಕೃತ್ಸ್ನಮಪಿ ಕುಲಧರ್ಮೋಽಭಿಭವತಿ ಅಧರ್ಮಾಕ್ರಾಂತಂ ಭವತಿ।। 40 ।। ವಾರ್ಷ್ಣೇಯ ವೃಷ್ಣಿಕುಲೋದ್ಭವ।। 41 ।। ಕುಲಸ್ಯ ಚೇತಿ ಪುತ್ರಪೌತ್ರಾದಿಸಂತಾನಸ್ಯ ಚೇತ್ಯರ್ಥಃ। ಏಷಂ ಕುಲಘ್ನಾನಾಂ ಪಿತರಃ ಲುಪ್ತಪಿಂಡಾಃ ಲುಪ್ತೋದಕಕ್ರಿಯಾಶ್ಚ ಸಂತಃ ಪತಂತಿ।। 42 ।।

ಶ್ರೀ ಹೆಚ್.ಎಸ್ ಸಂಕರ ಪುತ್ರರು ಪಿಂಡೋದಕ ಕೊಟ್ಟರೆ ಅವರನ್ನು ಹುಟ್ಟಿಸುವ ಪಿತೃಗಳಿಗೆಮುಟ್ಟುವುದಿಲ್ಲ. ಯಾಕೆಂದರೆ ಅನ್ಯಕ್ಷೇತ್ರವಾಯ್ತು. ಪಿಂಡ ದಾತೃಗಳು ಕುಲಪತಿಗಳ ಮಕ್ಕಳಲ್ಲವಾದ್ದರಿಂದ ಕುಲಪತಿಗಳಿಗೆ ಮುಟ್ಟುವುದಿಲ್ಲ. ಇದಕ್ಕೆ ಪ್ರಮಾಣಃ- ''ಅನ್ಯೋದರ್ಯೋ ಮನಸಾಪಿ ನಮಂತವ್ಯೋ ಮಮಾಯಂ ಪುತ್ರ ಇತಿ'' ಯಾಸ್ಕರ ವಚನ ಹೀಗೆ ಕುಲಘ್ನರು ವರ್ಣಸಂಕರ ಕಾರಕವಾದ ಯುದ್ಧಮಾಡುವುದರಿಂದ ಅನೇಕ ಕುಲಪಿತೃಗಳಿಗೆ ಪಿಂಡೋದಕಗಳಿಲ್ಲದೇ ನರಕವನ್ನು ಹೊಂದುವ ಪ್ರಸಂಗ ಬರುತ್ತೆ. ಹಿ= ಇದು ಶ್ರುತಿ ಸ್ಮೃತಿ ಪ್ರಸಿದ್ಧ ವಿಚಾರ. ಇನ್ನೊಂದು ವಿಧವಾಗಿ ಆ ಪಿತೃಗಳಿಗೆ ದುಃಖ ಏನೆಂದರೆ, ತಮ್ಮ ಮಕ್ಕಳು ಯುದ್ಧದಲ್ಲಿ ಹತವಾದ್ದರಿಂದ ವಂಶದಲ್ಲಿ ಔರಸಸಂತಾನ ನಿಂತು ಹೋಗಿ ಪಿಂಡ ಕೊಡುವವರಿಲ್ಲದೇ ಜರತ್ಕಾರು ಪಿತೃಗಳಿಗೆ ಆಗುತ್ತಿದ್ದಂತೆ ಸ್ವರ್ಗ ಭ್ರಂಶವೂ ನರಕವಾಸವೂ ಉಂಟಾಗುತ್ತೆ. ಇದಕ್ಕೆಲ್ಲಾ ಮೂಲಕಾರಣ ನಾವು ಯುದ್ಧದಲ್ಲಿ ಯೋಧರನ್ನು ಕೊಲ್ಲುವುದೇ:-

ಶ್ಲೋಕ:: ದೋಷೈರೇತೈಃ ಕುಲಘ್ನಾನಾಂ ವರ್ಣಸಂಕರಕಾರಕೈಃ।

ಉತ್ಸಾದ್ಯಂತೇ ಜಾತಿಧರ್ಮಾಃ ಕುಲಧರ್ಮಾಶ್ಚ ಶಾಶ್ವತಾಃ।।43।।

ಗೀ. ಪ್ರ. ಚಂ ದೋಷೈಃ, ಏತೈಃ, ಕುಲಘ್ನಾನಾಂ, ವರ್ಣಸಂಕರಕಾರಕೈಃ, ಉತ್ಸಾದ್ಯಂತೇ, ಜಾತಿಧರ್ಮಾಃ, ಕುಲಧರ್ಮಾಃ ಚ, ಶಾಶ್ವತಾಃ।। ಕುಲಘ್ನಾನಾಂ= ಕುಲವನ್ನು ನಾಶಮಾಡುತಕ್ಕ ಜನರ, ವರ್ಣಸಂಕರಕಾರಕೈಃ= ವರ್ಣಸಾಂಕರ್ಯವನ್ನುಂಟುಮಾಡತಕ್ಕ, ಏತೈಃ= ಪೂರ್ವೋಕ್ತ , ದೋಷೈಃ= ದೋಷಗಳಿಂದ, ಶಾಶ್ವತಾಃ= ಪರಂಪರೆಯಿಂದ ಬಂದ, ಕುಲಧರ್ಮಾಃ= ಕುಲಾಚಾರ ಧರ್ಮ ಗಳು, ಚ= ಮತ್ತು, ಜಾತಿಧರ್ಮಾಃ= ಕ್ಷತ್ರಿಯತ್ವ ಮೊದಲಾದ ಜಾತಿಯನ್ನು ನಿಮಿತ್ತಮಾಡಿಕೊಂಡು ಬಂದ ಧರ್ಮಗಳು, ಉತ್ಸಾದ್ಯಂತೇ= ನಾಶವಾಗುತ್ತವೆ.

ಗೀತಾವಿವೃತ್ತಿಃ ಉಕ್ತದೋಷಮುಪಸಂಹರತಿ। ದೋಷೈರಿತಿ ದ್ವಾಭ್ಯಾಂ। ಜಾತಿಧರ್ಮಾಃ ಕ್ಷತ್ರಿಯತ್ವಾದಿ ಜಾತಿಪ್ರಯುಕ್ತಾ ಧರ್ಮಾಃ ಕುಲಧರ್ಮಾಶ್ಚ ಶಾಶ್ವತಾಃ ಪರಂಪರಯಾ ಪ್ರಾಪ್ತಾಃ ।।43 ।।

ಶ್ಲೋಕ। ಉತ್ಸನ್ನ ಕುಲಧರ್ಮಾಣಾಂ ಮನುಷ್ಯಾಣಾಂ ಜನಾರ್ದನ।

ನರಕೇ ನಿಯತಂ ವಾಸೋ ಭವತೀತ್ಯನುಶುಶ್ರುಮ।।44।।

ಗೀತಾ ಪ್ರ. ಚಂ ಉತ್ಸನ್ನಕುಲಧರ್ಮಾಣಾಂ, ಮನುಷ್ಯಾಣಾಂ, ಜನಾರ್ದನ, ನರಕೇ, ನಿಯತಂ, ವಾಸಃ, ಭವತಿ, ಇತಿ, ಅನುಶುಶ್ರುಮ।। ಜನಾರ್ದನ= ಎಲೈ ಶ್ರೀಕೃಷ್ಣನೇ, ಉತ್ಸನ್ನಕುಲಧರ್ಮಾಣಾಂ= ನಾಶವನ್ನು ಹೊಂದಿದ ಕುಲ, ಜಾತಿ ಇವುಗಳ ಧರ್ಮಗಳುಳ್ಳ ,ಮನುಷ್ಯಾಣಾಂ= ಮನುಷ್ಯರಿಗೆ, ನಿಯತಂ= ತಪ್ಪದೆ, ನರಕೇ= ನರಕದಲ್ಲಿ, ವಾಸಃ= ವಾಸವು, ಭವತಿ= ಆಗುತ್ತದೆಂದು, ಅನುಶುಶ್ರುಮ= ದೊಡ್ಡವರಿಂದ ಕೇಳಿದ್ದೇವೆ.

ಗೀತಾವಿವೃತ್ತಿಃ ಉತ್ಸನ್ನಕುಲಧರ್ಮಾಣಾಂ ಉತ್ಸನ್ನಜಾತಿಧರ್ಮಾಣಾಂ ಚೇತ್ಯಪಿ ಜ್ಞೇಯಂ। ಅನುಶುಶ್ರುಮ ''ಪ್ರಾಯಶ್ಚಿತ್ತಮಕುರ್ವಾಣಾಃ ಪಾಪೇಷು ನಿರತಾ ನರಾಃ। ಅಪಶ್ಚಾತ್ತಾಪಿನಃ ಕಷ್ಟಾನ್ನಿರಯಾನ್ಯಾಂತಿ ದಾರುಣಾನ್'' ಇತ್ಯಾದಿ ವದದ್ಭಿರ್ವೃದ್ಧೈಃ ಶ್ರುತವಂತಃ ಸ್ಮಃ ।।44 ।।

ಶ್ರೀ ಹೆಚ್.ಎಸ್. ಹೀಗೆ ಕುಲಶಿಕ್ಷಕರಾದ ಯೋಧರ ನಾಶದಿಂದ ಸಕಲಜಾತಿ ಧರ್ಮವೂ ಕುಲಧರ್ಮವೂ ಪರಂಪರೆ ಯಾಗಿ ಬಂದ ಸದಾಚಾರಗಳೆಲ್ಲವೂ ಸಂಪೂರ್ಣವಾಗಿ ನಾಶಹೊಂದುವವು. ಹೇ ಜನಾರ್ದನಾ! ಕುಲಧರ್ಮವನ್ನು ಮೀರಿ ನಡೆದ ಮನುಷ್ಯರಿಗೆಲ್ಲಾ ನಿಶ್ಚಯವಾಗಿ ನರಕದಲ್ಲಿ ವಾಸವಾಗುತ್ತದೆಂದು ನಾವು ಶ್ರುತಿಸ್ಮೃತಿಗಳಲ್ಲಿ ಸ್ಪಷ್ಟವಾಗಿ ಕೇಳಿದ್ದೇವೆ.

ಶ್ಲೋಕ। ಅಹೋ ಬತ ಮಹತ್ಪಾಪಂ ಕರ್ತುಂ ವ್ಯವಸಿತಾ ವಯಂ।

ಯದ್ರಾಜ್ಯ ಸುಖಲೋಭೇನ ಹಂತುಂ ಸ್ವಜನಮುದ್ಯತಾಃ।।45।।

ಗೀ. ಪ್ರ. . ಅಹೋ, ಬತ, ಮಹತ್, ಪಾಪಂ, ಕರ್ತುಂ, ವ್ಯವಸಿತಾಃ, ವಯಂ, ಯತ್, ರಾಜ್ಯಸುಖಲೋಭೇನ, ಹಂತುಂ, ಸ್ವಜನಂ,

ಉದ್ಯತಾಃ॥

ರಾಜ್ಯಸುಖಲೋಭೇನ= ರಾಜ್ಯಪ್ರಾಪ್ತಿಯಿಂದ ಆಗತಕ್ಕ ಸುಖದ ಆಶೆಯಿಂದ, ಸ್ವಜನಂ= ಬಂಧುಗಳನ್ನು, ಹಂತುಂ= ಸಂಹಾರಮಾಡುವುದಕ್ಕೆ, ವಯಂ= ನಾವು, ಉದ್ಯತಾಃ= ಉದ್ಯುಕ್ತರಾಗಿರುತ್ತೇವೆ (ಇತಿ) ಯತ್= ಎಂಬುವುದು ಯಾವುದೋ, ಮಹತ್= ಮಹಾ ಪಾಪಕರವಾದ, ತತ್= ಆ ಉದ್ಯೋಗವನ್ನು , ಕರ್ತುಂ= ಮಾಡುವುದಕ್ಕೋಸ್ಕರ, ವಯಂ =ನಾವು, ವ್ಯವಸಿತಾಃ= ನಿಶ್ಚಯವುಳ್ಳವರಾಗಿರುವೆವುಎಂಬುವುದು, ಅಹೋಬತ= ಮಹಾಕಷ್ಟವು.

ಗೀತಾವಿವೃತ್ತಿಃ ಏವಂ ಬಂಧುವಧಸ್ಯ ದೋಷಹೇತುತ್ವಾಧ್ಯವಸಾಯೇನ ಸಂತಪ್ಯಮಾನೋಽರ್ಜುನ ಆಹ॥ ಅಹೋ ಬತೇತಿ॥ ರಾಜ್ಯಸುಖಲೋಭೇನ ಸ್ವಜನಂ ಹಂತುಂ ವಯಮುದ್ಯತಾ ಇತಿ ಯತ್ತದೇತನ್ಮಹತ್ಪಾಪಂ ಕರ್ತುಂ ವ್ಯವಸಿತಾ ನಿಶ್ಚಯವಂತೋ ವಯಂ। ಅಹೋ ಬತ ಮಹಾಕಷ್ಟಮಿತಿ॥ 45 ॥

ಶ್ರೀಹೆಚ್.ಎಸ್. ಅಯ್ಯೋ ಸ್ವಲ್ಪ ದುಡುಕಿ ಏನಾದರೂ ಬಾಣ ಹೂಡಿ ಯುದ್ಧಾರಂಭಿಸಿ ಬಿಟ್ಟಿದ್ದರೆ ಎಂಥಾ ಮಹತ್ಪಾಪವು ನಮಗೆ ಬರುತ್ತಿತ್ತು, ಎಂಥಾ ಘೋರವಾದ ಕೊಲೆಯನ್ನು ಮಾಡಬೇಕೆಂದು ನಿಶ್ಚಯಿಸಿದ್ದೆವು. ಅಬ್ಬಬ್ಬಾ! ಎಂದು ಅರ್ಜುನನು ಬಿಡುಸುಯ್ದನು.

ವಿಶೇಷ:- ಈ ಶ್ಲೋಕಗಳಲ್ಲಿ ಹಿಂದಿನ 4 ಶ್ಲೋಕಗಳಲ್ಲಿ ಹೇಳಿದ್ದ ಪ್ರಮೇಯವನ್ನು ಸಂಗ್ರಹಿಸಿ ತನ್ನ ಉಪಪಾದನೆಗೆ ಪ್ರಮಾಣವು (ಶಾಸ್ತ್ರವು) ಮೂಲಭೂತವಾಗಿದೆ ಎಂಬುದನ್ನು ತೋರಿಸಲು ''ಅನುಶುಶ್ರುಮ'' ಎಂಬ ಶಬ್ದವನ್ನು ಪ್ರಯೋಗಿಸಿದ್ದಾನೆ. ಅನುಶುಶ್ರುಮ ಎಂದರೆ ವೇದಶಾಸ್ತ್ರವಚನಗಳನ್ನು ದೊಡ್ಡವರಿಂದ ಕೇಳಿದ್ದೇವೆಂದು ಅರ್ಥ. ಆ ಪ್ರಮಾಣವಾಕ್ಯಗಳಾವುವೆಂದರೆ ''ಪ್ರಾಯಶ್ಚಿತ್ತಮಕುರ್ವಾಣಾಃ ಪಾಪೇಷು ನಿರತಾನರಾಃ। ಅಪಶ್ಚಾತ್ತಾಪಿನಃ ಕಷ್ಟಾನ್ನಿರ ಯಾನ್ಯಾಂತಿ ದಾರುಣಾನ್॥''

ಆದ್ದರಿಂದ ಅರ್ಜುನನು ಸುಳ್ಳು ಹೇಳಲಿಲ್ಲ, ಆದರೂ ತನ್ನ ವಿರುದ್ಧ ನಿಶ್ಚಯಕ್ಕೆ ಸಕಲ ಜ್ಞಾನಿಗಳನ್ನು ಎಳೆದುಕೊಂಡನು. ಹೇಗೆಂದರೆ ಅನುಶುಶ್ರುಮ ಎಂದು ಹೇಳಿರುವುದರಿಂದ ವೇದ ಶಾಸ್ತ್ರಗಳನ್ನು ಉದಾಹರಿಸಿ ಸಯುಕ್ತಿಕವಾಗಿ ಅರ್ಥ ಮಾಡುವುದನ್ನು ಜ್ಞಾನಿಗಳ ಮುಖದಿಂದ ಕೇಳಿದ್ದೇವೆ ಎಂದರ್ಥ।

ಈ ವಿಪರೀತ ನಿಶ್ಚಯವು ಇವನಲ್ಲಿ ತುಂಬಾ ದೃಢವಾಗಿದೆ ಎಂಬುದು ಅಹೋ ಬತ ಎಂಬ ವಾಕ್ಯದಿಂದ ಗೊತ್ತಾಗುತ್ತೆ. ಅರ್ಜುನನ ಮಿಥ್ಯಾಜ್ಞಾನವು ಭೂಕಂಪದಿಂದ ಮನೆ ತಲೆಕೆಳಗಾಗುವಂತೆ ಎಲ್ಲಾಜ್ಞಾನವನ್ನೂ ತಲೆಕೆಳಗು ಮಾಡಿ ತಾನು ಕೇಳಿದ ಶಾಸ್ತ್ರಗಳು, ತಾನು ಸೇವೆ ಮಾಡಿದ ಬ್ರಹ್ಮಜ್ಞಾನಿಗಳು ಎಲ್ಲರನ್ನೂ ತನ್ನ ಕಡೆಗೆಳೆಯುವಂತೆ ಮಾಡಿತು. ಆದ್ದರಿಂದಲೇ ಅವನು ಅಯ್ಯೋ! ಕಷ್ಟ! ಅಬ್ಬಬ್ಬಾ ! ಎಂಥಾ ಪಾಪವನ್ನು ಮಾಡಲು ನಿಶ್ಚಯಿಸಿದ್ದೆವು. ಎಂದರೆ ಇನ್ನು ನೆಗೆದುಬಿದ್ದರೂ ಮಾಡಲ್ಲವೆಂದು ಹೇಳಿಬಿಟ್ಟನು.

ಅಹೋ ಬತ ಎನ್ನುವುದಕ್ಕೆ ಇನ್ನೂ ಕೆಲವು ಅರ್ಥಗಳಿವೆ. (1) ಅರ್ಜುನಾ! ನಿನ್ನ ಜನ್ಮಕ್ಕೆ ಧಿಕ್ಕಾರ ಎಂದು ತನ್ನನ್ನೇ ನಿಂದೆ ಮಾಡಿಕೊಂಡನೆಂದರ್ಥ. (2) ಅಯ್ಯೋ ಪಾಪ! ಏನು ಅನ್ಯಾಯ ಮಾಡಿಬಿಡುತ್ತಿದ್ದೆವು. ಬಾಣವನ್ನು ಬಿಟ್ಟಿದ್ದರೆ ದುರ್ಯೋಧನಾದಿಗಳು ಸತ್ತೇ ಹೋಗಿಬಿಡುತ್ತಿದ್ದರಲ್ಲಾ ಎಂಬ ಕನಿಕರವನ್ನು ತೋರಿಸುತ್ತೆ. (3) ವಿಸ್ಮಯ:- ಅಲ್ಲಾ ಇಂಥಾ ಪುಣ್ಯವಂತರಾಗಿ ಇಂಥಾ ಪಾಪಕ್ಕೆ ಮನಸ್ಸು ಮಾಡಿದ್ದೆವಲ್ಲಾ ಎಂದು ಆಶ್ಚರ್ಯವು. (4) ಶೋಕಾತಿಶಯ:- ಅಯ್ಯಯ್ಯೋ ಎಂಥಾ ಪಾಪಮಾಡುತ್ತಿದ್ದೆನೆಂದು ತನ್ನ ದುಸ್ಥಿತಿಚಿಂತೆಯಿಂದ ತನಗಾದ ವ್ಯಸನಾಧಿಕ್ಯವನ್ನು ಸೂಚಿಸುತ್ತಾನೆ.

ಶ್ಲೋಕ। ಯದಿ ಮಾಮಪ್ರತೀಕಾರಮಶಸ್ತ್ರಂ ಶಸ್ತ್ರಪಾಣಯಃ।
ಧಾರ್ತರಾಷ್ಟ್ರಾ ರಣೇ ಹನ್ಯುಸ್ತನ್ಮೇ ಕ್ಷೇಮತರಂ ಭವೇತ್॥46॥

ಗೀ. ಪ್ರ. ಪ ಯದಿ, ಮಾಂ, ಅಪ್ರತೀಕಾರಂ, ಅಶಸ್ತ್ರಂ, ಶಸ್ತ್ರಪಾಣಯಃ, ಧಾರ್ತರಾಷ್ಟ್ರಾಃ, ರಣೇ, ಹನ್ಯುಃ, ತತ್, ಮೇ, ಕ್ಷೇಮತರಂ, ಭವೇತ್॥

ಅಪ್ರತೀಕಾರಂ= ಅಪಕಾರವನ್ನು ಮಾಡಿದರೂ ಪ್ರತೀಕಾರವನ್ನು ಮಾಡದೇ ಇರುವ, ಅಶಸ್ತ್ರಂ= ಶಸ್ತ್ರರಹಿತನಾದ, ಮಾಂ= ನನ್ನನ್ನು, ಯದಿ= ಒಂದು ಪಕ್ಷದಲ್ಲಿ, ಶಸ್ತ್ರಪಾಣಯಃ= ಶಸ್ತ್ರಧಾರಿಗಳಾದ, ಧಾರ್ತರಾಷ್ಟ್ರಾಃ= ದುರ್ಯೋಧನಾದಿ ಗಳು, ರಣೇ= ಯುದ್ಧದಲ್ಲಿ, ಹನ್ಯುಃ= ಕೊಂದರೂ, ತತ್= ಆ ಸಂಹಾರವು, ಮೇ= ನನಗೆ, ಕ್ಷೇಮತರಂ= ಅತ್ಯಂತ ಹಿತಕರವಾದುದು, ಭವೇತ್= ಆಗುವುದು.

ಗೀತಾವಿವೃತ್ತಿಃ ಏವಂ ಸಂತಪ್ತಃ ಸನ್ಮೃತಿಮೇವಾರ್ಥಯಮಾನ ಆಹ। ಯದೀತಿ। ಅಕೃತಪ್ರತೀಕಾರಮಶಸ್ತ್ರಂ ತೂಷ್ಣೀಂ ಆಸೀನಂ ಮಾಂ

ಯದಿ ಶಸ್ತ್ರಪಾಣಯೋ ಧಾರ್ತರಾಷ್ಟ್ರಾ ರಣೇ ಹನ್ಯುಸ್ತರ್ಹಿ ತದ್ಧನನಂ ಮೇ ಕ್ಷೇಮತರಂ ಅತ್ಯಂತ ಹಿತಮೇವ ಭವೇತ್। ಬಂಧುವಧದೋಷಾಭಾವಾದ್ರಣೇ ಹನನೇನ ಗತಿಸಂಭವಾಚ್ಚೇತಿ ಭಾವಃ ।।46।।

ಶ್ರೀಹೆಚ್.ಎಸ್.ಹೀಗೆ ನೀನು ನಿಶ್ಚಯಮಾಡಿ ಯುದ್ಧಮಾಡದೇ ಸುಮ್ಮನೇ ಕುಳಿತರೆ ಶತ್ರುಗಳು ನಿನಗೆ ನಮಸ್ಕರಿಸಿ ಮನೆಗೆ ಹೋಗುತ್ತಾರೆಯೇ? ನೀನು ಯುದ್ಧಬೇಡವೆಂದರೂ ಶಸ್ತ್ರಪಾಣಿಗಳಾದ ಅವರು ನಿನ್ನಮೇಲೆ ಬಿದ್ದರೆ ನಿನ್ನದೇಹ ಛಿನ್ನಭಿನ್ನವಾಗುತ್ತಲ್ಲಾ? ಸಾಯುವಿಯೆಲ್ಲಾ? ಅದಕ್ಕೇನು ಹೇಳುವೆ? ಎಂದರೆ ಹೇಳುತ್ತಾನೆ.ನಾನೇನೋ ನಿಶ್ಚಯ ಮಾಡಿದ್ದೇನೆ. ರಾಜ್ಯದಾಶೆ ಮತ್ತುಸುಖಾಭಿಲಾಶೆ ಇದರಿಂದ ಪ್ರೇರಿತನಾಗಿ ನಾನು  ಈ ನನ್ನ ಸ್ವಜನರನ್ನು ಕೊಲ್ಲುವುದಕ್ಕೆ ಇದುವರೆಗೂ ಮಾಡಿದ ನನ್ನ ಯತ್ನವೆಲ್ಲಾ ಮಹತ್ಪಾಪಜನಕ. ಇದು ಕೇವಲ ಅನ್ಯಾಯ. ಈ ವಿಷಯದಲ್ಲಿನಾನು ತುಂಬಾ ಪರಿತಾಪ ಪಡುತ್ತೇನೆ. ಶಸ್ತ್ರಪಾಣಿಗಳಾದ ಧಾರ್ತರಾಷ್ಟ್ರರು ಮುಂದೆ ನುಗ್ಗಿ ಈ ರಣಭೂಮಿಯಲ್ಲಿನನ್ನನ್ನು ಕೊಂದರೂ ಸರಿ. ನಾನು  ನಾನು ಶಸ್ತ್ರವನ್ನು ಹಿಡಿಯುವುದೂ ಇಲ್ಲಪ್ರತೀಕಾರವನ್ನು ಮಾಡುವುದೂ ಇಲ್ಲ. ಹಾಗೆ ಶಸ್ತ್ರರಹಿತನಾಗಿ ನನ್ನನ್ನು ರಾಜ್ಯ ಸುಖ ಲೋಭದಿಂದ ಸ್ವಜನರನ್ನು ಕೊಲ್ಲುವುದಕ್ಕೆ ಉದ್ಯುಕ್ತರಾದ ಮೂಢರಾದ ಧಾರ್ತರಾಷ್ಟ್ರರು ತಮ್ಮ ಕೈಯಿನ ಶಸ್ತ್ರದಿಂದ ಈ ಯುದ್ಧ ಭೂಮಿಯಲ್ಲಿ ನನ್ನನ್ನು ಕೊಂದರೆ ಆ ವಿಧವಾದ ಮರಣವು ನನಗೆ ಅತ್ಯಂತ ಮಂಗಳದಾಯಕವು. ಅದು ನನ್ನ ದುರಾಲೋಚನೆಗೆ ಸರಿಯಾದ ಪ್ರಾಯಶ್ಚಿತ್ತವು ಎಂದರೆ ಬಂಧುವಧೆ ನಾನು ಮಾಡಿದ ದೋಷಕ್ಕೆ ಗುರಿಯಾಗದೇ ರಣರಂಗದಲ್ಲಿ ಸಾವು ಬರುವುದರಿಂದ ಹಿಂದೆ ಮಾಡಿದ ದೋಷಕ್ಕೆ ಗುರಿಯಾಗದೇ ರಣರಂಗದಲ್ಲಿ ಸಾವು ಬರುವುದರಿಂದ ಹಿಂದೆ ಮಾಡಿದ ದೋಷ ನನಗೆ ಆಗುವ ಸಂಹಾರರೂಪ ಪ್ರಾಯಶ್ಚಿತ್ತದಿಂದ ಪರಿಹಾರವಾಗುತ್ತೆ. ನಾನು ಯುದ್ಧಮಾಡದೆ ಸಾಯುವುದರಿಂದ ಹೊಸದೋಷ ಬರಲಿಲ್ಲ. ರಣರಂಗದಲ್ಲಿ  ಸಾವು ಬರುವುದರಿಂದ ಹಿಂದೆ ಮಾಡಿದ ದೋಷ-ನನಗೆ ಆಗುವ ಸಂಹಾರರೂಪ ಪ್ರಾಯಶ್ಚಿತ್ತದಿಂದ ಪರಿಹಾರವಾಗುತ್ತೆ. ನಾನು ಯುದ್ಧಮಾಡದೇ ಸಾಯುವುದರಿಂದ ಹೊಸದೋಷ ಬರಲಿಲ್ಲ. ರಣದಲ್ಲಿ ಸಾವು ಬರುವುದರಿಂದ ಉತ್ತಮಗತಿ  ಆಗುತ್ತೆ. ಆದ್ದರಿಂದ ಅವರಿಂದ ನನಗೆ ಬರುವ ಸಾವು ಅತ್ಯಂತ ಹಿತಕರವು.

ಸಂಜಯ ಉವಾಚ:-

ಶ್ಲೋಕ ಏವಮುಕ್ತ್ವಾರ್ಜುನಸ್ಸಂಖ್ಯೇ ರಥೋಪಸ್ಥ ಉಪಾವಿಶತ್।

ವಿಸೃಜ್ಯ ಸಶರಂ ಚಾಪಂ ಶೋಕಸಂವಿಗ್ನಮಾನಸಃ।।47।।

ಗೀ. ಪ್ರ. ಪ.	ಏವಂ, ಉಕ್ತ್ವಾ , ಅರ್ಜುನಃ, ಸಂಖ್ಯೇ, ರಥೋಪಸ್ಥೇ, ಉಪಾವಿಶತ್, ವಿಸೃಜ್ಯ , ಸಶರಂ, ಚಾಪಂ, ಶೋಕಸಂವಿಗ್ನಮಾನಸಃ।।

ಸಂಜಯನು ಹೇಳಿದನು. ಅರ್ಜುನಃ=ಅರ್ಜುನನು, ಏವಂ=ಈಪ್ರಕಾರವಾಗಿ, ಉಕ್ತ್ವಾ=ಹೇಳಿ, ಸಶರಂ =ಬಾಣದಿಂದ ಕೂಡಿದ, ಚಾಪಂ=ಧನುಸ್ಸನ್ನು, ವಿಸೃಜ್ಯ=ಬಿಟ್ಟು, ಶೋಕಸಂವಿಗ್ನಮಾನಸಃ=ದುಃಖದಿಂದ ಕೂಡಿದ ಮನಸ್ಸುಳ್ಳವನಾಗಿ ಸಂಖ್ಯೇ=ಯುದ್ಧದಲ್ಲಿ, ರಥೋಪಸ್ಥೇ= ರಥದ ಮಧ್ಯದಲ್ಲಿ, ಉಪಾವಿಶತ್=ಕುಳಿತನು.

ಗೀತಾವಿವೃತ್ತಿಃ ತತಃ ಕಿಂ ಜಾತಮಿತಿ ಧೃತರಾಷ್ಟ್ರಹಾರ್ದ ಪರಿಹರತಿ। ಸಂಜಯ ಇತಿ। ಸಂಖ್ಯೇ ರಣೇ ಸ್ಥೋಪಸ್ಥೇ ರಥಮಧ್ಯೇ ಉಪಾವಿಶತ್। ಕಥಂ ಶೋಕೇನ ಕಂಪಿತಚಿತ್ತಃ ಸನ್ ಸಶರಂ ಚಾಪ ವಿಸೃಜ್ಯೇತಿ।। 46।।

<u>।।ಇತಿ ಶ್ರೀಮದ್ಗೀತಾರ್ಥಸಂಗ್ರಹೇ ಶ್ರೀಮದ್ರಾಘವೇಂದ್ರಯತಿಕೃತೇ ಪ್ರಥಮೋಧ್ಯಾಯಃ।।</u>

ಶ್ರೀಹೆಚ್.ಎಸ್.ಅರ್ಜುನನು ಯುದ್ಧಭೂಮಿಯಲ್ಲಿ ಹೀಗೆ ಮಾತನಾಡಿ ಧನುರ್ಬಾಣಗಳನ್ನು ಬಿಸುಟು ಎಂಥಾ ಪಾಪ ಕೆಲಸವನ್ನು ಮಾಡುತ್ತಿದ್ದೆ ಎಂಬ ಶೋಕದಿಂದ ಕಂಪಿತ ಚಿತ್ತವುಳ್ಳವನಾಗಿ ರಥಮಧ್ಯದಲ್ಲಿಕುಳಿತುಬಿಟ್ಟನು.

ವಿಶೇಷ:- ಈ ಶ್ಲೋಕದಲ್ಲಿ ಅರ್ಜುನನು ಕುಳಿತ ಪ್ರಕಾರವನ್ನು ವರ್ಣಿಸಿರುವರು. ಅದನ್ನು ವಿಮರ್ಶಿಸಿದರೆ ಅರ್ಜುನನ ಪೂರ್ವಜ್ಞಾನವು ರಾಹುವಿನಿಂದ ಗ್ರಸ್ತವಾದ ಸೂರ್ಯನಂತೆ  ಅಗಾಧ ಮೋಹದಿಂದ ಪರಿವೃ- ತವಾಗಿ ಹೋಗಿತ್ತೆಂದು ಗೊತ್ತಾಗುತ್ತೆ. ಹೇಗೆಂದರೆ:-

1) ಸಂಖ್ಯೇ= ಯುದ್ಧದಮಧ್ಯೆ ಕುಳಿತ ಎಂದರೆ ಹೊಡೆಯಲು ಬಾಣಹೂಡಿ ವಿವರವನ್ನು ಶತ್ರುಗಳು ಹುಡುಕುತ್ತಿರುವ ವೇಳೆಯಲ್ಲಿ

ಕುಳಿತ.

2) ರಥೋಪಸ್ಥೇ= ರಥ ಮಧ್ಯದಲ್ಲಿ ಎಂದರೆ ಬಾಣಗಳು ತಡೆಯಿಲ್ಲದೇ ಬಂದು ಬೀಳುವ ಸ್ಥಳದಲ್ಲಿ ಕುಳಿತಿ ದ್ದಾನೆ.

3) ವಿಸೃಜ್ಯ ಸಶರಂ ಚಾಪಂ= ರಥದ ಮಧ್ಯೆ ಕುಳಿತಿದ್ದರೂ ಕೈಲಿ ಧನುರ್ಬಾಣಗಳನ್ನು ಹಿಡಿದಿದ್ದರೆ ವಿಚಾರ ಇರುತ್ತಿರಲಿಲ್ಲ. ಆದರೆ ಬಾಣಸಹಿತ ಬತ್ತಳಿಕೆಗಳನ್ನೂ ಬಿಲ್ಲನ್ನೂ ಬಿಸಾಡಿದ್ದಾನೆ.

4) ಉಪಾವಿಶತ್= ಬಾಣ ಬೀಳತಕ್ಕ ರಥದ ಮಧ್ಯೆ ಕುಳಿತಿದ್ದರೂ ಬಾಣ ಬರುವಾಗ ಏಳಬಹುದಲ್ಲಾ ಎಂದರೆ ಠೀವಿಯಿಂದ ಕುಳಿತಿಲ್ಲ. ಶತ್ರು ಛಿದ್ರವನ್ನು ಕಂಡುಹಿಡಿಯುವ ರೀತಿಯಲ್ಲೂ ಕುಳಿತಿಲ್ಲ. ಶತ್ರುಗಳ ಬಾಣಗಳು ಬಂದು ಅನಾಯಾಸವಾಗಿ ತಗಲುವಂತೆ ವಿಶ್ರಾಂತಿ ಹೊಂದಿದವನು ಕುಳಿತಂತೆ ಕುಳಿತಿರುವನು.

5) ಹೋಗಲಿ ಬಾಣಗಳು ಅರಿಗಳ ಕಡೆಯಿಂದ ಬಂದರೆ ಕ್ಷಿಪ್ರದಲ್ಲಿ ಪ್ರತೀಕಾರ ಮಾಡುವುದಕ್ಕಾಗಲೀ, ಆತ್ಮ ರಕ್ಷಣೆ ಮಾಡಿಕೊಳ್ಳುವುದಕ್ಕಾಗಲೀ ಪ್ರಯೋಜಕವಾದ ಜಾಗರೂಕ ಬುದ್ಧಿಯುಳ್ಳವನಾಗಿದ್ದಾನೇನು ಎಂದರೆ ಅದೂ ಇಲ್ಲ. ''ಶೋಕಸಂವಿಗ್ನಮಾನಸಃ'' =ಚಿತ್ತವು ಡಿಲ್ಲಿಗೆ ಹೋಗಿದೆ. ಅಯ್ಯೋ! ಎಂಥಾ ಪಾಪ ಮಾಡುಬಿಡುತ್ತಿದ್ದೆ. ಈ ಅನ್ಯಾಯ ಆಲೋಚನೆ ಮಾಡಿದ್ದಕ್ಕೆ ಬಂದಿರುವ ಪಾಪಕ್ಕೆ ದರ್ಭೆಯಿಂದ ಪ್ರಾಯಶ್ಚಿತ್ತವೇ, ದುಡ್ಡಿನಿಂದಲೇ, ಉಪವಾಸದಿಂದಲೇ, ಯಾತ್ರೆಯಿಂದಲೇ, ಯಾರನ್ನು ಕೇಳಲಿ ಯಾರು ಹೇಳುವ ರು ಎಂದು ನಾನಾಬಗೆ ಒಳಗೆ ಅಳುತ್ತಾ ಚಿಂತಿಸುತ್ತಿರುವನು.

6) ಆದರ ಜೊತೆಗೆ ಶತ್ರುಗಳು ಸದ್ಯಕ್ಕೆ ನನ್ನನ್ನು ಕೊಂದರೆ ಪ್ರಾಯಶ್ಚಿತ್ತವಾಗಿ ಪಾಪವೆಲ್ಲಾ ಹೋಗಿ ಸ್ವರ್ಗವಾಗುತ್ತೆ ''ಶಸ್ತ್ರಪೂತಾ ದಿವಂಗತಾ'' (ಭಾ. ಶಾಂತಿ. 97)

> ತಸ್ಯ ಶಸ್ತ್ರಾಣಿ ಯಾವಂತಿ ತ್ವಚಂ ಭಿಂದಂತಿ ಸಂಯುಗೇ।
>
> ತಾವತಃ ಸೋಶ್ನುತೇ ಲೋಕಾನ್ ಸರ್ವಕಾಮದುಹೋಽಕ್ಷಯಾನ್॥

ಯದಸ್ಯ ರುಧಿರಂ ಗಾತ್ರಾತ್ ಆಹವೇ ಸಂಪ್ರವರ್ತತೇ ಸಹತೇನೈವ ಪಾಪೇನ ಸರ್ವಪಾಪೈಃ ಪ್ರಮುಚ್ಯತೇ॥ (ಭಾ. ಶಾಂ.ಪ 47ನೇ ಅಧ್ಯಾಯ) ಎಂದು ವಚನಗಳಿವೆ. ಇನ್ನೂ ನನ್ನನ್ನು ಕೊಲ್ಲಲು ಬರಲಿಲ್ಲವಲ್ಲಾ ಬರಬಾರದೇ ಎಂದು ಮರಣವನ್ನು ನಿರೀಕ್ಷಿಸುತ್ತಿರುವನು.

ಪ್ರಶ್ನೆ:-ಹಾಗೆ ಕುಳಿತ ಅರ್ಜುನನ್ನು ಕೌರವರು ಏಕೆ ಕೊಲ್ಲಲಿಲ್ಲ?

ಉತ್ತರ:- 1) ಉಭಯ ಪಕ್ಷದ ಸೇನಾನಾಯಕರುಗಳು ಇದಕ್ಕೆ ಮೊದಲು ಶಸ್ತ್ರಬಿಟ್ಟು ಉತ್ಸಾಹ ರಹಿತರಾಗಿ ಕುಳಿತವರ ಮೇಲೆ ಬಾಣ ಪ್ರಯೋಗಿಸಬಾರದೆಂದು ಸಮಯ ಮಾಡಿಕೊಂಡಿದ್ದರು. ಇನ್ನು ಯುದ್ಧಾರಂಭವಾದ್ದರಿಂದ ಮುಂದೆ ಅಭಿಮನ್ಯುವಿನ ಸಂಹಾರದಲ್ಲಿ ಸಮಯವನ್ನು ಮೀರಿದಂತೆ ಈಗ ಆ ನಿಯಮವನ್ನು ಮೀರಿಲ್ಲ.

2) ಸರ್ವಜ್ಞನಾದ ಜನಾರ್ದನನೇ ತನ್ನ ಭಕ್ತನ ದುಸ್ಥಿತಿಯು ಶತ್ರುಗಳಿಗೆ ಕಾಣಬಾರದೆಂದು ಚಕ್ರಮರೆ ಮಾಡಿ ಸೂರ್ಯ ಪ್ರಕಾಶವನ್ನು ಮರೆಸಿದಂತೆ ದೇದಿಪ್ಯಮಾನವಾದ ತನ್ನ ದಿವ್ಯ ಪ್ರತಿಭೆಯಿಂದ ಅರ್ಜುನನ ಸ್ವರೂಪವು ಅಲ್ಲಿ ಯಾರಿಗೂ ತಿಳಿಯದಂತೆ ರಥ ಮುಂಭಾಗದಲ್ಲಿ ದರ್ಪದಿಂದ ಕುಳಿತು ವಿಡಂಬನ ಚಾತುರ್ಯವನ್ನು ತೋರಿಸುತ್ತಿದ್ದನು. ಪಾರ್ಥನನ್ನು ನೋಡಿದವರು ಪಾರ್ಥನು ತಮ್ಮನ್ನು ಕೊಲ್ಲಲು ಗಾಂಡೀವ ಏಕೆಂದು ಬಿಸಾಡಿರುವನೇನೋ ಎಂದು ತರ್ಕಿಸುತ್ತಿದ್ದರು. ಹೀಗೆ ಶ್ರೀಕೃಷ್ಣನ ರಕ್ಷಾಕವಚದಿಂದ ಗುಪ್ತನಾದ್ದರಿಂದಲೂ ಪಾರ್ಥನು ಯಾವ ಅಪಾಯಕ್ಕೂ ಗುರಿಯಾಗಲಿಲ್ಲ.

ಓಂ ತತ್ಸದಿತಿ ಭಗವದ್ಗೀತಾಸೂಪನಿಷತ್ಸು ಬ್ರಹ್ಮ ವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನ ಸಂವಾದೇ ಅರ್ಜುನ ವಿಷಾದಯೋಗೋನಾಮ ಪ್ರಥಮೋಧ್ಯಾಯಃ। ಸಂಪೂರ್ಣಂ॥

ಶ್ರೀ ಹನುಮದ್‌ಭೀಮ ಸುಮಧ್ವಹಂಸಾಂತರ್ಯಾಮಿನ್ ಶ್ರೀ ನರಹರಿ ರಾಮಕೃಷ್ಣ ವೇದವ್ಯಾಸಾಯ ನಮಃ

॥ಶ್ರೀ ಮಧ್ವಾಂತರ್ಯಾಮಿನ್ ಶ್ರೀಕೃಷ್ಣಾರ್ಪಣಮಸ್ತು॥